ದೆಹಲಿ ಕರ್ನಾಟಕ ಸಂಘದ

# ಅಭಿಮತ

ಏಪ್ರಿಲ್ 2011

ಬೆಲೆ ರೂ. 1.



ಈ ಜೀವನ ಬೇವು ಬೆಲ್ಲ

ಬಲ್ಲವರಿಗೆ ನೋವೇ ಇಲ್ಲ

# "ಪದ್ಮಭೂಷಣ"–ಆರ್.ಕೆ. ಶ್ರೀಕಂಠನ್ ಅವರಿಗೆ ಆತ್ಮೀಯ ಅಭಿನಂದನೆ




"ಪ್ರಶಸ್ತಿಗಾಗಿ ಸಂಗೀತಾಭ್ಯಾಸವಲ್ಲ, ಆತ್ಮತೃಪ್ತಿಗಾಗಿ ಕಲೆ, ಸಾಧನೆ. ಪ್ರಶಸ್ತಿ ಸಂದಿರುವುದು ನನಗಲ್ಲ, ಸಂಗೀತ ಕ್ಷೇತ್ರಕ್ಕೆ ಹಾಗೂ ಕರ್ನಾಟಕ ರಾಜ್ಯಕ್ಕೆ ಸಂದ ಗೌರವ. ನಾನು ಕೇವಲ ನಿಮಿತ್ತ ಮಾತ್ರ. ತ್ಯಾಗರಾಜರ ಸಂಗೀತ ಪರಂಪರೆ ನನ್ನನ್ನು ಬೆಳೆಸಿದೆ. ಕಡೆಯ ಉಸಿರಿರುವರೆಗೂ ಕಲೆಗಾಗಿಯೇ ನನ್ನ ಜೀವನ ಮುಡಿಪು. 92ರ ಈ ಹರೆಯದಲ್ಲಿ ಪ್ರಶಸ್ತಿ ಸಂದಿರುವುದು ಸಂತಸ ತಂದಿದೆ" ಎಂದು "ಪದ್ಮಭೂಷಣ" ಆರ್.ಕೆ. ಶ್ರೀಕಂಠನ್ ಅವರು ತಮ್ಮ ಮನದಾಳದ ಸಂತಸವನ್ನು ದೆಹಲಿ ಕನ್ನಡಿಗರೊಡನೆ ಹಂಚಿಕೊಂಡರು. ರಾಷ್ಟ್ರದ ಅತ್ಯುನ್ನತ ನಾಗರೀಕ ಪ್ರಶಸ್ತಿಯನ್ನು ಸಂಗೀತ ವಿಭಾಗದಲ್ಲಿ ಪಡೆದ ಸಂದರ್ಭದಲ್ಲಿ ಆರ್. ಕೆ. ಶ್ರೀಕಂಠನ್ ಅವರಿಗೆ ಮಾರ್ಚ್ 25ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಅಭಿನಂದನೆಯನ್ನು ಆಯೋಜಿಸಲಾಗಿತ್ತು. ಕನ್ನಡಿಗರ ಸಂತೋಷಭರಿತ ಆತ್ಮೀಯ ಕೂಟ ತಮಗೆ ಅಪಾರ ಸಂತಸ ತಂದಿದೆ ಎಂದ ಶ್ರೀಕಂಠನ್ ಅವರು ತಮ್ಮ ಸಂಗೀತ ಕ್ಷೇತ್ರದ ಸುದೀರ್ಘ ಪಯಣದ ಮಧುರ ನೆನಪುಗಳನ್ನು ಮೆಲುಕು ಹಾಕಿದರು. ತಮ್ಮ ಆಕಾಶವಾಣಿಯ ಸೇವೆಯ ದಿನಗಳಲ್ಲಿ ಡಿ.ವಿ.ಜಿ., ಮಾಸ್ತಿ, ಬೇಂದ್ರೆ, ದೇವುಡು ನರಸಿಂಹಶಾಸ್ತ್ರಿ ಮೊದಲಾದ ವಿದ್ವಾಂಸರೆಲ್ಲರೊಡನೆಯ ಒಡನಾಟ, ಮಾರ್ಗದರ್ಶನ ತಮ್ಮ ಸಾಧನೆಗೆ ದಾರಿದೀಪವಾಯಿತು ಹಾಗೂ ಜ್ಞಾನಾರ್ಜನೆಗೆ ಅಂದಿನ ಆಕಾಶವಾಣಿಯ ಕೊಡುಗೆ ಅಪಾರ ಎಂಬುದಾಗಿ ನುಡಿದರು. ತ್ಯಾಗರಾಜ ಪರಂಪರೆಯ ತಂದೆಯವರ ವಿದ್ವತ್ತು ವಂಶಪಾರಂಪರ್ಯವಾಗಿ ಬೆಳೆದು ಬಂದ ಬಗೆಯನ್ನು, ಅಂದಿನ ಕಾಲದ ಕಠಿಣವಾದ ಸತತ ಸಂಗೀತಾಭ್ಯಾಸ ತಮ್ಮ ಸಾಧನೆಗೆ ಪ್ರೇರಕವಾದ ಅನುಭವದ ಬುತ್ತಿಯನ್ನು ಶ್ರೀಕಂಠನ್ ಅವರು ಬಿಚ್ಚಿಟ್ಟರು. ಪದ್ಮ ಪ್ರಶಸ್ತಿ ಭಾಜನರು ವೇದಿಕೆಯಿಂದ ಪ್ರಶಸ್ತಿ ಸ್ವೀಕರಿಸಿ ಕೆಳಗಿಳಿಯುತ್ತಲೇ ಅವರನ್ನು ಆಯಾ ನಾಡಿನ ಸಂಸದರು ಮುಂದಾಗಿ ಎದುರ್ಗೊಂಡು ಅಭಿನಂದಿಸುತ್ತಿದ್ದರು. ಗೃಹ ಸಚಿವರಾದ ಪಿ. ಚಿದಂಬರಂ ಅವರು ತಮಿಳುನಾಡಿನ ಪ್ರತಿನಿಧಿಯಾಗಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಪ್ರಶಸ್ತಿ ಪುರಸ್ಕೃತರನ್ನು ಎದ್ದು ಅಭಿನಂದಿಸಿ ನಾಡಿನ ಅಭಿಮಾನವನ್ನೂ, ಹೆಮ್ಮೆಯನ್ನೂ ಮೆರೆದರು. ಆದರೆ ನಾನು ಪ್ರಶಸ್ತಿ ಸ್ವೀಕರಿಸುವಾಗ ಕರ್ನಾಟಕದ ಒಬ್ಬ ಸಂಸದನೂ ತನ್ನ ನಾಡಿನ ಗಣ್ಯ ಕಲಾವಿದನೊಬ್ಬನ ಪ್ರಶಸ್ತಿಯನ್ನು ಅಭಿನಂದಿಸಲಾಗಲಿ, ಸಂಭ್ರಮಿಸಲಾಗಲಿ ಅಲ್ಲಿರಲಿಲ್ಲ. ಆದರೆ "ದೆಹಲಿ ಕರ್ನಾಟಕ ಸಂಘದ ಆತ್ಮೀಯ ಅಭಿನಂದನೆ, ಕನ್ನಡಿಗರ ಅಭಿಮಾನ ಆ ನೋವನ್ನು, ಕೊರತೆಯನ್ನು ನಿವಾರಿಸಿದೆ" ಎಂದು ಮನದುಂಬಿ ಸಂತಸ ವ್ಯಕ್ತಪಡಿಸಿದರು.

ನಡೆದಾಡುವ ಸಂಗೀತ ವಿಶ್ವಕೋಶವೆಂದೇ ಖ್ಯಾತರಾದ 92ರ ಹರೆಯದ ಕಲಾನಿಧಿ ಶ್ರೀಕಂಠನ್ ಅವರು, ತಮ್ಮೊಂದಿಗಿದ್ದ ಸಹಧರ್ಮಿಣಿ, ಮೈತ್ರೇಯಿ ತಮ್ಮ ಬಾಳಪಯಣದ ಹಾದಿಯಲ್ಲಿ ಪ್ರತಿ ಹೆಜ್ಜೆಯಲ್ಲೂ ಸಾಂಸಾರಿಕ ನೆಮ್ಮದಿಯನ್ನು ನೀಡುವ ಮೂಲಕ ಸಂಗೀತ ಸಾಧನೆಗೆ ಪ್ರೇರಕವಾದದ್ದನ್ನು ಹೇಳಲು ಮರೆಯಲಿಲ್ಲ.

ಇದೇ ಸಂದರ್ಭದಲ್ಲಿ ಸುಗಮ ಸಂಗೀತ ಕ್ಷೇತ್ರದ ಹೆಸರಾಂತ ಕಲಾವಿದೆ ಪುತ್ರಿ ರತ್ನಮಾಲಾ ಪ್ರಕಾಶ್ ಹಾಗೂ ಶಾಸ್ತ್ರೀಯ ಸಂಗೀತ ಕ್ಷೇತ್ರದ ಖ್ಯಾತ ಕಲಾವಿದ ಪುತ್ರ ರುದ್ರಪಟ್ಣಂ ರಮಾಕಾಂತ್ ಅವರುಗಳು ಭದ್ರ ಬುನಾದಿಯನ್ನು ನಿರ್ಮಿಸಿದ ತಂದೆಯವರ ಕೊಡುಗೆಯನ್ನು ಅಭಿಮಾನದಿಂದ ಸ್ಮರಿಸಿದರು. ಸಮಾರಂಭಕ್ಕೆ ಆಗಮಿಸಿದ್ದ ದೆಹಲಿ ಆಕಾಶವಾಣಿಯ ಸಂಗೀತ ವಿಭಾಗದ ವರಿಷ್ಠ ಹಾಗೂ ಉಪನಿರ್ದೇಶಕರಾದ ವಾಗೀಶ್ ಅವರು ಶ್ರೀಕಂಠನ್ ಅವರು ಆಕಾಶವಾಣಿಗೆ ನೀಡಿದ ಅಪೂರ್ವ ಸೇವೆಯನ್ನು ಸ್ಮರಿಸುತ್ತಾ ಶುದ್ಧ ಸಂಗೀತ ಪರಂಪರೆಯನ್ನು ಉಳಿಸಿ, ಬೆಳೆಸಿ, ಕಿರಿಯರಿಗೆ ಆದರ್ಶ ಪ್ರಾಯರಾದ ಹಿರಿಯ ಸಂಗೀತ ಸಾಧಕ ಶ್ರೀ ಶ್ರೀಕಂಠನ್ ಅವರನ್ನು ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ದೂರದರ್ಶನ ಚಂದನವಾಹಿನಿಯ ಜನಪ್ರಿಯ "ಥಟ್ ಅಂತ ಹೇಳಿ" ಕ್ವಿಜ್ ಕಾರ್ಯಕ್ರಮದ ನಿರೂಪಕ ಡಾ.ನಾ. ಸೋಮೇಶ್ವರ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅನಿರೀಕ್ಷಿತವಾಗಿ ಜೀವನದಲ್ಲಿ ಒಮ್ಮೊಮ್ಮೆ ಸಿಗುವ ಸುವರ್ಣಾವಕಾಶವೆಂದು ಕಾರ್ಯಕ್ರಮವನ್ನು ಬಣ್ಣಿಸುತ್ತಾ ಶ್ರೀಕಂಠನ್ ಅವರ ಸಂಗೀತ ಹಾಗೂ ಸಾಹಿತ್ಯ, ಸಾಧನೆ, ಶ್ರಮ ಮುಂದಿನ ಪೀಳಿಗೆಗೆ ದೊರೆಯುವಂತಾಗಲು ದಾಖಲು ಮಾಡುವ ತುರ್ತು ಅಗತ್ಯತೆಯನ್ನು ಒತ್ತಿ ಹೇಳಿದರು.

ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಕರ್ನಾಟಕದ ಮಹಾನ್ ಸಾಧಕರು ಸಂಘಕ್ಕೆ ಬರುತ್ತಿರುವುದು ದೆಹಲಿ ಕನ್ನಡಿಗರ ಸುಯೋಗ ಹಾಗೂ ಹೆಮ್ಮೆಯ ಸಂಗತಿ ಎಂದರು. ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆಯವರು ಹೂಗುಚ್ಛ ನೀಡಿ ಸ್ವಾಗತರಿಸಿದರು. ಸಂಘದ ಮಾಜಿ ಅಧ್ಯಕ್ಷ, ಹಿರಿಯ ದೆಹಲಿ ಕನ್ನಡಿಗ ಐ. ರಾಮಮೋಹನ ರಾವ್ ಅವರು ಶ್ರೀಕಂಠನ್ ಅವರಿಗೆ ಶಾಲು ಹೊದಿಸಿ ಹಾಗೂ ಡಾ. ಪುರುಷೋತ್ತಮ ಬಿಳಿಮಲೆ ಅವರು ಫಲ ನೀಡಿ ಅಭಿನಂದಿಸಿದರು. ಜಂಟಿ ಕಾರ್ಯದರ್ಶಿ ರೇಣುಕಾ ನಿಡಗುಂದಿ ಅವರು ಕಾರ್ಯಕ್ರಮ ಆಯೋಜಿಸಿ, ನಿರ್ವಹಿಸಿದರು ಹಾಗೂ ಉಪಾಧ್ಯಕ್ಷೆ ಉಷಾ ಭರತಾದ್ರಿ ಅವರು ವಂದಿಸಿದರು.

ಜಲಜಾರಾಜು ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಸುಂದರ ಸಂಜೆ ವಾಗೀಶ್, ರತ್ನಮಾಲಾ ಪ್ರಕಾಶ್, ರಮಾಕಾಂತ್ ಹಾಗೂ ಸಂಗೀತ ಕಲಾನಿಧಿ ಶ್ರೀಕಂಠನ್ ಅವರ "ಹಂಗೇ ಇರಬೇಕು ಸಂಸಾರದಲ್ಲಿ" ಪುರಂದರ ದಾಸರ ಅದ್ಭುತ ಗಾಯನದಿಂದ ಕಲಾರಸಿಕರಿಗೆ ಅವಿಸ್ಮರಣೀಯ ಗಾನಲೋಕವನ್ನು ಸೃಷ್ಟಿಸಿತು.

❑ ಉಷಾ ಭರತಾದ್ರಿ





ಪದ್ಮಭೂಷಣ ಪ್ರಶಸ್ತಿ ವಿಜೇತ ಆರ್.ಕೆ. ಶ್ರೀಕಂಠನ್ ಮತ್ತು ಪದ್ಮಶ್ರೀ ಪುರಸ್ಕೃತ ಖ್ಯಾತ ಚಲನಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರನ್ನು ನವದೆಹಲಿಯಲ್ಲಿನ ಕರ್ನಾಟಕ ಸರ್ಕಾರದ ಹೆಚ್ಚುವರಿ ವಿಶೇಷ ಪ್ರತಿನಿಧಿ ಬೈಕೆರೆ ನಾಗೇಶ್ ಅವರು ಭೇಟಿ ಮಾಡಿ ಪುಷ್ಪಗುಚ್ಛ ನೀಡಿ ಅಭಿನಂದಿಸಿದರು.

ಪ್ರಧಾನ ಸಂಪಾದಕರು
ಉಷಾ ಭರತಾದ್ರಿ

ಸಂಪಾದಕ ಮಂಡಳಿ
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ
ಚಂದ್ರಶೇಖರ ಎನ್.ಪಿ.

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಖಜಾಂಚಿ
ಕೆ.ಆರ್. ರಾಮಮೂರ್ತಿ

ಜಂಟಿ ಕಾರ್ಯದರ್ಶಿಗಳು
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

ಸಮಿತಿ ಸದಸ್ಯರು
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಬಿ. ಹೆಗಡೆ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

ಅಭಿಮತ ಸಂಪುಟ 21 ಸಂಚಿಕೆ 7
ಏಪ್ರಿಲ್ 2011, ಬೆಲೆ ರೂ. 1

# ಮನದ ಮಾತು

ನಿಸರ್ಗ ನಮ್ಮ ಹೆತ್ತ ತಾಯಿ ಇದ್ದಂತೆ. ಅವಳ ಮಡಿಲಲ್ಲಿ ಮಲಗಿ ಅವಳ ಪ್ರೀತಿಯ ಅಮೃತ ಸವಿಯುವ ಪುಣ್ಯಜೀವಿಗಳು ನಾವು. ಅವಳ ಅಪರಿಮಿತ ಪ್ರೇಮವನ್ನು ಸಲುಗೆ ಎಂದು ಭ್ರಮಿಸಿ ಅವಳ ಅಂಗಾಂಗಳನ್ನೇ ಕೊಚ್ಚುವ ಅಥವ ಹೆತ್ತ ತಾಯಿಯನ್ನೇ ಉಸಿರುಗಟ್ಟಿಸುವ ದುಷ್ಕೃತ್ಯಗಳಿಗೆ ನಾವು ಮುಂದಾದರೆ ಗತಿ ಏನು? ಅದಕ್ಕೆ ಉತ್ತರ-ಜಪಾನಿನಲ್ಲಿ ಘಟಿಸಿದ ಭೂಕಂಪ, ಸುನಾಮಿ, ತತ್ಪರಿಣಾಮದ ಮಾರಣಹೋಮ! ಮಾತೃದ್ರೋಹಕ್ಕೆ ಸಂದ ಶಿಕ್ಷೆ ಇಷ್ಟಕ್ಕೇ ಮುಗಿಯಲಿಲ್ಲ. ನಿಸರ್ಗದ ಅಧಿನಿಯಮಗಳಿಗೆ ತದ್ವಿರುದ್ಧವಾಗಿ ಅಣುರೇಣು ತೃಣ, ಕಾಷ್ಠಗಳನ್ನು ಭೇದಿಸಿ ಅವುಗಳ ಅಂತರ್ಗತ ಧೀಶಕ್ತಿಯನ್ನು ಗುಲಾಮನನ್ನಾಗಿಸುವ ಮನುಷ್ಯನ ಧೋರಣೆಗೆ ನಿಸರ್ಗ ಉತ್ತರ ನೀಡಿದೆ-ಅಣು ರಿಯಾಕ್ಟರ್‌ಗಳ ಸೋರಿಕೆಯ ಮೂಲಕ. ಜಪಾನ್‌ನ ದುರಂತ ನಮ್ಮ ಕಣ್ಣು ತೆರೆಸಲಿ, ಮತ್ತೆ ನಾವು ಮುಗ್ಧತೆಯಿಂದ ನಿಸರ್ಗ ಮಾತೆಯ ಮಡಿಲಲ್ಲಿ ವಿರಮಿಸುವಂತಾಗಲಿ ಎಂಬುದಷ್ಟೇ ನಮ್ಮ ಎದುರಿಗಿರುವ ಆಯ್ಕೆ.

2011ರ ಜನಸಂಖ್ಯಾ ವರದಿ ಪ್ರಕಟಗೊಂಡಿದೆ. ಈಗ ನಮ್ಮ ದೇಶದ ಒಟ್ಟು ಜನಸಂಖ್ಯೆ 1.21 ಬಿಲಿಯನ್! ಅಂದರೆ 121 ಕೋಟಿ!! ಒಂದು ಚದರ ಕಿಲೋಮೀಟರ್ ಪ್ರದೇಶದಲ್ಲಿ 382 ಜನ ವಾಸಿಸುತ್ತಿದ್ದಾರೆ! ಸ್ವಲ್ಪ ಸಮಾಧಾನದ ಸಂಗತಿಯೆಂದರೆ 2001ರ ಜನಗಣತಿಗೆ ಹೋಲಿಸಿದರೆ ಜನಸಂಖ್ಯೆ ಉಬ್ಬರ ಕೊಂಚ ಮಂದಗತಿಯಲ್ಲಿದೆ. ಇನ್ನೂ ಸ್ವಲ್ಪ ಸಂತೋಷದ ಸುದ್ದಿಯೆಂದರೆ ಸಾಕ್ಷರತೆಯ ಪ್ರಮಾಣ ಶೇಕಡಾ 74.04ಕ್ಕೆ ಏರಿದೆ. ಆದರೆ ಪುರುಷರಿಗೆ ಹೋಲಿಸಿದರೆ ಮಹಿಳೆಯರೇ ಅಧಿಕ ಸಂಖ್ಯೆಯ ಅನಕ್ಷರಸ್ಥರು. ಪುರುಷರಲ್ಲಿ 82.14% ಸಾಕ್ಷರರಿದ್ದರೆ ಮಹಿಳೆಯರಲ್ಲಿ ಕೇವಲ 65.46% ಸಾಕ್ಷರರಿದ್ದಾರೆ. ಆತಂಕದ ಸಂಗತಿಯೆಂದರೆ ಮಹಿಳೆ ಹಾಗೂ ಪುರುಷರ ಅನುಪಾತದ ಏರುಪೇರು! ಭಾರತದಲ್ಲಿ 62,37,24,248 ಪುರುಷರಿದ್ದರೆ ಮಹಿಳೆಯರಿರುವುದು ಕೇವಲ 58,64,69,174 ಮಾತ್ರ. ಇದಕ್ಕೆ ಕಾರಣ ಸ್ತ್ರೀಭ್ರೂಣ ಹತ್ಯೆ. ಯಾವ ಕಾನೂನು ಕೂಡ ಈ ಅಮಾನುಷ ಪ್ರವೃತ್ತಿಯನ್ನು ನಿಯಂತ್ರಿಸಿಲ್ಲ. ಬಹುಶ: ಅತ್ಯಂತ ಪ್ರಬಲವಾದ ಕಾನೂನು ಬಂದು ಸ್ತ್ರೀ ಭ್ರೂಣ ಹತ್ಯೆ ಮಾಡಿದವರಿಗೆ ನೇಣು ಶಿಕ್ಷೆ ವಿಧಿಸಿದ ಹೊರತು ಈ ನೀಚ ಪ್ರವೃತ್ತಿ ನಿಲ್ಲುವುದಿಲ್ಲ; ಹೆಣ್ಣು ಮಕ್ಕಳ ಶೋಷಣೆ ಕೊನೆಗೊಳ್ಳುವುದಿಲ್ಲ. ಈ ವಿಷಯದಲ್ಲಿ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ಕೊಂಚ ಪ್ರಗತಿಪರ ಅನ್ನಿಸಿದರೂ ಅಲ್ಲಿಯೂ ಕೂಡಾ 1000 ಪುರುಷರಿಗೆ ಇರುವ ಮಹಿಳೆಯರ ಸಂಖ್ಯೆ ಕೇವಲ 973 ಮಾತ್ರ. ಮುಂಬರುವ ದಿನಗಳಲ್ಲಿ ಈ ಬಗ್ಗೆ ಅರಿವು ಮೂಡಲಿ, ನಮ್ಮ ಕರ್ನಾಟಕ ರಾಜ್ಯ ಇತರ ರಾಜ್ಯಗಳಿಗೆ ಮಾದರಿಯಾಗಲಿ ಎಂಬುದು ನಮ್ಮ ಆಶಯ.

ನಮ್ಮ ಕರ್ನಾಟಕದಲ್ಲಿ ಜನ ಸಂಭ್ರಮದಿಂದ ಖರನಾಮ ಸಂವತ್ಸರವನ್ನು ಸ್ವಾಗತಿಸಿದ್ದಾರೆ. ಯುಗಾದಿ ಒಂದು ಅರ್ಥಪೂರ್ಣ ಹಬ್ಬ. ಹಳೆಯ ನೋವುಗಳು ಗತಕಾಲದಲ್ಲಿ ಹುದುಗಿ ಹೊಸ ಕನಸುಗಳು ಭವಿಷ್ಯದಲ್ಲಿ ಚಿಗುರಲಿ ಎಂಬ ಆಶೆ ಮೈದಳೆಯುವ ಸಂದರ್ಭ. ನಿಸರ್ಗ ಸಹಜವಾದ ಏರುಪೇರುಗಳನ್ನು, ನೋವು ನಲಿವುಗಳನ್ನು ಸಮಚಿತ್ತದಿಂದ ನಾವೆಲ್ಲರೂ ಸ್ವೀಕರಿಸಲಿ ಎಂಬುದು ಈ ಹಬ್ಬದ ಆಚರಣೆಯ ಆಂತರ್ಯ. ಬೇಂದ್ರೆಯವರು ಹೇಳಿದಂತೆ 'ಹೊಂಗೆ ಹೂವ ತೊಂಗಲಲ್ಲಿ ಭೃಂಗದ ಸಂಗೀತ'ದ ಹಿನ್ನೆಲೆಯಲ್ಲಿ 'ಬೇವಿನ ಕಹಿ ಬಾಳಿನಲ್ಲಿ ಹೂವಿನ ನಸುಗೆಂಪು ಸೂಸಿ ಜೀವ ಕಳೆ'ಯನ್ನು ತರಲಿ. ಯುಗ ಯುಗಾದಿ ಕಳೆದರೂ ಮರಳಿ ಬರುವ ಯುಗಾದಿ ಹೊಸ ವರುಷಕೆ ಹೊಸ ಹರುಷವ ತರಲಿ. ಇದು ಅಭಿಮತದ ಹಾರೈಕೆ.

ಯುಗದ ಕವಿ, ಅದ್ಭುತ ಕಾದಂಬರಿಕಾರ, ಪ್ರಕಾಂಡ ವಿದ್ವನ್ಮಣಿ, ರಾಷ್ಟ್ರಕವಿ ಕುವೆಂಪು ಅವರನ್ನು ಕುರಿತ ರಾಷ್ಟ್ರ ಮಟ್ಟದ ವಿಚಾರ ಸಂಕಿರಣ, ನಮ್ಮ ಸಂಘದ ಸಭಾಂಗಣದಲ್ಲಿ 15,16 ಹಾಗೂ 17ರಂದು ನಡೆಯಲಿದೆ. 'ನೀ ಮೆಟ್ಟುವ ನೆಲ ಅದೇ ಕರ್ನಾಟಕ, ನೀ ಕುಡಿಯುವ ನೀರ್, ಅದೇ ಕಾವೇರಿ' ಎಂದು, ಎಲ್ಲೇ ಇರಲಿ, ಎಂತೇ ಇರಲಿ, 'ಕನ್ನಡ'ವಾಗಿರುವುದಕ್ಕೆ ನಮ್ಮೆಲ್ಲರ ಹೃದಯದಲ್ಲಿ ಕನ್ನಡ ನಂದಾದೀಪವನ್ನು ಹೊತ್ತಿಸಿದ ರಸ ಋಷಿಗೆ ನಮನ ಸಲ್ಲಿಸಲು ನಮಗಿದು ಸದವಕಾಶ. ದಯಮಾಡಿ ಬನ್ನಿ. ಕುವೆಂಪು ನುಡಿ ರಸದೌತಣದಲ್ಲಿ ಪಾಲ್ಗೊಳ್ಳಿ.

❑ ಉಷಾ ಭರತಾದ್ರಿ

# ಅಂತರಾಳದಿಂದ. . .

### ದೆಹಲಿಯಲ್ಲಿ ಬೆಳಗಾವಿ

ಬೆಳಗಾವಿಯಲ್ಲಿ ಅದ್ದೂರಿಯಿಂದ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿ ದೆಹಲಿ ಕರ್ನಾಟಕ ಸಂಘದ ಎರಡು ತಂಡಗಳು ಭಾಗವಹಿಸಿದ್ದವು. ನಾಟಕ ಹಾಗೂ ಸುಗಮ ಸಂಗೀತದ ತಂಡಗಳು ಸಮ್ಮೇಳನದ ಕೊನೆಯ ದಿನದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದವು. ಈ ತಂಡದ ಎಲ್ಲ ಸದಸ್ಯರಿಗೂ ಸಂಘದ ಪರವಾಗಿ ಅಭಿನಂದನೆಗಳು. ಸಂಘದ ಉಪಾಧ್ಯಕ್ಷ ಶ್ರೀ ಬಿ.ಕೆ.ಬಸವರಾಜರವರು ಸಹಕಾರ್ಯದರ್ಶಿ ಶ್ರೀಮತಿ ರೇಣುಕಾ ನಿಡಗುಂದಿ ಹಾಗೂ ನಾನು ಸಹ ಈ ಸಮ್ಮೇಳನದ ಮೊದಲ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಬೆಳಗಾವಿಗೆ ತೆರಳಿದ್ದೆವು. ರೇಣುಕಾ ನಿಡಗುಂದಿಯವರು ಸಂಘದ ಪರವಾಗಿ ಎಲ್ಲಾ ಮೂರು ದಿನಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಸಂಘದ ಹಿಂದಿನ ಅಧ್ಯಕ್ಷರಾದ ಡಾ.ಪುರುಷೋತ್ತಮ ಬಿಳಿಮಲೆಯವರು ಅಧಿಕೃತವಾಗಿ ಹೊರನಾಡ ಕನ್ನಡಿಗರ ಕುರಿತಾದ ಗೋಷ್ಠಿಯಲ್ಲಿ ಭಾಗವಹಿಸಿದ್ದರು.

ಇದು ದೆಹಲಿ ಕನ್ನಡಿಗರ ಕೊಡುಗೆಯಾದರೆ, ಮುಂಬೈ, ಬರೋಡಾ, ಚೆನ್ನೈ, ಕಾಸರಗೋಡು ಹಾಗೂ ದೇಶದ ಇತರ ನಗರಗಳಿಂದಲೂ ಹಲವಾರು ಹೊರನಾಡ ಕನ್ನಡಿಗರು ಬೆಳಗಾವಿಗೆ ಆಗಮಿಸಿದ್ದರು. ಹೀಗೆ ಬಂದ ಹೊರನಾಡ ಕನ್ನಡಿಗರನ್ನು ಸ್ವಾಗತಿಸಿ, ಅವರಿಗೆ ಬೇಕಾದ ಸವಲತ್ತು ಸೌಕರ್ಯಗಳನ್ನು ಮಾಡಿಕೊಡಲು ಸರಕಾರ ಪರಿಶ್ರಮವನ್ನೇನೋ ಪಟ್ಟಿತ್ತು. ಹೊರನಾಡ ಕನ್ನಡಿಗರನ್ನು ಬೆಳಗಾವಿಯಿಂದ ಹತ್ತಾರು ಮೈಲು ದೂರವಿರುವ ಯಾವುದೋ ವಸತಿ ಗೃಹದಲ್ಲಿ ಉಳಿಸುವ ವ್ಯವಸ್ಥೆಯನ್ನು ಮಾಡಲಾಗಿತ್ತು. ಬೆಳಗಾವಿಯಿಂದ ಖಾನಾಪುರಕ್ಕೆ ಹೋಗುವ ರಸ್ತೆಯಲ್ಲಿ ಈ ವಸತಿ ಸೌಕರ್ಯವನ್ನು ಕಲ್ಪಿಸಲಾಗಿತ್ತು. ಅಲ್ಲಿಗೆ ಹೋಗಿ ಬರುವುದೇ ಒಂದು ದುಸ್ತರವಾದ ಕೆಲಸವಾಗಿತ್ತು. ಊಟ–ತಿಂಡಿಗಳಿಗಾಗಿ ಬೆಳಗಾವಿ ಶಹರಕ್ಕೇ ಬರಬೇಕು. ಅದಕ್ಕಾಗಿ ಬೆಳಗಿನಲ್ಲಿ ಒಂದು ಬಸ್ಸು; ಸಾಯಂಕಾಲಕ್ಕೆ ಇನ್ನೊಂದು ಬಸ್ಸು. ಹೋಗಲಿ, ಬೆಳಗಾವಿ ಶಹರದಲ್ಲೇ ತಮ್ಮ ಖರ್ಚಿನಲ್ಲೇ ಯಾವುದೋ ಹೋಟೆಲ್‌ನಲ್ಲೋ ಇನ್ನೆಲ್ಲೋ ಉಳಿದುಕೊಳ್ಳೋಣವೆಂದರೆ, ಅದಕ್ಕೆ ಜಾಗ ಸಿಕ್ಕಬೇಕಲ್ಲವೇ? ಬೆಳಗಾವಿಯ ಎಲ್ಲ ಹೋಟೇಲುಗಳ ಕೋಣೆಗಳನ್ನು ಸರಕಾರವೇ ತನ್ನ ಬೊಕ್ಕಸದಿಂದ ಹಣ ಸುರಿದು ಕಾದಿರಿಸಿಟ್ಟಿತ್ತು. ಬಂದ ಸಾವಿರಾರು ಜನರಿಗೆ, ಬಹುಶ: ಸರಕಾರದ ಪ್ರತಿಷ್ಠೆಯನ್ನು ಹೆಚ್ಚಿಸಬಲ್ಲ ಎಲ್ಲ ಜನರಿಗೆ (ಸರಿಯಾದ ಪರಿಚಯ ಹಾಗೂ ಸರಕಾರದ ಬಗಲಲ್ಲಿ ಇರುವವರಿಗೆ) ಬೆಳಗಾವಿಯಲ್ಲೇ ಉಳಿಯುವ ವ್ಯವಸ್ಥೆಯನ್ನು ಮಾಡಲಾಗಿತ್ತು. ನಾವು ಹೊರನಾಡ ಕನ್ನಡಿಗರು ಬೆಳಗಾವಿಯಿಂದ ಹೊರಕ್ಕೆ ಉಳಿದುಕೊಂಡು ಬಿಟ್ಟೆವು. ಎಲ್ಲಿ ಊಟ? ಎಲ್ಲಿ ಕಾರ್ಯಕ್ರಮ? ಹೇಗೆ ಹೋಗುವುದು? .... ಯಾರನ್ನು ಕೇಳುವುದಪ್ಪ? .. ಎಂದುಕೊಳ್ಳುತ್ತ ನಾವು ಮೊದಲ ದಿನ ಬೆಳಗಾವಿಯ ಶಹರದ ಉದ್ದಗಲಕ್ಕೂ ಓಡಿಯಾಡಿದ್ದಾಯಿತು. ಬಂದ ನಮಗೆಲ್ಲ ಪ್ರಯಾಣ ಭತ್ಯೆ ಹಾಗೂ ಇನ್ನಿತರ ಸವಲತ್ತುಗಳನ್ನು ಹೇಗೆ ಪಡೆಯಬೇಕೆಂಬುದೇ ಗೊತ್ತಾಗಲಿಲ್ಲ. ಹೇಗೋ ಒಂದು ಪಾಸನ್ನು ಪಡೆದು, ಬೆಳಗಾವಿಯ ಜಿಲ್ಲಾ ಕ್ರೀಡಾಂಗಣದಲ್ಲಿ ಸಂಜೆಯ ಉದ್ಘಾಟನಾ ಕಾರ್ಯಕ್ರಮಕ್ಕೆ ನುಸುಳಿಕೊಳ್ಳುವ ಹೊತ್ತಿಗೆ ನಮ್ಮ ಉಸಿರೇ ಮೇಲೆ ಕೆಳಗೆ ಆಗಿತ್ತು.

ಕನ್ನಡದ ಮೇಲಿನ ಪ್ರೀತಿಯಿಂದ ತುಂಬಿ ಬಂದ ಜನಸಾಗರವನ್ನು ನೋಡಲು ನಮಗೂ ಆನಂದವೇ! ಆದರೆ, ಈ ಜನಸಾಗರದಲ್ಲಿ ದೂರದಿಂದ ತಮ್ಮದೇ ಖರ್ಚಿನಲ್ಲಿ ಬಂದ ಹೊರನಾಡ ಕನ್ನಡಿಗರನ್ನು ಕೇಳುವವರ್‍ಯಾರು? ವಿದೇಶಗಳಿಂದ ಬಂದ ಕೆಲ ಅನಿವಾಸಿ ಕನ್ನಡಿಗರಿಗಂತೂ ಬಹು ದೊಡ್ಡ ಮಣೆ ದೊರೆಯಿತೆಂಬುದನ್ನು ನಾವು ಪತ್ರಿಕೆಗಳಲ್ಲಿ ಓದಿ ತಿಳಿದುಕೊಂಡೆವು.

ನಾನು ಸಂಘದ ಅಧ್ಯಕ್ಷನಾಗಿ ಬೆಳಗಾವಿಯ ವಿಶ್ವಕನ್ನಡ ಸಮ್ಮೇಳನದಲ್ಲಿ ಭಾಗವಹಿಸಬೇಕು ಎಂಬ ಉತ್ಸಾಹದಿಂದ ಹೋದವನು, ಮೊದಲ ದಿನದ ಅಬ್ಬರವನ್ನು ಕಂಡವನು, ಈ ಬೆಳಗಾವಿಯಿಂದ ಎಂದು ಹೊರಬೀಳುವೆನೋ ಎಂಬಂತಾಯಿತು. ನಾವೇ ಹತ್ತಾರು ಜನ ಓಡಾಡಿಕೊಂಡು, ನಮ್ಮದೇ ಖರ್ಚಿನಲ್ಲಿ ಹೋಟೆಲ್‌ನಲ್ಲಿ ಊಟ–ತಿಂಡಿ ಮಾಡಿಕೊಂಡು, ಆಟೋದವರಿಗೆ ನೂರಾರು ರೂಪಾಯಿಗಳನ್ನು ತೆತ್ತು ಕನ್ನಡಮ್ಮನಿಗೆ ಸೇವೆ ಸಲ್ಲಿಸಿದೆವು. ಮುಂಬೈ, ಬರೋಡಾ ಹಾಗೂ ಇನ್ನಿತರ ಹೊರನಾಡ ಕನ್ನಡ ಸಂಘದ ಹಿರಿಯ ಪದಾಧಿಕಾರಿಗಳು ಹಾಗೂ ಸದಸ್ಯರು ನನ್ನದೇ ಆದ ರೀತಿಯ ಬವಣೆಯನ್ನು ಅನುಭವಿಸಿದರು. ಸರಕಾರವೇನೋ ಹತ್ತಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಈ ಕಾರ್ಯಕ್ರಮವನ್ನು ಆಯೋಜಿಸಿತ್ತು. ಸರಕಾರದ ಪರಿಧಿಯಲ್ಲಿ ಹಾಗೂ ಸರಕಾರದವರಿಗೆ ಸಾಕಷ್ಟು ಪರಿಚಯವಿದ್ದ (ಮತ್ತು ಲಾಭದಾಯಕವಾಗುವ) ನೂರಾರು ಪ್ರತಿಷ್ಠಿತ ಕನ್ನಡಿಗರಿಗೆ ಉತ್ತಮವಾದ ಸೇವೆ–ಸೌಲಭ್ಯಗಳು ದೊರೆತಿರಬಹುದೆಂಬುದು ನನ್ನ ಊಹೆ. ನಾನಾಗಲಿ, ಬಸವರಾಜರಾಗಲಿ, ನಿಡಗುಂದಿಯವರಾಗಲಿ ... ಈ ಬಗೆಯ ವಶೀಲಿ ಅಥವಾ ಪ್ರತಿಷ್ಠೆಗಳನ್ನು ಇಟ್ಟುಕೊಂಡು ಹೋದವರಾಗಿರಲಿಲ್ಲ. ಬಹುಶ: ಆ ಬಗೆಯ ವಶೀಲಿ ನಮಗೆ ಬೇಕಾಗಿರಲಿಲ್ಲ. ಸಾಮಾನ್ಯ ಕನ್ನಡಿಗರಾಗಿ ಕನ್ನಡಿಗರೊಂದಿಗೆ ಬೆರೆತು ಕಾರ್ಯಕ್ರಮಗಳನ್ನು ನೋಡುವ, ಆನಂದಿಸುವ ವಿಚಾರ ನಮ್ಮದಾಗಿತ್ತು. ಆದರೆ, ಅದು ಹಲವಾರು ಬಗೆಗಳಲ್ಲಿ ಸಾಧ್ಯವೇ ಆಗಲಿಲ್ಲ.

ನಾನು ಮೊದಲ ದಿನದ ಕಾರ್ಯಕ್ರಮವನ್ನು ಮಧ್ಯರಾತ್ರಿಯವರೆಗೂ ನೋಡಿದವನಿಗೆ, ಮುಂದೇನು ಮಾಡಬೇಕೆಂದು ತೋಚಲಿಲ್ಲ. ನಮ್ಮೊಂದಿಗಿದ್ದ ಅಧಿಕಾರಿಗಳು ಅವರವರ ಮಟ್ಟಿಗೆ ಸಾಧ್ಯವಾದಷ್ಟು ಮಾಡಿ ಎಲ್ಲೋ ಕಳಚಿಕೊಂಡರು ಎಂದರೆ ತಪ್ಪಾಗಲಿಕ್ಕಿಲ್ಲ. ನಾವೆಲ್ಲ ನಮ್ಮ ರಸ್ತೆಯನ್ನೇ ಹುಡುಕಿಕೊಂಡು ಹೋಗುವಂತಾಯಿತು. ಪ್ರಯಾಣ ಭತ್ಯೆಯನ್ನು ಪಡೆಯಲು ನಾವು ಬಂದ ನೂರಾರು ಸಾವಿರಾರು ಜನರೊಂದಿಗೆ ಹೇಗೆ ಸ್ಪರ್ಧೆಗೆ ಇಳಿಯುವುದು? ಈಗಾದರೂ ಸರಕಾರ ನಮ್ಮ ಸಂಘದ ಪದಾಧಿಕಾರಿಗಳಿಗೆ ಅದನ್ನು ಕೊಡಿಸುವ ವ್ಯವಸ್ಥೆ ಮಾಡಿದ್ದರೆ ಸಂತಸವಾಗುತ್ತಿತ್ತು. ಸರಕಾರ ... ಸರಕಾರವೇ? ಅದನ್ನು ಪ್ರಶ್ನಿಸುವವರಾರು?

ಮುಖ್ಯವಾಗಿ ನಾವು ಹೊರನಾಡ ಕನ್ನಡಿಗರು ಎಂಬ ಹಣೆ ಪಟ್ಟಿಯನ್ನು ಅಂಟಿಸಿಕೊಂಡು ಬೆಳಗಾವಿಗೆ ಹೋಗಿದ್ದಾದರೂ ಏಕೆ? ಈಗ, ನನ್ನ ದೃಷ್ಟಿಯಲ್ಲಿ 'ಹೊರನಾಡ–ಒಳನಾಡ ಕನ್ನಡಿಗ' ಎಂಬ ಭೇದವೇ ಅಳಿಸಿ ಹೋಗುವಂತಿದೆ. ಇನ್ನೂ ಮುಖ್ಯವಾಗಿ ದೆಹಲಿಯಂತಹ ರಾಜಕೀಯ ಶಕ್ತಿ ತುಂಬಿದ ಜಾಗೆಯಲ್ಲಿ ನಮ್ಮ ಸಂಘ ಏನು ಮಾಡಬಹುದು? ಹಾಗೂ ಈ ಸಂಘದ ಶಕ್ತಿಯನ್ನು ನಾವು ಒಂದು ಬಗೆಯಲ್ಲಿ ಕನ್ನಡವೆಂಬ 'ಬ್ರಾಂಡ್'ನ್ನು ಬೆಳೆಸಲು ಹೇಗೆ ಉಪಯೋಗಿಸಿಕೊಳ್ಳಬಹುದು? ಇತ್ತೀಚೆಗೆ ಸಂಘಕ್ಕೆ ಬಂದಿದ್ದ ಎಲ್ಲ ಘನವೆತ್ತ ಕನ್ನಡಿಗರು–ಶ್ರೀ ಆರ್.ಕೆ.ಶ್ರೀಕಂಠನ್, ಶ್ರೀ ಎಸ್.ಜಿ.ವಾಸುದೇವ ಹಾಗೂ ಶ್ರೀ ಗಿರೀಶ್ ಕಾಸರವಳ್ಳಿ–ಆಶಯವೂ ಇದೇ ಆಗಿತ್ತು. ಜಾಗತೀಕರಣದ ಈ ಸಂದರ್ಭದಲ್ಲಿ ಕನ್ನಡಕ್ಕೆ, ಅದರ ಭಾಷೆಯ ಸೊಬಗಿಗೆ, ಸಂಸ್ಕೃತಿಗೆ, ಜನಸಂಸ್ಕೃತಿಗೆ ವಿಶಿಷ್ಟವಾದ ಮನ್ನಣೆ ದೊರೆಯಬೇಕೆಂಬುದೇ ನಮ್ಮೆಲ್ಲರ ಹಂಬಲ.

ನಾವು ದೆಹಲಿ ಕನ್ನಡಿಗರು, ಈ ಬಗೆಯ ಹಂಬಲದಿಂದ ಬದುಕುತ್ತಿದ್ದೇವೆ. ಈ ಬಗೆಯ ಹಂಬಲದಿಂದಲೇ ದೆಹಲಿ ಕರ್ನಾಟಕ ಸಂಘವನ್ನು ಕಟ್ಟಿ ಬೆಳೆಸಲು ಪ್ರಯತ್ನಿಸಿದ್ದೇವೆ. ದೆಹಲಿಯಲ್ಲೇ ನಾವು ನಿರಂತರವಾಗಿ ಬೆಳಗಾವಿಯನ್ನು ಕಾಣುತ್ತಿದ್ದೇವೆ. ಹಾಗಿದ್ದರೆ, ನಾವೆಲ್ಲ ಬೆಳಗಾವಿಗೆ ಹೋಗಿದ್ದಾದರೂ ಯಾಕೆ? ಸಂಸ್ಕೃತಿ ...ಸೊಬಗು ... ಎಲ್ಲ ಏನೇ ಇದ್ದರೂ ನಾವೆಲ್ಲ ಮಣ್ಣಿನ ವಾಸನೆಗಾಗಿ, ಅಲ್ಲಿ ಬೀಸುವ ತಂಗಾಳಿಗಾಗಿ, ಗರಿಗೆದರುವ ಪಶ್ಚಿಮ ಘಟ್ಟದ ಮರಗಳ ಒಣಗಿದ ಎಲೆಗಳ ಚರಚರ ಸದ್ದನ್ನು ಕೇಳುವುದಕ್ಕಾಗಿ, ಕರ್ನಾಟಕದತ್ತ ಮುಖ ಮಾಡುತ್ತೇವೆ. ಅದಕ್ಕೆ ಹಣದ, ಪ್ರಯಾಣ ಭತ್ಯೆಯ ಬೆಲೆಯನ್ನು ಕಟ್ಟಲು ಸಾಧ್ಯವಿಲ್ಲ. ನಾನು ಅದಕ್ಕಾಗಿಯೇ ನನ್ನ ಜೋಳಿಗೆಯನ್ನು ಹಿಡಿದುಕೊಂಡು ಮಧ್ಯರಾತ್ರಿಯ ಏಕತಾನತೆಯಲ್ಲಿ ಬೆಳಗಾವಿಯ ಬಸ್ ನಿಲ್ದಾಣದಲ್ಲಿ ಒಂಟಿಯಾಗಿ ಕುಳಿತವನು, ಸಿರ್ಸಿಯ ಬಸ್ಸನ್ನು ಹತ್ತಲು .... ಉತ್ಸುಕನಾಗಿದ್ದೆ.

❑ ಡಾ. ವೆಂಕಟಾಚಲ ಹೆಗಡೆ

# ಆಧುನಿಕ ಕರ್ನಾಟಕದ ಚಿತ್ರಕಲೆಯ ಹರಿಕಾರ–ಎಸ್.ಜಿ. ವಾಸುದೇವ್

"ಕಲ್ಪವೃಕ್ಷ ಬೃಂದಾವನಂಗಳದಲಿ
ಹೇಗೋ ಹೊಕ್ಕು ಬಂದೆ
ಅಲ್ಲ ಎಚ್ಚರವು, ಅಲ್ಲ ನಿದ್ದೆಯು
ಏನೋ ಯೋಗದಿಂದೆ"

*–ದ.ರಾ. ಬೇಂದ್ರೆ*

ಬೇಂದ್ರೆಯವರ ಈ ಕವನದ ಸಾಲುಗಳಿಂದ ಪ್ರಭಾವಿತನಾಗಿ ಸೃಜನಶೀಲ ಕಲಾವಿದನಾಗಿ ಬೆಳೆಯಲು ಸಹಕಾರಿಯಾಯಿತು ಹಾಗೂ ನನ್ನ "ಕಲ್ಪವೃಕ್ಷ" ಸರಣಿಗೆ ಪ್ರೇರಣೆ ನೀಡಿತು"–ಎಂದು ಕನ್ನಡದ ಖ್ಯಾತ ಚಿತ್ರಕಲಾವಿದ ಎಸ್.ಜಿ. ವಾಸುದೇವ್ ಅವರು ನುಡಿದರು. ಸಾಹಿತಿಗಳ ಒಡನಾಟದಿಂದ ಕಲಾ ಪ್ರಪಂಚಕ್ಕೆ ಹೊಸ ಆಯಾಮವನ್ನು ನೀಡಿದ ವಾಸುದೇವ್ ಅವರು ಕಲಾವಿದರ ಕಲಾ ಸೇವೆ ನಿರಂತರವಾದದ್ದು, ಅವರಿಗೆ ನಿವೃತ್ತಿಯೇ ಇಲ್ಲ ಎಂದು ಅಭಿಪ್ರಾಯಪಟ್ಟರು. ಮಾರ್ಚ್ 17ರಂದು ದೆಹಲಿಯ ಕನ್ನಡ



ಮಹಿಳಾ ಕಲಾವಿದರ ಕಲಾ ಪ್ರದರ್ಶನವನ್ನು ಉದ್ಘಾಟಿಸಿದ ಅವರು ದೆಹಲಿ ಕನ್ನಡ ಕಲಾವಿದರೊಡನೆ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕಾರ್ಯಕ್ರಮದ ಮೊದಲಿಗೆ ವಾಸುದೇವ್ ಅವರ ಕುರಿತಾದ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲಾಯಿತು. ಕಲಾ ಪಯಣದಲ್ಲಿ ಎಪ್ಪತ್ತು ವರ್ಷಗಳನ್ನು ಪೂರೈಸಿರುವ ವಾಸುದೇವ್ ಅವರು ಆಧುನಿಕ ಕರ್ನಾಟಕದ ಚಿತ್ರಕಲೆಯ ಬಹುದೊಡ್ಡ ಮೈಲಿಗಲ್ಲು. 'ಸಂಸ್ಕಾರ' ಮತ್ತು 'ವಂಶವೃಕ್ಷ' ಚಿತ್ರಗಳ ಕಲಾ ನಿರ್ದೇಶಕರು ಮಾತ್ರವಲ್ಲ ರಂಗಕೃತಿಗಳಿಂದ ಪ್ರಭಾವಿತರಾಗಿರುವ ರಂಗಕರ್ಮಿಯೂ ಹೌದು. ಕರ್ನಾಟಕದ ಚಿತ್ರಕಲಾ ಕ್ಷೇತ್ರವನ್ನು ಅವಲೋಕಿಸಿದಾಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಪಡೆದ ಕಲಾವಿದರಲ್ಲಿ ಎಸ್.ಜಿ. ವಾಸುದೇವ್ ಅವರು ಪ್ರಮುಖರು. ಭಾರತದ ಮುಖ್ಯ ಕಲಾವಿದರಲ್ಲಿ ಒಬ್ಬರಾಗಿ ಮತ್ತು ದಕ್ಷಿಣ ಭಾರತದ ಅತ್ಯಂತ ಗೌರವಾನ್ವಿತ ಕಲಾವಿದರಾದ ವಾಸುದೇವ್ ಅವರ ಬಗೆಗಿನ ಮಾತೆಂದರೆ, ಅದು ಕರ್ನಾಟಕದ ಆಧುನಿಕ ಚಿತ್ರಕಲೆಯ ವೈಭವದ ಕುರಿತ ಮಾತೇ ಆಗಿದೆ.

ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಕಲಾವಿದ ವಾಸುದೇವ್ ಅವರಿಗೆ ಶಾಲು ಹೊದಿಸಿ, ಸನ್ಮಾನಿಸಿದರು, ಕಾರ್ಯದರ್ಶಿ ಸಿ.ಎಂ. ನಾಗರಾಜ್ ಸ್ಮರಣಿಕೆ ನೀಡಿ ಗೌರವಿಸಿದರು.

"ಕರ್ನಾಟಕ ಕಲೆ ಹಾಗೂ ಸಾಹಿತ್ಯದ ನೆಲೆ ಬೀಡು. ಕಲೆ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಮಹತ್ತರವಾದ ಸಾಧನೆ ಮಾಡಿದವರಿಗೆ ಸಾಕಷ್ಟು ಪ್ರಚಾರ ಸಿಕ್ಕಿಲ್ಲ. ಕರ್ನಾಟಕದ ಸಾಧನೆಯನ್ನು ಕನ್ನಡೇತರರಿಗೆ ಪರಿಚಯಿಸುವ ಕಾರ್ಯ ಅತ್ಯಗತ್ಯವಾಗಿ ಆಗಬೇಕಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರದ ನೆರವಿನೊಂದಿಗೆ ದೆಹಲಿ ಕರ್ನಾಟಕ ಸಂಘ ಒಂದು ತಿಂಗಳ ಕಾಲ ಕಾರ್ಯಕ್ರಮಗಳನ್ನು ಆಯೋಜಿಸಿ ಕರ್ನಾಟಕದ ವಿವಿಧ ಕ್ಷೇತ್ರಗಳ ಮಹತ್ತರ ಸಾಧನೆಯನ್ನು ಕನ್ನಡೇತರರಿಗೆ ತಲುಪಿಸುವ ಕಾರ್ಯ ಮಾಡಬೇಕು" ಎಂದು ಹೇಳುತ್ತ ಈ ಮಹತ್ವಪೂರ್ಣ ಕಾರ್ಯಕ್ಕೆ ತಮ್ಮ ಸಂಪೂರ್ಣ ನೆರವು, ಸಹಯೋಗ ಮತ್ತು ಸಹಕಾರವಿದೆಯೆಂದು ಭರವಸೆ ಇತ್ತರು.

ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಸಂಘ ಇಂತಹ ಮಹತ್ತರ ಕಾರ್ಯಗಳಿಗೆ ಎಂದೂ ಸಹಕಾರ ನೀಡಲು ಸಿದ್ಧ ಎಂಬುದಾಗಿ ಅಭಿಪ್ರಾಯಪಟ್ಟರು.

ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಕಾರ್ಯಕ್ರಮ ನಿರ್ವಹಿಸಿದರು, ಖಜಾಂಚಿ ಕೆ.ಆರ್. ರಾಮಮೂರ್ತಿ ಧನ್ಯವಾದ ಸಮರ್ಪಿಸಿದರು. ವಾಸುದೇವ್ ಅವರೊಡನೆ ಸಂಘದ ಸಕ್ರಿಯ ಸದಸ್ಯ, ಲಲಿತಕಲಾ ಅಕಾಡೆಮಿ ಉಪಾಧ್ಯಕ್ಷ ಕೆ.ಆರ್. ಸುಬ್ಬಣ್ಣ ಅವರು ಉಪಸ್ಥಿತರಿದ್ದರು. ಕಲಾವಿದರ ಸುಂದರ ಸಂಜೆಯಲ್ಲಿ ದೆಹಲಿಯ ಕನ್ನಡದ ಖ್ಯಾತ ಕಲಾವಿದರುಗಳಾದ ಜಿ.ಆರ್. ಈರಣ್ಣ, ಅರುಣ್, ಶ್ರೀಕಾಂತ್ ಪೊದ್ದಾರ್, ಸುಧೀರ್ ಫಡ್ನೀಸ್, ಆನಂದ ಮುರಗೋಡ ಅಲ್ಲದೇ ಕಲಾ ಪ್ರದರ್ಶನದಲ್ಲಿ ಭಾಗವಹಿಸಿದ ಮಹಿಳಾ ಕಲಾವಿದೆಯ ಪಾಲ್ಗೊಂಡು ಕಾರ್ಯಕ್ರಮಕ್ಕೆ ಮೆರುಗು ನೀಡಿದರು.

## ಉಚಿತ ವೈದ್ಯಕೀಯ ತಪಾಸಣೆ

ಏಪ್ರಿಲ್ ತಿಂಗಳ 24ರ ಭಾನುವಾರದಂದು ಡಾ. ಭೀಮಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿ ಕೊಳ್ಳಬೇಕಾಗಿ ವಿನಂತಿ.

❑ ಪ್ರಧಾನ ಕಾರ್ಯದರ್ಶಿ

ದೆಹಲಿ ಒಕ್ಕಲಿಗ ಗೌಡ ಸಂಘವು 24.04.2011 ಭಾನುವಾರದಂದು ಸಂಜೆ 5 ರಿಂದ 8 ಗಂಟೆಯವರೆಗೆ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ವಾರ್ಷಿಕೋತ್ಸವ ಸಮಾರಂಭವನ್ನು ಆಯೋಜಿಸಿದೆ. ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಿಗರು ಭಾಗವಹಿಸಬೇಕೆಂದು ಅಧ್ಯಕ್ಷ ಡಾ. ಚಿದಾನಂದ ಮೂರ್ತಿ ಅವರು ಕೋರಿದ್ದಾರೆ.

## ಮುನ್ನೋಟ

ಈ ಭಾರಿಯೂ ರಾಷ್ಟದ ಅತ್ಯುನ್ನತ ಪ್ರಶಸ್ತಿಯಾದ ಪದ್ಮಭೂಷಣ, ಪದ್ಮಶ್ರೀ ನಮ್ಮ ಕರ್ನಾಟಕಕ್ಕೆ ಲಭಿಸಿರುವುದು ಹೆಮ್ಮೆಯ ವಿಷಯ. ಈ ಪ್ರಶಸ್ತಿಗೆ ಭಾಜನರಾದ ಶ್ರೀ ಆರ್.ಕೆ.ಶ್ರೀಕಂಠನ್ (ಪದ್ಮಭೂಷಣ), ಶ್ರೀ ಗಿರೀಶ್ ಕಾಸರವಳ್ಳಿ (ಪದ್ಮಶ್ರೀ), ಶ್ರೀ ದೇವನೂರು ಮಹಾದೇವ (ಪದ್ಮಶ್ರೀ) ಡಾ.ರಾಮದಾಸ್ ಪೈ (ಪದ್ಮಭೂಷಣ) ಶ್ರೀ ಟಿ.ಜೆ.ಎಸ್.ಜಾರ್ಜ್ (ಪದ್ಮಭೂಷಣ) ಶ್ರೀ ಅಜೀಂ ಪ್ರೇಮ್‌ಜೀ (ಪದ್ಮವಿಭೂಷಣ) ಅವರೆಲ್ಲರಿಗೂ ದೆಹಲಿಯ ಕನ್ನಡಿಗರ ಪರವಾಗಿ ಅಭಿನಂದನೆಗಳು. ಇದೇ ರೀತಿ ಅತೀ ಹೆಚ್ಚು ಕನ್ನಡಿಗರಿಗೆ ಪ್ರಶಸ್ತಿ ಲಭಿಸಲಿ ಎಂಬುದು ನಮ್ಮ ಆಶಯ. ಶ್ರೀ ಆರ್.ಕೆ. ಶ್ರೀ ಕಂಠನ್ ಹಾಗೂ ಶ್ರೀ ಗಿರೀಶ್ ಕಾಸರವಳ್ಳಿಯವರನ್ನು ದೆಹಲಿ ಕರ್ನಾಟಕ ಸಂಘಕ್ಕೆ ಆಹ್ವಾನಿಸಿ ಅಭಿನಂದಿಸಲಾಯಿತು.

ಇದೇ ತಿಂಗಳ 15,16 ಮತ್ತು 17ರಂದು ರಾಷ್ಟ್ರಕವಿ ಕುವೆಂಪು ಉತ್ಸವ ಕಾರ್ಯಕ್ರಮವಿದೆ. ಕಾರ್ಯಕ್ರಮ ತುಂಬಾ ಅದ್ದೂರಿಯಿಂದ ನಡೆಯಲಿದೆ. ಎಲ್ಲಾ ಕನ್ನಡಿಗರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿಸಬೇಕೆಂದು ವಿನಂತಿ.

ಬೇಸಿಗೆಯ ಬಿಸಿಲ ಆರಂಭದ ಹೊತ್ತಿಗೆ ಶಾಲಾ ಪರೀಕ್ಷೆಗಳು ಮುಗಿದಿವೆ. ಮಕ್ಕಳಿಗೆ ಓದುವ ಮತ್ತು ಹೆತ್ತವರಿಗೆ ಓದಿಸುವ ತಲೆನೋವಿನಿಂದ ಮುಕ್ತಿ. ಹೊರನಾಡ ಕನ್ನಡಿಗರಾದ ನಾವು ತವರಿಗೆ ಪ್ರಯಾಣ ಬೆಳೆಸುವ ಸಮಯ. ಅಜ್ಜ–ಅಜ್ಜಿ–ಬಂಧುಗಳುನ್ನು ನೋಡುವ ತವಕ. ಎಳೆಯರಿಗೆ ರಜೆಯ ಮಜದ ಕನಸು. ಪಟ್ಟಣದ ಬದುಕಿನಿಂದ ಹೊರಬಂದು ತಿಂಗಳ ಕಾಲ ನಮ್ಮ ಸಂಸ್ಕೃತಿಯಲ್ಲಿ ಬೆರೆಯುವ ಅವಕಾಶ. ನಮ್ಮೂರಲ್ಲಿ ನಮ್ಮ ಸಂಸ್ಕೃತಿಯ ಆಚಾರ–ವಿಚಾರಗಳು ಜೊತೆಗೆ ಕನ್ನಡ ನಾಡಿನ ಸುಂದರ ರಮಣೀಯ ಪ್ರಕೃತಿಯ ಮಡಿಲಲ್ಲಿ ಕಾಲ ಕಳೆಯುವ ಯೋಗ.

ತಮಗೆಲ್ಲಾ ಯುಗಾದಿ ಹಬ್ಬದ ಶುಭಾಶಯಗಳು. ರಜೆ ಕಳೆದು ಮತ್ತೆ ಭೇಟಿಯಾಗೋಣ.

❑ ಸಿ.ಎಂ.ನಾಗರಾಜ

ಅನುಭವ

# ಕುಂದಾನಗರಿಯಲ್ಲಿ ಬೆಳಗಿದ ಕುಂದದ ಕನ್ನಡ ಕೀರ್ತಿ

## ವಿಶ್ವ ಕನ್ನಡ ಸಮ್ಮೇಳನ

**"ತೇರನೆಳೆವರು ನಾವು-ಎಲ್ಲಿದ್ದರೇನು?**

**ಬೊಂಬಾಯಿ, ಮದರಾಸು, ಕಲ್ಕತ್ತ, ಡೆಲ್ಲಿ**

**ಎಲ್ಲೆಂದರಲ್ಲಿ"**

– ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ

ಎಂಬ ಕವಿವಾಣಿ ಬೆಳಗಾವಿಯಲ್ಲಿ ನಡೆದ ಎರಡನೇ ವಿಶ್ವ ಕನ್ನಡ ಸಮ್ಮೇಳನದಲ್ಲಿ ಸಾಗರೋಪಾದಿಯಲ್ಲಿ ಸೇರಿದ ಲಕ್ಷಾಂತರ ಕನ್ನಡಿಗರ ಜಾತ್ರೆ ಕಂಡು ನೆನಪಾಯಿತು. ಯಾವ ನಾಡಾದರೇನು ಕನ್ನಡಿಗರು ಸೇರಿದಲ್ಲೇ ಕನ್ನಡಮ್ಮನ ತೇರನೆಳೆವರು ನಾವು. ಕರ್ನಾಟಕದ ಗಡಿನಾಡಾದ ಬೆಳಗಾವಿಯಲ್ಲಿನ ಸಂಭ್ರಮ ಕಂಡಷ್ಟೂ ಮನ ತಣಿಯಲಿಲ್ಲ. ದೆಹಲಿ ಕರ್ನಾಟಕ ಸಂಘದ ಪ್ರತಿನಿಧಿಗಳಾಗಿ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಉಪಾಧ್ಯಕ್ಷ– ಬಿ.ಕೆ.ಬಸವರಾಜು ಮತ್ತು ಸಹ ಕಾರ್ಯದರ್ಶಿಯಾಗಿ ನಾನು ಬೆಳಗಾವಿ ವಿಶ್ವ ಕನ್ನಡ ಸಮ್ಮೇಳನಕ್ಕೆ ಪಯಣಿಸಿದ್ದೆವು. ದೆಹಲಿ ಕರ್ನಾಟಕ



ಸಂಘದ ಪರವಾಗಿ ಇಂಗಳೇಶ್ವರ ಅವರ ನಾಟಕ ತಂಡ ಮತ್ತು ಟಿ.ಎಸ್. ರಮೇಶ್ ಅವರ 'ಸುಗಮ ಸಂಗೀತ' ತಂಡಗಳು ಭಾಗವಹಿಸಿದ್ದವು. ಮಾರ್ಚ್ 10 ರಂದು ನಾವು ಬೆಳಗಿನ 2 ಗಂಟೆಗೆ ಬೆಳಗಾವಿ ತಲುಪಿದಾಗ ಇನ್ನೂ ಬೀದಿಯ ಡಿವೈಡರ್‌ಗಳಿಗೆ ಬಣ್ಣ ಬಳಿಯುವ ಕೆಲಸ ಸಾಗಿತ್ತು. ಪೋಲಿಸ್ ಸಿಬ್ಬಂದಿ ಸೇವಾನಿರತರಾಗಿದ್ದರು. ಮರುದಿನವೇ ಸಮ್ಮೇಳನದ ಉದ್ಘಾಟನೆ. ಇಡೀ ಊರಿಗೆ ಊರೇ ತಳಿರು ತೋರಣ, ಸುಣ್ಣ–ಬಣ್ಣಗಳಿಂದ ಸಿಂಗಾರಗೊಂಡಿತ್ತು. ಮರುದಿನ ನಮ್ಮ ತಂಗುದಾಣದಿಂದ ಮತ್ತೆ ನಗರದತ್ತ ಪ್ರಯಾಣಿಸುವಾಗ ಕನ್ನಡಮ್ಮನ ಮೆರವಣಿಗೆಗೆ ನಗರ ಸಿದ್ಧವಾಗಿತ್ತು. ಕನ್ನಡದ ಬಾವುಟಗಳನ್ನು ಹಿಡಿದ ಯುವಕರ ಸಣ್ಣ ದೊಡ್ಡ ಗುಂಪುಗಳು ಮುಖ್ಯರಸ್ತೆಗಳಲ್ಲೆಲ್ಲ ಕನ್ನಡ ಘೋಷಣೆ ಕೂಗುತ್ತ, ಹಾಡುತ್ತ, ಕುಣಿಯುತ್ತ ಸಂಭ್ರಮಿಸುತ್ತಿದ್ದರೆ ಬೆಳಗಾವಿ ನಗರಕ್ಕೆ ನಗರವೇ ಪುಳಕಗೊಂಡಿತ್ತು. ಇನ್ನು ಬೆಳಗಾವಿಯಲ್ಲಿ ಕೇಳಿ ಬಂದ ಕನ್ನಡ ಭಾಷೆಯ ಸೊಬಗಂತೂ ಹೇಳತೀರದು. ಇಲ್ಲಿ ದಕ್ಷಿಣ ಕರ್ನಾಟಕ ಭಾಗದ ಕನ್ನಡವಿತ್ತು, ಉತ್ತರ ಕರ್ನಾಟಕದ ಗಂಡು ಭಾಷೆ ಕೇಳುತ್ತಿತ್ತು. ಹೈದರಾಬಾದ್ ಕರ್ನಾಟಕದ ದೊಡ್ಡ ಧ್ವನಿಯ ಕನ್ನಡ ರಿಂಗಣಿಸುತ್ತಿತ್ತು, ಕರಾವಳಿಯ ಶಿಷ್ಟ ಕನ್ನಡ ಮೇಳೈಸಿತ್ತು. ಎಲ್ಲವೂ ಸೇರಿ ಬೆಳಗಾವಿಯೇ ಕರ್ನಾಟಕವಾಗಿತ್ತು. ವಿಶ್ವ ಕನ್ನಡ ಮೇಳ ನಾಡ ಹಬ್ಬವಾಗಿತ್ತು. ಬೆಳಗಾವಿ ಸುತ್ತಮುತ್ತಲಿನ ನಿಪ್ಪಾಣಿ, ಹಿರೇಬಾಗೇವಾಡಿ, ಪಾರಿಶ್ವಾಡ, ಖಾನಾಪೂರ,ಕಿತ್ತೂರು ಮುಂತಾದ ಪುಟ್ಟ ಪುಟ್ಟ ಹಳ್ಳಿ, ಹುಬ್ಬಳ್ಳಿ, ಧಾರವಾಡ,ಪುಣೆ, ಸಾತಾರಗಳಂಥ ನಗರಗಳಿಂದ ಜನ ಸಾಗರೋಪಾದಿಯಲ್ಲಿ ಸೇರಿ ಇದು ತಮ್ಮ ಮನೆಯದೇ ಹಬ್ಬವೆನ್ನುವಂತೆ ಪಾಲ್ಗೊಂಡಿದ್ದನ್ನು ಕಂಡು ಯಾವ ಕನ್ನಡ ಮನಸ್ಸುಗಳೂ ಮುದಗೊಳ್ಳದಿರಲಾರವು.

ಹೊರನಾಡ ಕನ್ನಡಿಗರೆಂದೋ ಏನೋ ಬೆಳಗಾವಿಯಿಂದ 15 ಕಿಮೀ ದೂರ ಪಣಜಿ ಮಾರ್ಗದಲ್ಲಿರುವ ಒಂದು ಹಾಸ್ಟೆಲ್‌ನಲ್ಲಿ ವಸತಿವ್ಯವಸ್ಥೆ ಕೊಟ್ಟು ನಮ್ಮನ್ನು ಊರ ಹೊರಗೇ ಇಟ್ಟಿದ್ದರು. ವಾಹನದ ಅನಾನುಕೂಲ ಒಂದೆಡೆಯಾದರೆ, ಕಾರ್ಯಕ್ರಮದ ವೇದಿಕೆಗಳು ಹತ್ತಿರವಿರದೇ ಎಲ್ಲೆಲ್ಲೋ ದಿಕ್ಕಾಪಾಲಾಗಿದ್ದು ಆಸಕ್ತಿ ಇದ್ದರೂ ಎಲ್ಲಾ ವೇದಿಕೆಗಳಿಗೆ ಓಡಾಡುವ ತೊಂದರೆಯಿಂದಾಗಿ ಹೋಗಲಾಗದ ಸಂಕಟ ಇನ್ನೊಂದೆಡೆ. ಹೊರನಾದ ಕನ್ನಡಿಗರನ್ನು ನೋಡಿಕೊಳ್ಳುವ ವ್ಯವಸ್ಥಾಪಕ ಅಧಿಕಾರಿಗಳಿಗೆ ಜಾತ್ರೆಗೆ ಬಂದವರು ಮರಳಿ ಸುರಕ್ಷಿತವಾಗಿ ತಲುಪಿದರೇ ಇಲ್ಲವೇ ಎಂದು ವಿಚಾರಿಸಿಕೊಳ್ಳುವ ವ್ಯವಧಾನವೂ ಇದ್ದಿಲ್ಲ. ಯಾವಾಗಲೂ ಅವರ ಮೊಬೈಲ್ ಬಳಕೆಯಲ್ಲಿರುತ್ತಿರಲಿಲ್ಲ, ಇಲ್ಲಾ ಅವರು ಕಾಲ್ ಎತ್ತುತ್ತಲೇ ಇರಲಿಲ್ಲ. ನಮ್ಮ ಜೊತೆ ಸೇರಿದ ಪುಣೆ ಕನ್ನಡ ಸಂಘದ ಹಿರಿಯ ದಂಪತಿಗಳಿಗೆ ಮರಳಿ ವಸತಿಗೆ ತಲುಪಲಾಗದೇ, ಎಷ್ಟು ಪ್ರಯತ್ನಿಸಿದರೂ ವ್ಯವಸ್ಥಾಪಕ ಅಧಿಕಾರಿ ಯ ಫೋನ್ ಸಿಗದೇ ನಗರದ ಪೋಲಿಸ್ ಸಿಬ್ಬಂದಿಗೆ ತಮ್ಮ ಅಸಹಾಯಕತೆ ವಿವರಿಸಿ ಕೊನೆಗೆ ಆ ಪುಣ್ಯಾತ್ಮರು ಆ ಹಿರಿಯ ದಂಪತಿಗಳನ್ನು ಕಗ್ಗತ್ತಲೆಯ ಕಗ್ಗಾಡಿನ ಜೆಸ್ನೂರಿನ ತಂಗುದಾಣವನ್ನು ತಲುಪಿಸಿ ಹೋದರಂತೆ. ಅವರು ಮರುದಿನವೇ ಯಾವ ಸಮ್ಮೇಳನವೂ ಬೇಡವೆಂದು ಮರಳಿ ಪುಣೆಗೆ ಹೊರಟು ನಿಂತಿದ್ದರು. ಕೆಲವರು ಗೋವೆಗೆ ಹೋದರು.

ವಿಶ್ವಕನ್ನಡ ಸಮ್ಮೇಳನದಲ್ಲಿ ಹಲವಾರು ಮಹತ್ವದ ವಿಷಯಗಳ ಕುರಿತು ಚಿಂತನೆಗಳು, ಸಂಗೀತ–ನಾಟಕ, ಹಾಸ್ಯ ಮುಂತಾದ ಜನಪ್ರಿಯ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆಯುತ್ತಿದ್ದವು. 'ಕನಸಿನ ಕರ್ನಾಟಕ–ವಿಚಾರ ಸಂಕೀರ್ಣ, ಮಕ್ಕಳ ಮಾತು–ಸಂವಾದ', ಸಮಕಾಲೀನ ಜಗತ್ತು ಮತ್ತು ಮಹಿಳೆ, 'ದಲಿತ ಸಂಸ್ಕೃತಿಯ ಅನನ್ಯತೆ' ಮತ್ತು 'ಸಮೂಹ ಮಾಧ್ಯಮ–ಸಾಮಾಜಿಕ ಕಳಕಳಿ' ಕುರಿತು ವಿಚಾರ ಗೋಷ್ಠಿ. ಹೀಗೆ ಹಲವಾರು ಗೋಷ್ಠಿಗಳು, ಸಂವಾದಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ನಗರದ ಬೇರೆ ಬೇರೆ ವೇದಿಕೆಗಳಲ್ಲಿ, ಕಲಾರಂಗಗಳಲ್ಲಿ ನಡೆಯುತ್ತಿದ್ದವು. ಅವೆಲ್ಲವನ್ನೂ ಏಕಕಾಲಕ್ಕೆ ಎಲ್ಲಾ ಕಡೆಗೂ ಓಡಾಡಿಕೊಂಡು ಆಸ್ವಾದಿಸಲು ಆಗದೇ ನಾನು ಬಹುಭಾಷಾ ಕವಿಗೋಷ್ಠಿ ಮತ್ತು ಹೊರನಾಡ ಕನ್ನಡಿಗರ ವಿಚಾರಗೋಷ್ಠಿ ಮತ್ತು ಪುಸ್ತಕ ಪ್ರದರ್ಶನವನ್ನಷ್ಟೇ ನೋಡಿ ಆನಂದಿಸಿದೆ.

**ಸಮ್ಮೇಳನದ ಉದ್ಘಾಟನೆ :** ಉದ್ಘಾಟನೆಯ ದಿನ ವಿಶ್ವಸುಂದರಿ ಐಶ್ವರ್ಯ ರೈ ಮತ್ತಿತರ ಸಿನೆಮಾ ತಾರೆಗಳ ಮುಖ್ಯ ಆಕರ್ಷಣೆಯಿಂದಾಗಿ ವಿಪರೀತ ಗದ್ದಲ, ಮಹಾಸಾಗರದಂಥ ಜನಪ್ರವಾಹ ನೋಡಿ ಗಾಬರಿಯಾಗಿತ್ತು. ಕೆಲವರು ಕ್ರೀಡಾಂಗಣಕ್ಕೆ ಹೋಗದೇ ಉಳಿದುಕೊಂಡರು. ಪೋಲೀಸರ ಅಂಕೆಗೂ ಸಿಗದ ಅವ್ಯವಸ್ಥೆ, ಅಶಿಸ್ತು ಎಲ್ಲೆಲ್ಲೂ ಆಗಿ ತಾರಾಮಣಿಗಳ ದರ್ಶನಕ್ಕಾಗಿ ಜನ ಹುಚ್ಚೆದ್ದು ಗಲಾಟೆ ನಡೆಸಿದ್ದರು. ಕಿಸೆಗಳ್ಳರಿಂದ ಕೆಲವರು ಹಣ ಕಳೆದುಕೊಂಡರು, ಕೆಲವರು ಗಾಯಗೊಂಡರು. ಹೇಗೋ ಏನೋ ಹರಸಾಹಸ ಮಾಡಿ ನಮ್ಮ ಸಂಘದ ಅಧ್ಯಕ್ಷ ವೆಂಕಟಾಚಲ ಹೆಗಡೆ ಅವರು ನಮ್ಮನ್ನೆಲ್ಲ ಎಳೆದುಕೊಂಡು ಕ್ರೀಡಾಂಗಣವನ್ನು ಪ್ರವೇಶಿಸಿಸುವಲ್ಲಿ ಸಫಲರಾದರು. ಆದರೆ ಅಲ್ಲಿ ಕಾಲಿಡಲೂ ಜಾಗವಿಲ್ಲ. ರಕ್ಷಣಾಕಾರ್ಯದಲ್ಲಿ ಇರಬೇಕಾದ ಬಹುಪಾಲು ಪೋಲಿಸ್ ಸಿಬ್ಬಂದಿಯೆಲ್ಲ ಐಶ್ವರ್ಯ ರೈ ಬಚ್ಚನ್‌ಳನ್ನು ಕಾಣುವ ಕಾತರತೆಯಿಂದ

ಒಂಟಿಗಾಲಲ್ಲಿ ನಿಂತಿದ್ದರು. ನಿಲ್ಲಲೂ ಆಗದೇ ಭವ್ಯ ವೇದಿಕೆಯ ವೈಭವವನ್ನು ಕಣ್ಣಲ್ಲಿ ತುಂಬಿಕೊಂಡು ಕಾಲ್ತುಳಿತಕ್ಕೆ ಸಿಕ್ಕಿ ಪ್ರಾಣಹೋದಿತೆಂದು ಅಲ್ಲಿಂದ ಪಾರಾಗಿ ಹೊರಬಂದೆವು. ಹೊರಬರುವಾಗ ನಮ್ಮ ಕನ್ನಡದ ಖ್ಯಾತ ಗಾಯಕಿ ಸಂಗೀತಾ ಕಟ್ಟಿ ಕುಲಕರ್ಣಿ ಕೂಡ ಹೊರಬರುವ ದಾರಿ ಕಾಣದೇ, ಕ್ಯಾರೇ ಎಂದು ಮಾತಾಡಿಸುವವರೂ ಇಲ್ಲದೇ ನಮ್ಮೊಂದಿಗೆ ಜೊತೆಯಾದರು. "ನೀವೆಲ್ಲ ಕನ್ನಡ ಸಂಸ್ಕೃತಿ ಇಲಾಖೆಯವರು ಕಳಿಸಿಕೊಡುವ ಕಲಾವಿದರನ್ನು ಮಾತ್ರ ಕರೀತಿರಿ, ನಮ್ಮಂಥ ಕಲಾವಿದರು ನಿಮಗೆಲ್ಲಾ ಬ್ಯಾಡ ಎಂದು ತಮ್ಮ ಸಂಕಟ / ಬೇಸರವನ್ನೆಲ್ಲ ನಮ್ಮ ಮೇಲೆ ಹಾಯಿಸಿದರು. ನೀವ್ ಹೇಳೂದು ಖರೇ ಐತ್ರಿ, ನಿಮ್ಮನ್ನು ಖಂಡಿತಾ ಕರಿಸ್ಕೋತೀವಿ ಎಂದು ಅವರನ್ನೂ ಸಮಾಧಾನಿಸುತ್ತ, ನಾವೂ ಸಮಾಧಾನ ಪಟ್ಟುಕೊಳ್ಳುತ್ತ ಹೇಗೋ ಏನೋ ಹೊರಬಂದೆವು. ಆ ಹೊತ್ತಿಗೆ ನಮ್ಮ ದೆಹಲಿ ಮಿತ್ರರಾದ ಡಾ. ಬಿಳಿಮಲೆ ಮತ್ತು ಪ್ರೊ. ಎಚ್.ಎಸ್. ಶಿವಪ್ರಕಾಶ್ ಅವರು ಹೋಟೆಲ್ ರಾಮದೇವ್‌ದಲ್ಲಿ ಆರಾಮವಾಗಿ ಕುಳಿತು ಟಿವಿಯಲ್ಲಿ ಉದ್ಘಾಟನಾ ಸಮಾರಂಭವನ್ನು ನೋಡುತ್ತಿದ್ದಾರೆಂದು ತಿಳಿದು ನಾವೂ ಇಲ್ಲಿ ಪರದಾಡುವುದಕ್ಕಿಂತ ಅಲ್ಲೇ ಹೋಗೋಣವೆಂದುಕೊಂಡು ಮರಳಿದೆವು.

ಸಮ್ಮೇಳನಕ್ಕಾಗಿ ನಲ್ವತ್ತು ಕೋಟಿಗಳನ್ನು ವ್ಯಯಿಸಿದ ಸರ್ಕಾರ, ವೇದಿಕೆಗಳಿಂದ ವೇದಿಕೆಗೆ ಹೋಗಲು ಪುಟ್ಟ ವಾಹನಗಳ ವ್ಯವಸ್ಥೆಯನ್ನು ಅಲ್ಲಲ್ಲೇ ಆಯಾ ವೇದಿಕೆಗಳ ಹತ್ತಿರವೇ ಇಟ್ಟಿದ್ದರೇ ಜನರಿಗೆ ಅನುಕೂಲವಾಗಿರುತ್ತಿತ್ತು. ಎಲ್ಲಾ ಸರಕಾರಿ ಇಲಾಖೆಗಳ ಅಧಿಕಾರಿಗಳು, ಅಕಾಡೆಮಿಗಳು, ಪ್ರಖ್ಯಾತ ಕಲಾವಿದರು, ಸಾಹಿತಿಗಳೂ, ಅನಿವಾಸಿ ಕನ್ನಡಿಗರು ಊರಿನ ಹೋಟೆಲುಗಳಲ್ಲೆಲ್ಲಾ ತುಂಬಿಕೊಂಡು ಹೊರನಾಡಿನಿಂದ ಆಗಮಿಸಿದ ಕನ್ನಡ ಸಂಘ-ಸಂಸ್ಥೆಗಳ ಪ್ರತಿನಿಧಿಗಳು, ಸಣ್ಣ-ಪುಟ್ಟ ಕಲಾವಿದರುಗಳಿಗೆಲ್ಲಾ ಊರಿನ ಗಡಿಯಾಚೆ ವಸತಿ ಒದಗಿಸಿ ಪರದಾಡುವಂತಾಗಿದ್ದು ಬಿಟ್ಟರೆ ಇಡೀ ವಿಶ್ವ ಕನ್ನಡ ಸಮ್ಮೇಳನ ನಿಜದ ಅರ್ಥದಲ್ಲಿ ಕನ್ನಡದ ಜಾತ್ರೆ, ಮೂರು ದಿನಗಳ ಕಾಲ ಕನ್ನಡವನ್ನೇ ಧ್ಯೇನಿಸಿದ ಕನ್ನಡಿಗರ ಮೇಳ. ಜನ್ಮದಲ್ಲೇ ಇಂಥ ಜನಸಾಗರವನ್ನು ಕಂಡಿರಲಿಲ್ಲವೆಂದು ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ ನಾಡೋಜ ಪಾಟೀಲ್ ಪುಟ್ಟಪ್ಪನವರು ಅಚ್ಚರಿಪಟ್ಟರು.

**ವಿಶ್ವ ಕನ್ನಡ ಆಗಲಿ :** "ನಾವು ಕೇವಲ ಕನ್ನಡ ಜಗತ್ತನ್ನು ಸೃಷ್ಟಿಸಿಕೊಂಡರೇ ಸಾಲದು, ಜಗತ್ತಿನಲ್ಲಿ ಕನ್ನಡ ಭಾಷೆಯನ್ನು ಮುಖ್ಯಭಾಷೆಯನ್ನಾಗಿ ರೂಪಾಂತರ ಮಾಡಬೇಕು. ಮನೆ, ಮನ ಮತ್ತು ಶಿಕ್ಷಣದಲ್ಲಿ ಕನ್ನಡಕ್ಕೆ ಪ್ರಥಮ ಸ್ಥಾನ ಸಿಗಬೇಕು, ಆಂಗ್ಲ ಭಾಷೆ ಕನ್ನಡಕ್ಕೆ ಫಲವತ್ತಾದ ಗೊಬ್ಬರವಾಗಬೇಕು" ಎಂಬ ಸಂದೇಶವನ್ನು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ.ಯು.ಆರ್. ಅನಂತಮೂರ್ತಿ ಅವರು ಕನ್ನಡಿಗರಿಗೆ ಮುಟ್ಟಿಸಿದರು. ಪ್ರಾಥಮಿಕ ಹಂತದಲ್ಲಿ ಕನ್ನಡವನ್ನು ಕಡ್ಡಾಯ ಮಾಡದಿದ್ದರೆ ಭಾಷೆಗೆ ಉಳಿಗಾಲವಿಲ್ಲ ಎಂದು ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಆತಂಕ ವ್ಯಕ್ತಪಡಿಸಿದರು.

**ಜಾಗತಿಕ ಸಾಮರಸ್ಯ ರೂಪಿಸುವ ಕಾವ್ಯ ರಚನೆಯ ಅಗತ್ಯ :** ಸಮಾರಂಭದ ಎರಡನೇ ದಿನ ಚೆನ್ನಮ್ಮ ವೇದಿಕೆಯಲ್ಲಿ ಡಾ. ಚೆನ್ನವೀರ ಕಣವಿಯವರ ಅಧ್ಯಕ್ಷತೆಯಲ್ಲಿ 'ಸಿರಿಗನ್ನಡ' ಕವಿಗೋಷ್ಠಿ ನಡೆದರೆ, ಕುಮಾರ ಗಂಧರ್ವ ವೇದಿಕೆಯಲ್ಲಿ 'ಬಹುಭಾಷಾ' ಕವಿಗೋಷ್ಠಿ ನಡೆಯುತ್ತಿತ್ತು. ಬಹುಭಾಷಾ ಕವಿಗೋಷ್ಠಿಯನ್ನು ಉದ್ಘಾಟಿಸಿದ ದೊಡ್ಡರಂಗೇಗೌಡರು ಕವಿಗೋಷ್ಠಿಯನ್ನು ಏಕಕಾಲಕ್ಕೆ ಎರಡು ಕಡೆ ಇಟ್ಟಿರುವುದನ್ನು ಆಕ್ಷೇಪಿಸಿ, ಒಂದೇ ವೇದಿಕೆಯಲ್ಲಿ ಎಲ್ಲರನ್ನೂ ಕೂಡಿಸಿದ್ದರೆ ಸಮಸ್ಯೆ ಏನಿತ್ತು ಎಂದು ಪ್ರಶ್ನಿಸಿದರು. ಕನ್ನಡ ಈಗ ಕಾವೇರಿಯಿಂದ ಗೋದಾವರಿವರೆಗೆ ಮಾತ್ರ ಸೀಮಿತವಾಗಿಲ್ಲ. ದೇಶದ ಆಚೆ, ಅಟ್ಲಾಂಟಿಕ್ ಸಾಗರದಾಚೆ, ಉತ್ತರ-ದಕ್ಷಿಣ ಧ್ರುವಗಳವರೆಗೂ ವ್ಯಾಪಿಸಿದೆ. ಆ ಮಟ್ಟದಲ್ಲಿ ಕನ್ನಡ ಬೆಳೆಸಲು ಕವಿಗಳು ಸಿದ್ಧವಾಗಬೇಕು. ಜಾಗತಿಕ ಸಾಮರಸ್ಯವನ್ನು ರೂಪಿಸುವ ಕಾವ್ಯರಚನೆಯ ಅಗತ್ಯವನ್ನು ಬಹುಭಾಷಾ ಕವಿಗೋಷ್ಠಿ ಒತ್ತಿ ಹೇಳಿತು. ಅಧ್ಯಕ್ಷತೆ ವಹಿಸಿದ್ದ ಪ್ರೊ.ಎಚ್.ಎಸ್.ಶಿವಪ್ರಕಾಶ್ ಅವರು-"ನವ ವಸಾಹತುಶಾಹಿ ವ್ಯವಸ್ಥೆಯಲ್ಲಿ ಕನ್ನಡ, ಕನ್ನಡಿಗರು, ಕನ್ನಡತನಕ್ಕೆ ಚ್ಯುತಿ ಬರುತ್ತಿದೆ. ಅದನ್ನು ಸಮರ್ಥವಾಗಿ ಎದುರಿಸಿ ಕನ್ನಡ ಸಂಸ್ಕೃತಿಯನ್ನು ಜಗದಗಲ ಬೆಳೆಸಬೇಕಿದೆ. ನೊಂದವರು, ಕೆಳಜನರು, ದೀನರು-ದಲಿತರ ಪರ ಧ್ವನಿ ಎತ್ತುವ ಕಾವ್ಯ ಬೆಳೆಯಬೇಕು. ಜಾಗತಿಕ ಮಟ್ಟದಲ್ಲಿ ಕನ್ನಡಿಗರು ವ್ಯಾಪಿಸುವ ಹಿನ್ನೆಲೆಯಲ್ಲಿ ಕನ್ನಡ ಭಾಷೆ ಬೆಳೆಸುವ ಶಕ್ತಿಯನ್ನು ಕಾವ್ಯದ ಮೂಲಕ ಬೆಳೆಸಬೇಕು" ಎಂದರು. 'ಕುಬೇರನ ರಾಜ್ಯದ ಕುರುಡ' ಕುರಿತು ಕಾವ್ಯ ವಾಚನ ಮಾಡಿದ ಶಿವಪ್ರಕಾಶ್ ಅವರು ಸ್ವತಃ ಅರಿವು ಮೂಡಿಸುವುದರೊಂದಿಗೆ ಕಾವ್ಯಕ್ಷೇತ್ರವನ್ನು ಶ್ರೀಮಂತಗೊಳಿಸಬೇಕೆಂದರು. ತೆಲುಗು ಕವಿ ಡಾ.ಶಿವಾರೆಡ್ಡಿ, ಮರಾಠಿ ಕವಿಯಿತ್ರಿ ಪ್ರೊ.ಮೀರಾ ತಾರಳೇಕರ್, ತುಳು ಕವಿ ಡಾ.ವಾಮನ ನಂದಾವರ, ಕೊಂಕಣಿಯ ವೇಣುಮಾಧವ ಬೋರ್ಕರ್ ಮುಂತಾದವರು ಕಾವ್ಯವಾಚಿಸಿದರು. ಜೊತೆಗೆ ಅನುವಾದಕರು ಸಮರ್ಥವಾಗಿ ಅನುವಾದವನ್ನು ನೀಡಿದರು. ಕೊನೆಯಲ್ಲಿ ವೈದೇಹಿ ಅವರು 'ನನ್ನ ಅಮ್ಮನ ಸೀರೆ' ಕಾವ್ಯವಾಚಿಸಿದರು. ರಾಜ್ಯದ ಗಡಿನಾಡು, ಕುಂದಾನಗರ ಖ್ಯಾತಿಯ ಬೆಳಗಾವಿಯಲ್ಲಿ ಬಹುಭಾಷಾ ಕವಿಗಳು ಸಾಮರಸ್ಯದ ಬದುಕಿನ ಜತೆಗೆ ಅಂಥ ಕನ್ನಡ ಬೆಳೆಸುವ ಕರೆ ನೀಡಿದರು.

**ಹೊರನಾಡ ಕನ್ನಡಿಗರ ಗೋಷ್ಠಿ :** ಹೊರನಾಡ ಕನ್ನಡಿಗರ ಗೋಷ್ಠಿ ಮಾರ್ಚ್ 12 ರಂದು ಮಧ್ಯಾಹ್ನ 3 ಗಂಟೆಗೆ ಆರಂಭವಾಯಿತು. ಇಂಗ್ಲೆಂಡ್ ದೇಶದ ಲ್ಯಾಂಬರ್ತ್‌ನ ಮೇಯರ್ ನೀರಜ್ ಪಾಟೀಲ್ ಈ ಗೋಷ್ಠಿಯನ್ನು ಉದ್ಘಾಟಿಸಿದರು. ಪ್ರತಿ ಮಾತಿಗೂ ಬಸವೇಶ್ವರ, ಕುವೆಂಪು ಅವರ ನುಡಿಗಳನ್ನು ಉಲ್ಲೇಖಿಸುತ್ತಾ ಮಾತನಾಡಿ ಜನರ ಮೆಚ್ಚುಗೆ ಗಳಿಸಿದರು. ಅಮೆರಿಕಾದ 'ಅಕ್ಕ' ಸಂಘಟನೆಯ ಅಧ್ಯಕ್ಷ ಅಮರನಾಥ ಗೌಡ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ದಟ್ಸ್ ಕನ್ನಡ ಡಾಟ್ ಕಾಮ್‌ನ ಸಂಸ್ಥಾಪಕ-ಪತ್ರಕರ್ತ ಶ್ಯಾಮ್ ಸುಂದರ್ ಅವರಿಗೆ ಕಡಲಾಚೆಯ ಕನ್ನಡಿಗರ ಒಡನಾಟ ಬಹಳ. 'ಕಡಲಾಚೆಯ ಕನ್ನಡಿಗರು ತಮ್ಮ ವೈಯಕ್ತಿಕ ಸಂಕಟಗಳನ್ನು ಹಂಚಿಕೊಂಡಿದ್ದೇ ಕಡಿಮೆ. ಆದರೆ ಸಾಮೂಹಿಕ ನೆಲೆಯಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಬಗ್ಗೆ ಮಾತನಾಡುತ್ತಲೇ ಬಂದಿದ್ದಾರೆ' ಎಂದರು. ಈ ಗೋಷ್ಠಿಯಲ್ಲಿ ಕ್ಯಾಲಿಫೋರ್ನಿಯಾ, ಮಸ್ಕತ್, ಕತಾರ್, ಇಥಿಯೋಪಿಯಾ, ಕಲ್ಕತ್ತ, ಮುಂಬಾಯಿ, ಚೆನ್ನೈ ಕಡೆಗಳಿಂದಲೂ ಕನ್ನಡಿಗರು ಪಾಲ್ಗೊಂಡಿದ್ದರು.



ದೆಹಲಿಯ ಡಾ. ಪುರುಷೋತ್ತಮ ಬಿಳಿಮಲೆ ಉತ್ತರ ಭಾರತದಲ್ಲಿನ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾ 'ಹೊರನಾಡುಗಳಲ್ಲಿ ಕರ್ನಾಟಕದ ಪೂರ್ಣ ಪ್ರತಿನಿಧೀಕರಣವಂತೂ ಆಗಿಲ್ಲ. ಇದಕ್ಕೆ ವಲಸೆಯ ಹಿಂದಿರುವ ಸಾಮಾಜಿಕ ಸೂಕ್ಷ್ಮಗಳೇ ಕಾರಣ' ಎಂದರು. ಶತಮಾನದ ಹಿಂದೆಯೇ ಮಂಗಳೂರಿನಲ್ಲಿ ಬಾಸೆಲ್ ಮಿಷನ್ ಸೇರಿದಂತೆ ಇತರ ಕ್ರೈಸ್ತ ಮಿಷನರಿಗಳು ನಡೆಸಿದ ಶಿಕ್ಷಣ ಕ್ರಾಂತಿಯಿಂದಾಗಿ ಅಕ್ಷರಸ್ಥರಾದ ಕರಾವಳಿಯ ಮಂದಿ ಮುಂಬೈ ಸೇರಿದಂತೆ ಹಲವು ಕಡೆ ವಲಸೆ ಹೊರಟರೆ, ಉತ್ತರ ಕರ್ನಾಟಕದ ವೀರಶೈವ ಮಠಗಳ ಶಿಕ್ಷಣ ಪ್ರಸಾರದಿಂದಾಗಿ ಜಾಗೃತರಾದವರು ಬದುಕು ಅರಸಿ ದೇಶದ ಹಲವು ಕಡೆ ವಲಸೆ ಹೋದರು. ಆದರೆ ಕಳೆದ ಕಾಲು ಶತಮಾನದಲ್ಲಿ ರಾಜ್ಯದ ಮೂಲೆ ಮೂಲೆಗಳಿಂದ ಭಾರಿ ಸಂಖ್ಯೆಯಲ್ಲಿ ಉದ್ಯೋಗ ಅರಸುತ್ತಾ ಹೊರದೇಶ, ಹೊರನಾಡುಗಳಿಗೆ ತೆರಳಿ ನೆಲೆಸಿದರು. ಆದರೆ ಇವರಲ್ಲಿ ಬಹುತೇಕ ಮಂದಿ ಸಾಮಾಜಿಕವಾಗಿ ಮೇಲುಸ್ತರದವರೇ ಆಗಿರುವುದು ಗಮನಾರ್ಹ ಎಂದು ವಲಸೆಯ ನೆಲೆಗಳನ್ನು ಅವರು ಗುರುತಿಸಿದರು.

‘ಆದರೆ ವಸಾಹತುಪೂರ್ವ ಕಾಲದಲ್ಲಿ ಕರ್ನಾಟಕದಿಂದ ಇಂತಹ ವಲಸೆ ನಡೆದದ್ದು ಬಹಳ ಕಡಿಮೆ’ ಎಂದ ಅವರು ‘ಉತ್ತರದ ಜೈನ, ಬೌದ್ಧ ಧರ್ಮಗಳನ್ನು ತನ್ನ ಒಡಲಲ್ಲಿ ತಂಪಾಗಿರಿಸಿಕೊಂಡ ಕನ್ನಡನಾಡು, ಉತ್ತರದಿಂದ ಬಂದ ಸೂಫಿ ಸಂತರ ನೆಲೆವೀಡಾಯಿತು. ಈ ನೆಲದಲ್ಲಿ 800ಕ್ಕೂ ಹೆಚ್ಚು ಸೂಫಿ ಗ್ರಾಮದೇವತೆಗಳ ನೆಲೆಗಳಿವೆ; ಆಫ್ರಿಕ ಮೂಲದ ಸಿದ್ದಿಗಳಿಗೂ ಈ ನಾಡು ನೆಲೆ ಒದಗಿಸಿದೆ. ಹೀಗೆ ಎಲ್ಲಾ ಒಳ್ಳೆಯದರ ಸಾರದಿಂದ ಬೆಳೆದ ಕನ್ನಡ ಸಂಸ್ಕೃತಿ ಅನನ್ಯ’ ಎಂದರು. ಕೇರಳ, ಬಂಗಾಳ, ತಮಿಳುನಾಡಿನ ಜನಪ್ರತಿನಿಧಿ ರಾಜಧಾನಿಯಲ್ಲಿ ನಡೆಸುವ ‘ಲಾಬಿ’ಗಳನ್ನು ವಿವರಿಸುತ್ತಾ ‘ಕರ್ನಾಟಕ ಸರ್ಕಾರ ಅದಕ್ಷತೆ ತೋರುತ್ತಿದೆ’ ಎಂದು ಟೀಕಿಸಿದರು.

ಉತ್ತರ ಭಾರತದಲ್ಲಿ ದುರ್ಬಲಗೊಂಡ ಕರ್ನಾಟಕದ ಧ್ವನಿಯನ್ನು ಗಟ್ಟಿಗೊಳಿಸುವುದಕ್ಕೆ ದೆಹಲಿಯಲ್ಲಿ ‘ಕರ್ನಾಟಕ ಅಧ್ಯಯನ ಕೇಂದ್ರ’ವನ್ನು ತೆರೆಯಬೇಕೆಂದು ಆಗ್ರಹಿಸಿ, ಉತ್ತರ ಭಾರತದ ಕೆಲವು ವಿವಿಗಳಲ್ಲಿ ಕನ್ನಡ ಪೀಠವನ್ನು ಸ್ಥಾಪಿಸಬೇಕಾದ ಅನಿವಾರ್ಯತೆಯನ್ನೂ ಒತ್ತಿ ಹೇಳಿದರು.

ದೆಹಲಿ ಕನ್ನಡಿಗರು ನಾಡು ನುಡಿ, ಕಲೆ, ಸಂಸ್ಕೃತಿಯ ಅಭಿಮಾನಿಗಳಾದರೂ ದೆಹಲಿಯಲ್ಲಿ ನಡೆಯುವ ಅನೇಕ ಚಿಂತನೆ / ಗೋಷ್ಠಿಗಳಿಗೆ ಜನ ಬಾರದೇ ವಿಚಿತ್ರ ಸಂಕಟವನ್ನು ಅನುಭವಿಸುವ ನನಗೆ ಕುಮಾರ ಗಂಧರ್ವ ವೇದಿಕೆಯಲ್ಲಿನ ಎರಡೂ ಗೋಷ್ಠಿಗಳಲ್ಲಿ ಇಡೀ ವೇದಿಕೆ, ಕುರ್ಚಿಗಳೆಲ್ಲ ತುಂಬಿ ಮತ್ತೂ ಜನ ನಿಂತುಕೊಂಡು, ಕಾಲುದಾರಿಯಲ್ಲಿ ಕಾರ್ಪೆಟ್ ಹಾಸಿನಲ್ಲೇ ಕುಳಿತು ತನ್ಮಯತೆಯಿಂದ, ಸಹನೆಯಿಂದ ಪೂರ್ತಿ ಗೋಷ್ಠಿ ಮುಗಿಯುವವರೆಗೆ ಕೇಳಿದ್ದು ಸಂತಸ ತಂದಿತು. ಸಮಯದ ಅಭಾವದಿಂದ ಗೋಷ್ಠಿಯಲ್ಲಿ ಮಾತನಾಡುವವರ ಸಮಯದಲ್ಲೂ ಕಡಿತವಾಗಿತ್ತು. ಆದರೆ ನೆರೆದ ಜನ ‘ಇಲ್ರೀ .....ಮಾತಾಡ್ರಿ.. ಮಾತಾಡ್ರೀ ಏನೂ ಆಗುದಿಲ್ಲ’ ಎಂದು ವಿದ್ವಾಂಸರನ್ನು ಹುರಿದುಂಬಿಸಿದ್ದು ಹೆಚ್ಚಿನ ಸಂತೋಷದ ವಿಷಯವಾಗಿತ್ತು.

ಕನ್ನಡ ಸಂಸ್ಕೃತಿ ಸಚಿವ ಗೋವಿಂದ ಕಾರಜೋಳ, ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಜಿ. ವೆಂಕಟಸುಬ್ಬಯ್ಯ, ವಿಧಾನ ಪರಿಷತ್ ಸದಸ್ಯ ಗಣೇಶ್ ಕಾರ್ನಿಕ್, ಇನ್ಫೋಸಿಸ್ ಪ್ರತಿಷ್ಠಾನದ ಮುಖ್ಯಸ್ಥೆ ಸುಧಾಮೂರ್ತಿ ಸೇರಿದಂತೆ ಹಲವು ಗಣ್ಯರು ಸಭಿಕರ ನಡುವೆ ಕುಳಿತಿದ್ದರು.

ಸಮ್ಮೇಳನದ ಕೊನೆಯ ದಿನ ಕ್ಲಸ್ಟರ್ ಫೌಂಡ್ರಿ ವೇದಿಕೆಯಲ್ಲಿ ‘ನಾ ಸತ್ತಿಲ್ಲ’ ನಾಟಕದ ಅದ್ದೂರಿ ಪ್ರದರ್ಶನ ಮತ್ತು ಸುಗಮ ಸಂಗೀತದ ಮಾಧುರ್ಯದಿಂದ ದೆಹಲಿ ಕನ್ನಡಿಗ ಕಲಾವಿದರು ಬೆಳಗಾವಿಯ ಜನ ಮನ ಗೆಲ್ಲುವಲ್ಲಿ ಸಫಲರಾದರು.

ವಿಶ್ವಕನ್ನಡ ಸಮ್ಮೇಳನ ಮುಗಿದು ಇತಿಹಾಸದ ಪುಟಗಳಲ್ಲಿ ದಾಖಲಾಯಿತು. ಆದರೆ ನನ್ನ ಸ್ಮೃತಿಪಟಲದಲ್ಲಿ ಬಹುಕಾಲ ಉಳಿಯುಂತಹ, ಬದುಕಿನ ಬಹುಮೂಲ್ಯ ನೆನಪುಗಳು ಗೂಡುಕಟ್ಟಿಕೊಂಡಿವೆ. ನಾನು ನನ್ನ ಜೀವಮಾನದಲ್ಲೇ ಕಂಡ ಮೊದಲ ಹೊರನಾಡ ಕನ್ನಡ ಸಮ್ಮೇಳನವಿದು. ದೆಹಲಿ ಕರ್ನಾಟಕ ಸಂಘದ ಪ್ರತಿನಿಧಿಯಾಗಿ ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸಿ ಅನೇಕ ಹಿರಿಯ ಸಾಹಿತಿವರೇಣ್ಯರನ್ನು, ಕಲಾವಿದರನ್ನು, ಪತ್ರಕರ್ತರನ್ನು, ಗುರುತು ಪರಿಚಯದವರನ್ನು ಕಾಣುವ ಸುಯೋಗ ದೊರೆತದ್ದು ಅನಿರ್ವಚನೀಯ ಮತ್ತು ಚಿರಸ್ಮರಣೀಯ. ವಿಶ್ವಕನ್ನಡ ಸಮ್ಮೇಳನದ ಫಲಶ್ರುತಿ ಏನೇ ಇರಲಿ, ಈ ಪರಿ ಸಾಗರೋಪಾದಿಯಲ್ಲಿ ಕನ್ನಡಿಗರನ್ನು ಒಂದೆಡೆ ಮೇಳೈಸಿ ನಡೆಸಿದ ಜಾತ್ರೆಯ ಸಂಭ್ರಮ ನಿಜಕ್ಕೂ ಪ್ರಶಂಸನೀಯ.

❑ ರೇಣುಕಾ ಎಸ್. ನಿಡಗುಂದಿ

# ವಿಶ್ವ ಕನ್ನಡ ಸಮ್ಮೇಳನವನ್ನು ಮುಟ್ಟಿದ “ದೆಹಲಿಯ ಕೊರಳಿನ ಕರೆ”

ಬೆಳಗಾವಿಯಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿ ದೆಹಲಿ ಕರ್ನಾಟಕ ಸಂಘದಿಂದ ಎರಡು ಸಾಂಸ್ಕೃತಿಕ ತಂಡಗಳ ಕಲಾ ಪ್ರದರ್ಶನಕ್ಕೆ ಸಮ್ಮೇಳನದ ಆಯೋಜಕರಾದ ಕರ್ನಾಟಕ ಸರ್ಕಾರ ಆಹ್ವಾನದ ಮೇರೆಗೆ ಶ್ರೀ ಶಿವಾನಂದ ಇಂಗಳೇಶ್ವರ ಹಾಗೂ ಶ್ರೀ ಟಿ.ಎಸ್. ರಮೇಶ್ ಅವರ ನೇತೃತ್ವದಲ್ಲಿ ಒಂದು ನಾಟಕ ತಂಡ ಹಾಗೂ ಒಂದು ಸುಗಮ ಸಂಗೀತ ತಂಡ ಬೆಳಗಾವಿಗೆ ತೆರಳಿತ್ತು.

13.03.2011ರಂದು ಬೆಳಗಾವಿಯ ಉದ್ಯಮಬಾಗ್‌ದಲ್ಲಿರುವ ‘ಬೆಳಗಾಂ ಫೌಂಡರಿ ಕ್ಲಸ್ಟರ್’ ಸಭಾಂಗಣದಲ್ಲಿ ಕಿಕ್ಕಿರಿದು ತುಂಬಿದ್ದ ಜನಸ್ತೋಮದ ನಡುವೆ ಸಂಜೆ 7ಕ್ಕೆ ನಡೆದ ‘ಆಲಿಸಿ, ದೆಹಲಿಯ ಕೊರಳಿನ ಕರೆ’ ಎಂಬ ಸುಗಮ ಸಂಗೀತ ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಸದಸ್ಯರಾದ ಶ್ರೀ ಭೀಮಸೇನ ಭಜಂತ್ರಿ ಹಾಗೂ ಶ್ರೀ ಎಸ್.ಎಸ್. ಗೋವಿಂದರಾಜು ಅವರು ಭಕ್ತಿಗೀತೆ, ವಚನ, ದಾಸರಪದ, ತತ್ವಪದ, ಭಾವಗೀತೆ, ರಂಗಗೀತೆ ಹಾಗೂ ಜಾನಪದ ಗೀತೆಗಳನ್ನು ಕರ್ಣಾನಂದಕರವಾಗಿ ಸಾದರಪಡಿಸಿದರು.

ಶ್ರೀ ಭಜಂತ್ರಿಯವರು, ಕಾರ್ಯಕ್ರಮವನ್ನು ರಂಗಗೀತೆಯೊಂದರಿಂದ ಆರಂಭಿಸಿದರು ಮತ್ತು ಅವರ ಎಲ್ಲಾ ಸುಶ್ರಾವ್ಯ ಗೀತೆಗಳು ಅಮೋಘವಾಗಿದ್ದವು. ಅದರಲ್ಲೂ ಅಲ್ಲಮ ಪ್ರಭುಗಳ ‘ಅಗ್ನಿಯ ಸುಡುವಲ್ಲಿ, ಉದಕವ ತೊಳೆವಲ್ಲಿ’ ವಚನ ತುಂಬಾ ಅರ್ಥಗರ್ಭಿತವಾಗಿತ್ತು. ಅವರ ಶೃತಿಶುದ್ಧ ಗಾಯನ ನೆರೆದಿದ್ದವರ ಮನಸೂರೆಗೊಂಡಿತು. ಶ್ರೀ ಗೋವಿಂದರಾಜು ಅವರು ‘ಹೋಗು ಮನಸೇ ಹೋಗು’ ಎಂಬ ಗೀತೆಯನ್ನು ತಮ್ಮ ಮಧುರ ಕಂಠದಿಂದ ಪ್ರಸ್ತುತ ಪಡಿಸಿದರು.

ಈ ಸುಗಮ ಸಂಗೀತ ಕಾರ್ಯಕ್ರಮಕ್ಕೆ ಪಕ್ಕವಾದ್ಯದಲ್ಲಿ ಸಹಕರಿಸಿದ ಶ್ರೀ ತಾನ್‌ಸೇನ್ ಶ್ರೀವಾಸ್ತವ ತಮ್ಮ ಅದ್ಭುತ ಕೈಚಳಕದಿಂದ ತಬಲಾ ಸಾಥ್ ನೀಡಿದರು. ಶ್ರೀ ವಿನಯ್ ಕುಮಾರ್ ಅವರು ಇಂಪಾದ ಕೊಳಲಿನ ನಾದದಿಂದ ಸಭಿಕರು ಕಣ್ಣುಮುಚ್ಚಿ ಸಂಗೀತ ಅನುಭವಿಸುವಂತೆ ಮಾಡಿದರು. ರಿದಂಪ್ಯಾಡ್‌ನಲ್ಲಿ ತಾಳಕ್ಕೆ ಪೂರಕವಾಗಿ ಸಹಕರಿಸಿದ ಶ್ರೀ ಪ್ರಕಾಶ್ ವೆಂಕಟೇಶ್ ದಾವಣಗೇರಿ ಅವರು ಈ ಸಂಜೆಗೆ ಮೆರುಗು ತಂದರು. ಈ ಸಂಗೀತ ಸಂಜೆಯಲ್ಲಿ ಕೀಬೋರ್ಡ್ ನುಡಿಸಿ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದವರು ಸಂಘದ ಸಕ್ರಿಯ ಸದಸ್ಯರಾದ ಶ್ರೀ ಟಿ.ಎಸ್. ರಮೇಶ್ ಅವರು.

ಅದೇ ದಿನ ರಾತ್ರಿ 8.30ಕ್ಕೆ ದೆಹಲಿ ಕರ್ನಾಟಕ ಸಂಘದ ಕಲಾವಿದರುಗಳಿಂದ ಇತ್ತೀಚೆಗೆ ಹಂಪಿ ಉತ್ಸವದಲ್ಲಿ ಯಶಸ್ವೀ ಪ್ರದರ್ಶನ ಕಂಡ ‘ದಿನಕರ’ ತಂಡದ ‘ನಾ ಸತ್ತಿಲ್ಲ!’ ನಾಟಕವನ್ನು ಪ್ರದರ್ಶಿಸಲಾಯಿತು. ಧನಬಲ, ತೋಳ್ಬಲ, ಕುತಂತ್ರಗಳ ಮೂಲಕ ಸತ್ಯ, ತತ್ವಾದರ್ಶಗಳನ್ನು ಕೊಲ್ಲುವ ವಸ್ತುವನ್ನು ಒಳಗೊಂಡ ಈ ನಾಟಕದ ರಚನೆ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ಅವರದ್ದು ಹಾಗೂ ಅದಕ್ಕೆ ಸಮರ್ಥ ನಿರ್ದೇಶನ ಶಿವಾನಂದ ಇಂಗಳೇಶ್ವರ ಅವರದ್ದು.

ಈ ನಾಟಕದಲ್ಲಿ ನ್ಯಾಯಾಧೀಶರಾಗಿ ಶ್ರೀ ವೈ ಅವನೀಂದ್ರನಾಥ್ ರಾವ್, ಸತ್ಯವಂತ ರಾವ್ ಪಾತ್ರದಲ್ಲಿ ಶ್ರೀ ಆರ್ ಎಸ್ ಶ್ಯಾಂಸುಂದರ್, ಧನವಂತ ರಾವ್ ಆಗಿ ಶ್ರೀ ಅಮರೇಶ್ ಎಸ್ ಎಚ್, ವಿವೇಕರಾವ್ ಆಗಿ ಶ್ರೀ ಎಸ್ ಕುಮಾರ್, ಭಂಡೇರಾವ್ ಪಾತ್ರದಲ್ಲಿ ಶ್ರೀ ಟಿ ಎಸ್ ರಮೇಶ್, ಪ್ರಚಂಡಾಚಾರಿಯಾಗಿ ಶ್ರೀ ಬಸವಣ್ಣಿ ಹುಂಡ್ರಿ, ಬೀರಪ್ಪನಾಗಿ ಶ್ರೀ ಭಂಡೆಪ್ಪ ಬಿರಾದಾರ್, ಬೆಂಚ್‌ಕ್ಲರ್ಕ್ ಪಾತ್ರದಲ್ಲಿ ಶ್ರೀ ಶಶಿಕಾಂತ ಪಾಟೀಲ ಹಾಗೂ ಶ್ರೀ ಮಹಾಗಣೇಶ ಪ್ರಸಾದ್ ಮತ್ತು ಜವಾನನ ಪಾತ್ರದಲ್ಲಿ ಎಸ್ ಎಸ್ ಗೋವಿಂದರಾಜು ಅವರುಗಳು ತಮ್ಮ ತಮ್ಮ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು.

ಒಟ್ಟಾರೆಯಾಗಿ, ‘ಆಲಿಸಿ, ದೆಹಲಿಯ ಕೊರಳಿನ ಕರೆ’ ಹಾಗೂ ‘ನಾ ಸತ್ತಿಲ್ಲ!’ ನಾಟಕ ವಿಶ್ವ ಕನ್ನಡ ಸಮ್ಮೇಳನದಲ್ಲಿ ಯಶಸ್ವಿಯಾಗಿ ಪ್ರಸ್ತುತಿ ಕಂಡು ರಾಷ್ಟ್ರದ ರಾಜಧಾನಿಯಿಂದ ತಾಯ್ನಾಡಿಗೆ ಹೋಗಿ ಕನ್ನಡದ ಕೀರ್ತಿ ಪತಾಕೆ ಹಾರಿಸಿರುವುದು ಮೆಚ್ಚುಗೆಯ ಸಂಗತಿ ಹಾಗೂ ಈ ತಂಡಗಳು ಪ್ರದರ್ಶನಗಳ ಹೆಚ್ಚಿನ ಮೂಲಕ ಇನ್ನೂ ಉತ್ತುಂಗಕ್ಕೆ ಏರಲಿ ಎಂದು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರೈಸುತ್ತೇವೆ.

ರಮೇಶ್ ಟಿ.ಎಸ್.



## ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ

ಕುಪ್ಪಳಿ, ತೀರ್ಥಹಳ್ಳಿ ತಾಲ್ಲೋಕು, ಶಿವಮೊಗ್ಗ ಜಿಲ್ಲೆ, ಕರ್ನಾಟಕ

# ಕುವೆಂಪು ಸಮಗ್ರ ನೋಟ

## ರಾಷ್ಟ್ರೀಯ ವಿಚಾರ ಸಂಕಿರಣ

**ಸಹಯೋಗ**

**ದೆಹಲಿ ಕರ್ನಾಟಕ ಸಂಘ,** ನವದೆಹಲಿ
**ಕನ್ನಡ ವಿಶ್ವವಿದ್ಯಾಲಯ,** ಹಂಪಿ
**ಕರ್ನಾಟಕ ಸಾಹಿತ್ಯ ಅಕಾಡೆಮಿ,** ಬೆಂಗಳೂರು
**ಕುವೆಂಪು ಭಾಷಾಭಾರತಿ,** ಬೆಂಗಳೂರು
**ಸಾಹಿತ್ಯ ಅಕಾಡೆಮಿ,** ನವದೆಹಲಿ

ದಿನಾಂಕ : 15, 16, 17ನೇ ಏಪ್ರಿಲ್ 2011
ಸ್ಥಳ : ದೆಹಲಿ ಕರ್ನಾಟಕ ಸಂಘ, ನವದೆಹಲಿ

**ಎಲ್ಲರಿಗೂ ಸ್ವಾಗತ**

**ಕಡಿದಾಳ್ ಪ್ರಕಾಶ್**
ಸಮಕಾರ್ಯದರ್ಶಿ
ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ
ಕುಪ್ಪಳಿ

**ಸಿ.ಎಂ. ನಾಗರಾಜ**
ಕಾರ್ಯದರ್ಶಿ
ದೆಹಲಿ ಕರ್ನಾಟಕ ಸಂಘ
ನವದೆಹಲಿ

**ಡಾ. ಮಂಜುನಾಥ ಬೇವಿನಕಟ್ಟಿ**
ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ,
ಹಂಪಿ

**ಅಗ್ರಹಾರ ಕೃಷ್ಣಮೂರ್ತಿ**
ಕಾರ್ಯದರ್ಶಿ
ಸಾಹಿತ್ಯ ಅಕಾಡೆಮಿ,
ಬೆಂಗಳೂರು

**ವಿ. ಮಲ್ಲಿಕಾರ್ಜುನಸ್ವಾಮಿ**
ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಕುವೆಂಪು
ಅಕಾಡೆಮಿ.

**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
ಭಾಷಾ ಭಾರತಿ
ಬೆಂಗಳೂರು.



## SPECIAL LECTURES

DATE : 15.04.2011 11.00AM

Venue : **Delhi University, New Delhi**

*Organised by*
**Department of Modern Indian Languages**
Delhi University

### KUVEMPU AS A POET
(Presentation in English)

**Prof H.S. Shivaprakash**
*Professor*
J.N.U. New Delhi

### KUVEMPU AS A THINKER
(Presentation in Hindi)

**Prof. Pradhan Gurudatt**
*Chairman*
Kuvempu Bhasha Bharati, Bengaluru

Chair Person : **Prof. Hampa Nagarajaiah**
Chairman, Kuvempu Prathistana, Kuppali

Convener : **Dr. T.S. Sathyanath**
Professor, Delhi University

15.04.2011 ಸಂಜೆ : 5.30

## ಉದ್ಘಾಟನಾ ಸಮಾರಂಭ

ಉದ್ಘಾಟನೆ : **ಶ್ರೀ ಎಂ. ವೀರಪ್ಪ ಮೊಯಿಲಿ**
ಮಾನ್ಯ ಕಾನೂನು ಸಚಿವರು, ಭಾರತ ಸರ್ಕಾರ

ಅಧ್ಯಕ್ಷತೆ : **ಡಾ. ಯು.ಆರ್. ಅನಂತಮೂರ್ತಿ**
ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು

ಮುಖ್ಯ ಅತಿಥಿಗಳು : **ಶ್ರೀ ಡಿ.ಬಿ. ಚಂದ್ರೇಗೌಡ**
ಮಾನ್ಯ ಸಂಸತ್ ಸದಸ್ಯರು, ನವದೆಹಲಿ
**ಡಾ. ಎ. ಮುರಿಗೆಪ್ಪ**
ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ
**ಪ್ರೊ. ವೆಂಕಟಾಚಲ ಹೆಗಡೆ**
ಅಧ್ಯಕ್ಷರು, ದೆಹಲಿ ಕರ್ನಾಟಕ ಸಂಘ, ನವದೆಹಲಿ

ಪ್ರಾಸ್ತಾವಿಕ ಮಾತು : **ಡಾ. ಹಿ.ಚಿ. ಬೋರಲಿಂಗಯ್ಯ**
ಮುಖ್ಯಸ್ಥರು, ಕುವೆಂಪು ಅಧ್ಯಯನ ಕೇಂದ್ರ, ಕುಪ್ಪಳಿಕನ್ನಡ ವಿಶ್ವವಿದ್ಯಾಲಯ

ನಿರ್ವಹಣೆ : **ಡಾ. ಪುರುಷೋತ್ತಮ ಬಿಳಿಮಲೆ**
ನವದೆಹಲಿ

ಸಂಜೆ : 7.00
**ಕುವೆಂಪು ಸಾಕ್ಷ್ಯಚಿತ್ರ ಪ್ರದರ್ಶನ**
**ಕುವೆಂಪು ಗೀತೆಗಳ ಸುಗಮ ಸಂಗೀತ**
ರವಿ ಮರೂರ್ ಮತ್ತು ತಂಡ, ಬೆಂಗಳೂರು

ದಿನಾಂಕ : 16.04.2011 ಬೆಳಿಗ್ಗೆ : 10.30

### ಗೋಷ್ಠಿ ಒಂದು–ಕುವೆಂಪು ಕಾವ್ಯ

ಅಧ್ಯಕ್ಷತೆ : **ಪ್ರೊ. ಕಮಲಾ ಹಂಪನಾ**
ಪ್ರಸಿದ್ಧ ಲೇಖಕಿ, ಬೆಂಗಳೂರು

**ಕುವೆಂಪು ಕಾವ್ಯ** : **ಡಾ. ಟಿ.ಎಸ್. ಸತ್ಯನಾಥ**
ಪ್ರಾಧ್ಯಾಪಕರು, ದೆಹಲಿ ವಿಶ್ವವಿದ್ಯಾಲಯ

**ಶ್ರೀ ರಾಮಾಯಣ ದರ್ಶನಂ ಮಾಹಾ ಕಾವ್ಯ** : **ಡಾ. ಶಿವರಾಮು ಕಾಡನಕುಪ್ಪೆ**
ಪ್ರಾಂಶುಪಾಲರು, ಮೈಸೂರು

ನಿರ್ವಹಣೆ : **ಶ್ರೀಮತಿ ಉಷಾ ಭರತಾದ್ರಿ**
ನವದೆಹಲಿ

ಮಧ್ಯಾಹ್ನ : 2.30

### ಗೋಷ್ಠಿ ಎರಡು–ಕುವೆಂಪು ಕಾದಂಬರಿಗಳು

ಅಧ್ಯಕ್ಷತೆ : **ಪ್ರೊ. ಪ್ರಭುಶಂಕರ್**
ಹಿರಿಯ ಲೇಖಕರು, ಮೈಸೂರು

ಕಾನೂರು ಹೆಗ್ಗಡತಿ : **ಡಾ. ಕೆ. ಪುಟ್ಟಸ್ವಾಮಿ**
ಸಾರ್ವಜನಿಕ ಸಂಪರ್ಕಾಧಿಕಾರಿ, ಬಿ.ಡಿ.ಎ. ಬೆಂಗಳೂರು

ಮಲೆಗಳಲ್ಲಿ ಮದುಮಗಳು : **ಪ್ರೊ. ಚಂದ್ರಶೇಖರ ನಂಗಲಿ**
ಪ್ರಾಂಶುಪಾಲರು, ಸರ್ಕಾರಿ ಕಾಲೇಜು, ಹಾನಗಲ್

ನಿರ್ವಹಣೆ : **ಶ್ರೀಮತಿ ರೇಣುಕಾ ನಿಡಗುಂದಿ**
ನವದೆಹಲಿ

ಸಂಜೆ : 5.30
**ಸಾಂಸ್ಕೃತಿಕ ಕಾರ್ಯಕ್ರಮ ದೆಹಲಿ ಕಲಾವಿದರಿಂದ ಹಾಗೂ**
**ಕುವೆಂಪು ಗೀತೆಗಳ ನೃತ್ಯರೂಪಕ**
**ಗುರು ಉದಯ್‌ಕುಮಾರ್ ಶೆಟ್ಟಿ ಮತ್ತು ತಂಡ, ಕಲಾತೀರ, ಬೆಂಗಳೂರು**

ದಿನಾಂಕ : 17.04.2011 ಬೆಳಿಗ್ಗೆ : 10.30

### ಗೋಷ್ಠಿ ಮೂರು–ಕುವೆಂಪು ನಾಟಕಗಳು

ಅಧ್ಯಕ್ಷತೆ : **ಪ್ರೊ. ಎಚ್.ಎಸ್. ಶಿವಪ್ರಕಾಶ್**
ಪ್ರಾಧ್ಯಾಪಕರು, ಜವಹರಲಾಲ್ ನೆಹರು ವಿಶ್ವವಿದ್ಯಾಲಯ, ನವದೆಹಲಿ

ಕುವೆಂಪು ನಾಟಕಗಳ ವಸ್ತು ಮತ್ತು ತಂತ್ರ : **ಪ್ರೊ. ಲಿಂಗದೇವರು ಹಳೇಮನೆ**
ನಿರ್ದೇಶಕರು, ರಂಗಾಯಣ, ಮೈಸೂರು

ಕುವೆಂಪು ನಾಟಕಗಳ ವೈಚಾರಿಕತೆ : **ಡಾ. ಕೆ.ವೈ. ನಾರಾಯಣ ಸ್ವಾಮಿ**
ಪ್ರಾಧ್ಯಾಪಕರು, ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು

ನಿರ್ವಹಣೆ : **ವೈ. ಅವನೀಂದ್ರನಾಥ್ ರಾವ್**
ನವದೆಹಲಿ

ಮಧ್ಯಾಹ್ನ : 3.30

**ಹಿರಿಯ ಲೇಖಕರೊಡನೆ ಸಂವಾದ**

ಭಾಗವಹಿಸುವ ಲೇಖಕರು : ಡಾ. ಯು.ಆರ್. ಅನಂತಮೂರ್ತಿ
ಪ್ರೊ. ಹಂಪ ನಾಗರಾಜಯ್ಯ
ಪ್ರೊ. ಪ್ರಭುಶಂಕರ
ಡಾ. ಎ. ಮುರಿಗೆಪ್ಪ
ಪ್ರೊ. ಎಂ.ಎಚ್. ಕೃಷ್ಣಯ್ಯ
ಡಾ. ಪ್ರಧಾನ ಗುರುದತ್
ಪ್ರೊ. ಎಚ್.ಎಸ್. ಶಿವಪ್ರಕಾಶ್
ಶ್ರೀ ಅಗ್ರಹಾರ ಕೃಷ್ಣಮೂರ್ತಿ
ಡಾ. ಪುರುಷೋತ್ತಮ ಬಿಳಿಮಲೆ
ಪ್ರೊ. ಲಿಂಗದೇವರು ಹಳೇಮನೆ
ಡಾ. ಕರೀಗೌಡ ಬೀಚನಹಳ್ಳಿ

ನಿರ್ವಹಣೆ : ಎಸ್. ಕೃಷ್ಣಭಟ್
ನವದೆಹಲಿ

ದಿನಾಂಕ : 17.04.2011 ಸಂಜೆ : 4.30

**ಸಮಾರೋಪ ಸಮಾರಂಭ**

ಸಮಾರೋಪ ಭಾಷಣ ಮತ್ತು ಪುಸ್ತಕ ಬಿಡುಗಡೆ : ಶ್ರೀ ಅಗ್ರಹಾರ ಕೃಷ್ಣಮೂತಿ
ಕಾರ್ಯದರ್ಶಿಗಳು, ಸಾಹಿತ್ಯ ಅಕಾಡೆಮಿ, ನವದೆಹಲಿ

ಬಿಡುಗಡೆಯಾಗಲಿರುವ ಪುಸ್ತಕ

**SELECTED POEMS OF KUVEMPU**

Published by Kannada University, Hampi

ಕೃತಿಯ ಬಗ್ಗೆ : ಪ್ರೊ. ಪ್ರಧಾನ ಗುರುದತ್
ಅಧ್ಯಕ್ಷರು, ಕುವೆಂಪು ಭಾಷಾ ಭಾರತಿ, ಬೆಂಗಳೂರು

ಮುಖ್ಯ ಅತಿಥಿ : ಪ್ರೊ. ಎಂ.ಎಚ್. ಕೃಷ್ಣಯ್ಯ
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಅಧ್ಯಕ್ಷತೆ : ಪ್ರೊ. ಹಂಪ ನಾಗರಾಜಯ್ಯ
ಅಧ್ಯಕ್ಷರು, ಕುವೆಂಪು ಪ್ರತಿಷ್ಠಾನ, ಕುಪ್ಪಳಿ

ನಿರ್ವಹಣೆ : ಶ್ರೀ ವಿ.ಎಸ್. ಮಲ್ಲಿಕಾರ್ಜುನಸ್ವಾಮಿ
ರಿಜಿಸ್ಟ್ರಾರ್, ಸಾಹಿತ್ಯ ಅಕಾಡೆಮಿ, ಬೆಂಗಳೂರು

ಸಂಜೆ : 5.30

**ಶ್ರೀರಾಮಾಯಣ ದರ್ಶನಂ ಗಮಕ ಮತ್ತು ವ್ಯಾಖ್ಯಾನ**

ಗಮಕ : ಶ್ರೀಮತಿ ಜಲಜರಾಜು
ನವದೆಹಲಿ

ವ್ಯಾಖ್ಯಾನ : ಡಾ. ಪುರುಷೋತ್ತಮ ಬಿಳಿಮಲೆ
ನವದೆಹಲಿ

**ಹಾಗೂ ಕುವೆಂಪು ಗೀತ ಗಾಯನ**
**ಶ್ರೀಮತಿ ರತ್ನಮಾಲಾ ಪ್ರಕಾಶ್ ಮತ್ತು ಸಂಗಡಿಗರು**

ಮೇಲ್ಕಂಡ ಮೂರೂ ದಿನವೂ
ಕುವೆಂಪು ಕೃತಿಗಳ ಪ್ರದರ್ಶನ
ಮತ್ತು ಮಾರಾಟದ ವ್ಯವಸ್ಥೆ ಮಾಡಲಾಗಿದೆ

ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಾಯೋಜನೆ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

# ದೆಹಲಿ ಕರ್ನಾಟಕ ಸಂಘ

## ಆಟೋಟ ಸ್ಪರ್ಧೆ, ಸಾಂಸ್ಕೃತಿಕ ಸ್ಪರ್ಧೆ ಹಾಗೂ ಅಂಬಿಕೇಶ್ ಮೆಮೋರಿಯಲ್ ಕ್ರಿಕೆಟ್ ಪಂದ್ಯಾವಳಿಯ ಬಹುಮಾನ ವಿತರಣಾ ಸಮಾರಂಭ

ದಿನಾಂಕ : 01.05.2011
ಸಮಯ : ಮಧ್ಯಾಹ್ನ 2ರಿಂದ
ಸ್ಥಳ : ಸಂಘದ ಸಭಾಂಗಣ

## ಎಲ್ಲರಿಗೂ ಸುಸ್ವಾಗತ

ಡಾ.ವೆಂಕಟಾಚಲ ಹೆಗಡೆ
ಅಧ್ಯಕ್ಷರು

ಸಿ.ಎಂ.ನಾಗರಾಜ
ಪ್ರಧಾನ ಕಾರ್ಯದರ್ಶಿ

# ನಿನಗೆ ಬೇರೆ ಹೆಸರು ಬೇಕೆ, ಸ್ತ್ರೀ ಎಂದರೆ ಅಷ್ಟೇ ಸಾಕೆ !

*– ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ*

## ಅರ್ಥಪೂರ್ಣ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ






ಮಹಿಳಾ ದಿನಾಚರಣೆಗಳು ಅರ್ಥಪೂರ್ಣವಾಗಬೇಕಾದರೆ ಮಹಿಳೆಯರು ಕ್ರಿಯಾಶೀಲರೂ, ಸ್ವಾವಲಂಬಿಗಳೂ ಆಗುವುದರ ಜೊತೆಗೆ ತಮಗಾಗಿಯೇ ಏರ್ಪಡಿಸಿದ ಸಮಾರಂಭಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂಬುದಾಗಿ ಕರೆ ನೀಡಿದ ಸಂಸತ್ತಿನ ಮೇಲ್ಮನೆ ಸದಸ್ಯರಾದ ರಂಗಕಲಾವಿದೆ ಶ್ರೀಮತಿ ಬಿ. ಜಯಶ್ರೀ ಅವರು ದೆಹಲಿ ಕರ್ನಾಟಕ ಸಂಘದಲ್ಲಿ 19.03.2011ರಂದು ಏರ್ಪಡಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಧ್ಯಕ್ಷತೆ ವಹಿಸಿದ್ದರು.

ಪುರುಷರ ಪ್ರಗತಿಗೆ ಮಹಿಳೆಯರು ನೆರವಾಗುವಂತೆಯೇ ಮಹಿಳೆಯರು ಹೆಚ್ಚು ಹೆಚ್ಚು ಸಾಧನೆ ಮಾಡಬೇಕಾದರೆ ಪುರುಷರು ಸಹ ಎಲ್ಲ ರೀತಿಯ ಸಹಕಾರ ನೀಡಬೇಕೆಂದು ಹೇಳುತ್ತಾ ಸ್ವತಃ ತಾವು ಮಾಡಿದ ಸಾಧನೆಗಳ ಹಿಂದೆ ಪತಿ ಶ್ರೀ ಆನಂದರಾಜುರವರು ನೀಡುತ್ತಿರುವ ಸಹಕಾರ ಹಾಗೂ ಪ್ರೋತ್ಸಾಹಗಳನ್ನು ಸ್ಮರಿಸಿಕೊಳ್ಳುವ ಮೂಲಕ ನವ ನಾಗರೀಕತೆ ಬೆನ್ನೇರಿ ನಾಗಾಲೋಟದಲ್ಲಿ ಓಡುತ್ತಿರುವ ಇಂದಿನ ಸಮಾಜದಲ್ಲಿ ದಾಂಪತ್ಯದ ಮಹತ್ವ ಮತ್ತು ಅಂತರಾರ್ಥವನ್ನು ಪರೋಕ್ಷವಾಗಿ ತಿಳಿಸುವ ಪ್ರಯತ್ನ ಮಾಡಿದರು.

ಕನ್ನಡಿಗರು ಕನ್ನಡನಾಡು, ನುಡಿ, ನಾಟಕಗಳ ಬಗ್ಗೆ ನಿರೀಕ್ಷಿತ ಮಟ್ಟದ ಪ್ರೋತ್ಸಾಹ ನೀಡಲು ಮುಂದಾಗುತ್ತಿಲ್ಲವೆಂಬುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ರಂಗಕಲಾವಿದೆ ಬಿ. ಜಯಶ್ರೀ ಅವರು ಕನ್ನಡ ಜನತೆ ಕನ್ನಡದ ಹೆಚ್ಚಿನ ನಾಟಕಗಳನ್ನು ವೀಕ್ಷಿಸುವ ಮೂಲಕ ಕಲಾವಿದರನ್ನು ಪ್ರೋತ್ಸಾಹಿಸುವುದರ ಜೊತೆಗೆ ನಮ್ಮ ಪ್ರಾಚೀನ ಪರಂಪರೆಯನ್ನು ಉಳಿಸಿಬೆಳೆಸಿಕೊಂಡು ಬರಬೇಕೆಂದು ಪ್ರೀತಿಯಿಂದಲೇ ಕಿವಿ ಹಿಂಡಿ ಬುದ್ಧಿವಾದ ಹೇಳಿದರು. ಇದಕ್ಕೆ ಸ್ವತಃ ಬಿ. ಜಯಶ್ರೀ ಅವರು ಸಂಸತ್ತಿನ ಮೇಲ್ಮನೆ ಸದಸ್ಯರಾಗಿ ಕನ್ನಡದಲ್ಲೇ ತಮ್ಮ ಮೊದಲ ಭಾಷಣ ಮಾಡಿರುವುದು ಕನ್ನಡದ ಏಳಿಗೆಗೆ ಸಿಕ್ಕ ಎಲ್ಲ ಅವಕಾಶಗಳನ್ನು ಚಾಚೂ ತಪ್ಪದೆ ಸದ್ಬಳಕೆ ಮಾಡಿಕೊಳ್ಳುವ ಅವರ ಕಾರ್ಯ ಶೈಲಿಗೆ ಒಂದು ಒಳ್ಳೆಯ ನಿದರ್ಶನ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕರ್ನಾಟಕ ಭವನದ ಉಪನಿವಾಸಿ ಆಯುಕ್ತೆ ಶ್ರೀಮತಿ ಚಂದ್ರಮ ಎಸ್. ಕಣಗಲಿ ಅವರು ಸಮಾಜದ ಕಟ್ಟಕಡೆಯ ಕೂಲಿ ಕಾರ್ಮಿಕರಿಗೂ ಉನ್ನತ ಸ್ಥಾನದ ಮಹಿಳೆಯರಿಗೆ ದೊರಕುತ್ತಿರುವ ಸವಲತ್ತು, ಸೌಕರ್ಯ, ದೊರೆತು ಅವರ ಆತ್ಮ-ವಿಶ್ವಾಸ ಹೆಚ್ಚಿದಗ ಮಾತ್ರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಎಂಬ ಹೆಸರಿಗೆ ನಿಜವಾದ ಅರ್ಥ ಬರುತ್ತದೆ ಎಂದು ಅಭಿಪ್ರಾಯ ಪಟ್ಟರು. ಯಾವುದೇ ಸಮಾಜದ ಆರೋಗ್ಯ ಅಲ್ಲಿನ ಮಹಿಳೆ ಮತ್ತು ಪುರುಷರ ನಡುವಿನ ಒಳ್ಳೆಯ ಬಾಂಧವ್ಯದ ಮೇಲೆ ನೆಲೆಗೊಂಡಿರುತ್ತದೆ ಎಂದು ಹೇಳುತ್ತಾ ಮಹಿಳಾ ಸಂಸ್ಕೃತಿ ಬಗ್ಗೆ ಮಾತ್ರ ಚರ್ಚೆ ನಡೆದರಷ್ಟೇ ಸಾಲದು, ಪುರುಷ ಸಂಸ್ಕೃತಿಯ ಬಗೆಗೆ ನಾವು ಅರ್ಥಪೂರ್ಣವಾದ ಚಿಂತನೆ ಮಾಡಬೇಕಾಗಿದೆ. ನಮ್ಮದು ಪುರುಷ ಪ್ರಧಾನ ಸಮಾಜವೇ ಆಗಿದ್ದರೂ ನಾವು ಏನೆಲ್ಲಾ ಅಧಿಕಾರ ಅಂತಸ್ತುಗಳನ್ನು ಗಳಿಸಿದರೂ ಮಾನಸಿಕ ಮತ್ತು ಆಧ್ಯಾತ್ಮಿಕ ಸ್ಥೈರ್ಯಗಳು ಹೆಚ್ಚಬೇಕಾದರೆ ಸ್ತ್ರೀ ಪುರುಷರಿಬ್ಬರು ಪರಸ್ಪರ ಗೌರವಯುತವಾಗಿ ಬಾಳು ಸಾಗಿಸಬೇಕು ಎಂದು ನುಡಿದರು. ಈ ದಿಸೆಯಲ್ಲಿ ಪ್ರತಿಯೊಬ್ಬರು ತಮ್ಮ ತಮ್ಮ ಮನೆಗಳಿಂದಲೇ ಈ ಉತ್ತಮ ಬಾಂಧವ್ಯ ರೂಪಿಸಿಕೊಳ್ಳುವ ಕೆಲಸವನ್ನು ಆರಂಭಿಸಿದರೆ ನಂತರ ಸಮಾಜ, ದೇಶ, ಅಂತರರಾಷ್ಟ್ರೀಯ ಮಟ್ಟಗಳಲ್ಲಿಯೂ ಮಹಿಳಾ ಸುಧಾರಣೆ ಸಾಧ್ಯವಾಗುತ್ತದೆ ಎಂದು ಹೇಳಿ ತಮ್ಮ ತಂದೆ ಮಾಜಿ ಕೇಂದ್ರ ಸಚಿವ ದಿವಂಗತ ಶ್ರೀ ಬಿ. ಶಂಕರಾನಂದ ಅವರು ತಮ್ಮ 52ವರ್ಷಗಳ ದಾಂಪತ್ಯ ಜೀವನದಲ್ಲಿ ಒಂದು ದಿನವೂ ಜಗಳವಾಡಲಿಲ್ಲ ಎಂಬುದನ್ನು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಆಶಯ ನುಡಿಗಳನ್ನಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ದೆಹಲಿ ಕರ್ನಾಟಕ ಸಂಘವನ್ನು ಹುಟ್ಟಿ ಹಾಕಿದ ಸರೋಜಿನಿ ಮಹಿಷಿ, ಸಾವಿತ್ರಿ ಶಾಸ್ತ್ರಿ, ನೇತ್ರಾವತಿ ಮಯ್ಯ ಅವರಂತಹ ಹಿರಿಯರು ದೆಹಲಿ ಕರ್ನಾಟಕ ಸಂಘದ ಪ್ರಗತಿಗೆ ಅವಿರತವಾಗಿ ಶ್ರಮಿಸಿರುವುದನ್ನು ಸ್ಮರಿಸಿಕೊಂಡು ಮಹಿಳೆಯರು ಇಚ್ಛಾಶಕ್ತಿಯಿಂದ ಏನನ್ನಾದರೂ ಸಾಧಿಸಲು ಶಕ್ತರು ಎಂದರು. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಹೊಸದಾಗಿ ಮಹಿಳಾ ಸಮಿತಿ ರಚಿಸಿದ್ದು ಆ ಮೂಲಕ ದೆಹಲಿಯಲ್ಲಿರುವ ಕನ್ನಡ ಮಹಿಳೆಯರ ಪ್ರತಿಭೆಗಳನ್ನು ಅವರ ಕಲಾಶ್ರೀಮಂತಿಕೆಗಳನ್ನು ಗುರುತಿಸಿ ಪ್ರೋತ್ಸಾಹಿಸಲಾಗುವುದು ಎಂದರು.

ಡಾ. ವೆಂಕಟಾಚಲ ಹೆಗಡೆಯವರ ಮಾತುಗಳಿಗೆ ಪುಷ್ಟಿ ನೀಡುವಂತೆ ದೆಹಲಿಯ ಜನಕಪುರಿ ಮಹಿಳಾ ಮಂಡಳಿ, ದೆಹಲಿ ಕನ್ನಡ ಪೋಲಿಸ್ ಕಲ್ಯಾಣ ಸಮಿತಿ, ದೆಹಲಿ ಒಕ್ಕಲಿಗ ಗೌಡ ಸಮಾಜ ಹಾಗೂ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನ ಉತ್ಸಾಹಿ ಮಹಿಳೆಯರು ನೃತ್ಯ, ಕೋಲಾಟ, ನಾಟಕ ಮೊದಲಾದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಪ್ರದರ್ಶಿಸುವ ಮೂಲಕ ನೆರೆದಿದ್ದ ಕನ್ನಡಾಭಿಮಾನಿಗಳಿಗೆ ಸಾಂಸ್ಕೃತಿಕ ರಸದೌತಣ ಉಣ ಬಡಿಸಿದರು. ಬಾಲಪ್ರತಿಭೆ ಪ್ರೇರಣಾ ರಾವ್ "ಜಗಜ್ಜನನಿ ಜಗದಾಂಬ" ಪ್ರಾರ್ಥನೆಯೊಂದಿಗೆ ಆರಂಭಗೊಂಡ ಈ ಕಾರ್ಯಕ್ರಮದಲ್ಲಿ ಸಂಘದ ಸದಸ್ಯೆ ಶ್ರೀಮತಿ ಜಲಜಾರಾಜು ಅವರು ತಮ್ಮ ಅದ್ಭುತ ಕಂಠಸಿರಿಯಿಂದ ಕುಮಾರವ್ಯಾಸ ಭಾರತದಲ್ಲಿ ಬರುವ ದ್ರೌಪದಿಯ ದಿಟ್ಟತನದ ಮನೋಜ್ಞ ವರ್ಣನೆಯ ಗಮಕ ವಾಚನದ ಮೂಲಕ ಮಹಿಳಾ ದಿನಾಚರಣೆಗೆ ವಿಶೇಷ ಮೆರುಗನ್ನು ನೀಡಿದುದು ಶ್ಲಾಘನೀಯ.










ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಇಂದ್ರಕಲಾ ಮತ್ತು ತಂಡದ ಯುವತಿಯರು ಅದ್ಭುತ ಡೊಳ್ಳು ಕುಣಿತ ಪ್ರದರ್ಶನ ನೀಡಿ ಪ್ರಶಂಸೆಗೆ ಪಾತ್ರರಾದರು.

ಕಾರ್ಯಕ್ರಮದ ಆರಂಭದಲ್ಲಿ ದೆಹಲಿಯ ಹಿರಿಯ ಕನ್ನಡತಿ ಶ್ರೀಮತಿ ಸಾವಿತ್ರಿ ಶಾಸ್ತ್ರಿ ಹಾಗೂ ದೆಹಲಿ ಕರ್ನಾಟಕ ಸಂಘದ ಮಾಜಿ ಉಪಾಧ್ಯಕ್ಷೆ, ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನ ಉಪಾಧ್ಯಕ್ಷೆ ಶ್ರೀಮತಿ ಸುಮಿತ್ರಾ ರಾವ್ ಅವರು ಕ್ರಮವಾಗಿ ಬಿ. ಜಯಶ್ರೀ ಹಾಗೂ ಚಂದ್ರಮ ಎಸ್. ಕಣಗಲಿ ಅವರಿಗೆ ಹೂಗುಚ್ಛ ನೀಡಿ ಸ್ವಾಗತಿಸಿದರು. ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಸಭಾ ಕಾರ್ಯಕ್ರಮ ನಿರೂಪಿಸಿದರು. ಮಹಿಳಾ ಉಪಸಮಿತಿಯ ಅಧ್ಯಕ್ಷೆ ಸರೋಜಾ ಮಾಧವ ಸ್ವಾಗತಿಸಿದರು, ಮಹಿಳಾ ಉಪಸಮಿತಿಯ ಸಂಚಾಲಕಿ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯೆ ಹೇಮಲತ ಗುಡ್ಡೇಗೌಡ ಅವರು ವಂದನಾರ್ಪಣೆ ಸಲ್ಲಿಸಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಿರ್ವಹಿಸಿದರು.

ಚಂದ್ರಶೇಖರ ಎನ್.ಪಿ.










# ಖರನಾಮ ಸಂವತ್ಸರ ಯುಗಾದಿ

ಯುಗಾದಿ ಅನಾದಿಯಿಂದಲೂ ಆಚರಿಸುತ್ತಿರುವ ಸಾಂಸ್ಕೃತಿಕ, ಧಾರ್ಮಿಕ, ಸಾಂಪ್ರದಾಯಿಕ ನುಡಿ ಹಬ್ಬ. ಕೇವಲ ಮನು ಕುಲಕ್ಕೆ ಸೀಮಿತಗೊಳಿಸದೆ, ನಿಸರ್ಗ ಪರಿವರ್ತನೆಯ ಹೊಸ ಆಲಿಂಗನ. ಪ್ರಕೃತಿ ತನ್ನ ಹಿಂದಿನ ಋತುವಿನ ಪೊರೆ ಕಳಚಿ, ಬದುಕಿನ ಹೊಸ ಚೇತನವನ್ನು ಮೈಗೂಡಿಸಿಕೊಳ್ಳುತ್ತದೆ. ಯುಗಾದಿ ನಮ್ಮ ಮನದ ಭಾವ ಪುನರುತ್ಥಾನ. ನಸುಕಿನಲ್ಲಿ ಕಂಡದ್ದನ್ನು ಇರುಳಿನಲ್ಲಿ ಜ್ವಲಿಸುವಂತೆ ಮಾಡುವ ಸುಮಧುರ ಸಮಯ. ಪ್ರತಿ ಸಂವತ್ಸರವೂ ಹೊಸ ಯೋಜನೆಯನ್ನು ಹಾಕಿಕೊಂಡು ಆಶಾಗೋಪುರ ನಿರ್ಮಿಸುತ್ತದೆ.

ಯುಗ ಯುಗಗಳಿಂದಲೂ ಯುಗಾದಿಯನ್ನು ರಂಜಿಸಿ ರೋಮಾಂಚನಗೊಳಿಸಿ ಸಂಭ್ರಮದಿಂದ ಆಚರಿಸಿಕೊಂಡು ಬಂದಿದ್ದು ಪ್ರತಿ ಕ್ಷಣವೂ ಆ ಸುದಿನವನ್ನು ವರ್ಷಪೂರ್ತಿ ಮೆಲುಕು ಹಾಕುತ್ತಾ ಮನೆಮನಗಳನ್ನು ಹೊಸ ಇಂಪಿನಿಂದ, ಕಂಪಿನಿಂದ ಶೃಂಗಾರಗೊಳಿಸಿ ಹೊಸ ಚೇತನವನ್ನು ಬರಮಾಡಿಕೊಳ್ಳುತ್ತೇವೆ. ಇಂತಹ ಶ್ರೇಷ್ಠವಾದ ದಿನದ ಇತಿಹಾಸವೂ ವೈಶಿಷ್ಟ ಪೂರ್ಣವಾಗಿದೆ.

'ಯುಗಾದಿ ಕಾ ನಯಾಯುಗ ಪತ್ರವೃತ್ತಿ' ಎಂದು ಸುಪ್ರಸಿದ್ಧ ಹಿಂದೂ ಜ್ಯೋತಿಷ್ಯ ಶಾಸ್ತ್ರಜ್ಞ ಭಾಸ್ಕರಾಚಾರ್ಯ ಹೇಳಿದ್ದಾನೆ. ಅದರಂತೆ ಚೈತ್ರ ಶುದ್ಧ ಪಾಡ್ಯಮಿಯ ದಿನ ಸೂರ್ಯದೇವ ಭೂಮಧ್ಯರೇಖೆಯ ಮೇಲೆ ಬಂದಿರುತ್ತಾನೆ. ಅಂತಹ ದಿನವೇ ಈ ಯುಗಾದಿ.

ಮತ್ತೊಂದು ವಿಶೇಷತೆಯೆಂದರೆ ಮಹಾಭಾರತದಲ್ಲಿ ಉಲ್ಲೇಖವಾಗಿರುವ ಚೇದಿ ರಾಜ್ಯದ ಅರಸ ವಸು ಮಹಾಸಾಮ್ರಾಟ ಉಗ್ರ ತಪಸ್ಸನ್ನು ಕೈಗೊಂಡಿದ್ದನು. ದೇವಾದಿ ದೇವತೆಗಳೆಲ್ಲ ಭಯಭೀತರಾಗಿ ಸ್ವರ್ಗ ಲೋಕದ ಅಧಿಪತಿ ದೇವೇಂದ್ರನ ಬಳಿಗೆ ಬಂದು ಅಳಲನ್ನು ತೋಡಿಕೊಳ್ಳುತ್ತಾರೆ. ಚಿಂತಾಕ್ರಾಂತನಾದ ದೇವೇಂದ್ರನು ತನ್ನ ಸಿಂಹಾಸನಕ್ಕೆ ಚ್ಯುತಿ ಬರುವುದನ್ನು ಗಮನಿಸಿ, ವಸು ಅರಸನಿಗೆ ವೈಜಯಂತಿ ಮಾಲೆಯನ್ನು ಹಾಕಿ, ಚಕ್ರಾಧಿಪತ್ಯದ ಹೊನ್ನ ಕಳಸದ ಧ್ವಜವನ್ನು ಇಡುತ್ತಾನೆ. ಇದು ಯುಗಾದಿಯ ದಿನದಂದೇ ನಡೆಯಿತೆಂಬ ಪ್ರತೀತಿ ಇದೆ. ಈ ಪ್ರಸಂಗದ ಪ್ರಯುಕ್ತ ಗುಡಿಹಬ್ಬ ಆಚರಿಸುತ್ತಾರೆ.

ನಾಗಪುರ, ಮಹಾರಾಷ್ಟ್ರದ ಕೆಲವೆಡೆ, ಗುಜರಾತ್, ದಕ್ಷಿಣ ಹಾಗು ಮಧ್ಯ ಭಾರತದ ಕೆಲವೆಡೆ, ಕರ್ನಾಟಕದ ಕೆಲವರು ಗುಡಿ ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬದ ಆಚರಣೆಯ ವಿಧಾನವೇ ವಿಭಿನ್ನವಾಗಿದೆ. ಬಿದಿರಿನ ಗಳದ ತುದಿಯ ಭಾಗವನ್ನು ರೇಷ್ಮೆ ವಸ್ತ್ರ ಅಥವ ಹೊಸ ಬಟ್ಟೆಯಿಂದ ಕಟ್ಟುತ್ತಾರೆ. ಅದರ ಮೇಲೆ ಹಿತ್ತಾಳೆಯ ಅಥವಾ ಬೆಳ್ಳಿಯ ಗುಂಡಿ/ಬಿಂದಿಗೆ ಬೋರಲು ಹಾಕಿ ಬಿದಿರಿಗೆ ಶೃಂಗಾರ ಮಾಡಿ ಬೇವಿನ ಸೊಪ್ಪು ಕಟ್ಟುತ್ತಾರೆ. ಇದನ್ನು ಯುಗಾದಿ / ಗುಡಿ ಹಬ್ಬ / ಗುಡಿ ಪಾಡ್ಯಮಿ ದಿನದಂದು ತಯಾರಿಸಿ ಮನೆಯ ಮುಂದೆ ಅಂಗಳದಲ್ಲಿ ಪ್ರತಿಷ್ಠಾಪಿಸುತ್ತಾರೆ.

ಯುಗಾದಿಯ ಶ್ರೇಷ್ಠತೆಯನ್ನು ನಮ್ಮ ಪೂರ್ವಜರು ಕಥೆಯೋಪಾದಿಯಲ್ಲಿ ಸಂವತ್ಸರದಿಂದ ಸಂವತ್ಸರಕ್ಕೆ ಬಿತ್ತರಿಸುತ್ತಾ ಬಂದಿರುವ ಪ್ರಯುಕ್ತ ಇಂದಿಗೂ ಹಲವಾರು ಸಂಗತಿಗಳು ಲಭ್ಯವಾಗುತ್ತವೆ.

ಯುಗಾದಿಯ ದಿನದಂದೇ ಬ್ರಹ್ಮದೇವನು ಈ ಬ್ರಹ್ಮಾಂಡವನ್ನು ಸೃಷ್ಟಿಸಲು ಆಯ್ಕೆ ಮಾಡಿಕೊಂಡನು. ಅಯೋಧ್ಯೆಯಲ್ಲಿ ಶ್ರೀರಾಮನ ಪಟ್ಟಾಭಿಷೇಕವಾದದ್ದು ಈ ಸುದಿನದಂದು. ಶಾಲಿವಾಹನ ಶಕೆ ಆರಂಭವಾದದ್ದು ಈ ಯುಗಾದಿಯಂದೇ ಎಂದು ಹೇಳುತ್ತಾರೆ. ಉತ್ತರ ಭಾರತದ ಹಲವಾರು ರಾಜ್ಯಗಳಲ್ಲಿ ಯುಗಾದಿಯನ್ನು ವಿವಿಧ ಹೆಸರುಗಳಿಂದ ಆಚರಿಸುತ್ತಾರೆ. ನಮ್ಮ ದೇಶದ ಹೊಸ ವರ್ಷ ಆರಂಭವಾಗುವುದು, ಹೊಸ ಪಂಚಾಂಗ ಪ್ರಾರಂಭವಾಗುವುದು ಯುಗಾದಿಯ ದಿನದಂದು. ಶಾಲಿವಾಹನ ಶಕೆಯ ಮೊದಲ ಹಬ್ಬ, ವಸಂತ ಮಾಸದ ಮೊದಲ ಹಬ್ಬ, ದೊಡ್ಡ ಹಬ್ಬ ಎಂದು ಕರೆಯುವ ಯುಗಾದಿ ಜನರಲ್ಲಿ ಹೊಸ ಚೈತನ್ಯವನ್ನು ತುಂಬುತ್ತದೆ. ಜ್ಯೋತಿಷ್ಯ ಶಾಸ್ತ್ರ, ಧರ್ಮಶಾಸ್ತ್ರ, ಋತುಧರ್ಮಗಳ ಪ್ರಕಾರ ಚೈತ್ರಶುಕ್ಲ ಪಾಡ್ಯಮಿಯಂದು ಹೊಸ ವರ್ಷ ಆರಂಭವಾಗುತ್ತದೆ.

ಹೀಗೆ ಯುಗಾದಿಯನ್ನು ವಿಜೃಂಭಣೆಯಿಂದ ಆಚರಿಸುವುದಕ್ಕೆ ತನ್ನದೇ ಆದ ನೈಸರ್ಗಿಕ, ವೈಜ್ಞಾನಿಕ ಕಾರಣಗಳೂ ಇವೆ. ಯುಗಾದಿ ದಿನ ಮುಂಜಾವಿನಲ್ಲೇ



ಎದ್ದು, ಮೈಗೆ ಹರಳೆಣ್ಣೆ ಹಚ್ಚಿ ಕುದಿಯುವ ನೀರಿಗೆ ಬೇವಿನ ಎಲೆಗಳನ್ನು ಹಾಕಿ ಅಭ್ಯಂಜನ ಮಾಡುತ್ತೇವೆ. ಕಾರಣ ಶಿಶಿರ, ಮಾಘ, ಪಾಲ್ಗುಣ ಮಾಸದ ಶೀತಮಾಸ ಮುಗಿದು ಸಮಶೀತೋಷ್ಣ ವಲಯದ ವಾತಾವರಣ ಪಾದಾರ್ಪಣೆ ಮಾಡುತ್ತದೆ. ಅಂದರೆ ಸೂರ್ಯ ತನ್ನ ಪಥಚಲನೆಯಲ್ಲಿ ವ್ಯತ್ಯಾಸ ಮೂಡಿಸುತ್ತಾನೆ. ಆಗ ನಮ್ಮ ಶರೀರದ ಚರ್ಮ ಬಿರುಕು ಬೀಳುತ್ತದೆ. ಅದಕ್ಕಾಗಿ ಮೈಗೆ ಎಣ್ಣೆ ಹಚ್ಚುತ್ತೇವೆ. ನಂತರ ಪೂಜೆ ಮಾಡಿ ಹೊಸ ಬಟ್ಟೆಯನ್ನು ಧರಿಸಿ ಬೇವು ಬೆಲ್ಲ ತಿನ್ನುತ್ತೇವೆ. ಬಾಳಿನ ಸಿಹಿ ಕಹಿ ಮಿಶ್ರಿತ ಜೀವನ ಸಾಗಿಸಲೆಂದು ಸಾಂಕೇತಿಕವಾಗಿದ್ದರೂ ಅದೂ ಸಹ ಶರೀರದ ಒಳಗಿನ ರೋಗ ನಿರೋಧಕ ಶಕ್ತಿ ಉಂಟು ಮಾಡುತ್ತದೆ.

ಸಂಕ್ರಾಂತಿಯ ಸುಗ್ಗಿಯನ್ನು ಪಡೆದ ರೈತ ಬೆಳೆದ ಎಲ್ಲಾ ಧಾನ್ಯಗಳನ್ನು ಬಳಸಿ ಹಬ್ಬದೂಟವನ್ನು ಮಾಡುತ್ತಾನೆ. ಸುಗ್ಗಿಯ ಸಂಭ್ರಮಾಚರಣೆಯನ್ನು ಯುಗಾದಿಯಲ್ಲಿ ಕಾಣುತ್ತಾನೆ. ಹೆಣ್ಣು ಮಕ್ಕಳು ಜರತಾರಿ ಲಂಗ ದಾವಣಿಯನ್ನು ಹಾಕಿಕೊಂಡು ಮನೆ ಮನೆಗೂ ಬೇವು ಬೆಲ್ಲ ಹಂಚುತ್ತಾ ಸಂಭ್ರಮ ಪಡುತ್ತಾರೆ. ಮನೆಯ ಮುಂದೆ ಚಿತ್ತಾರದ ರಂಗೋಲೆ, ಹಸಿರು ಮಾವಿನ ತೋರಣ, ಹೆಂಗಳೆಯರು  ಕಲಕಲ ಹೊಳೆಯುತ್ತಾ ಹಬ್ಬದ ಊಟವಾದ ಹೋಳಿಗೆ, ಚಿತ್ರಾನ್ನ, ಕೋಸಂಬರಿ, ಹಪ್ಪಳ, ಸಂಡಿಗೆ ಮಾಡಿ ಉಣ ಬಡಿಸುತ್ತಾರೆ. ಇನ್ನು ಗಂಡು ಮಕ್ಕಳು ಆಟವಾಡುತ್ತಾ, ಗಂಡಸರು ಅರಳಿಕಟ್ಟೆಯ ಮೇಲೆ ಕುಳಿತು ಚೌಕಾಬಾರ, ಪಗಡೆ ಆಟವಾಡುವುದು ಈ ದಿನದ ವಿಶೇಷ. ಆದರೆ ಇತ್ತೀಚಿನ ದಿನಗಳಲ್ಲಿ ಇಸ್ಪೀಟು ಆಟವಾಡುತ್ತಾರೆ. ಒಟ್ಟಾರೆ ಹೇಳಬೇಕೆಂದರೆ ಮನೋರಂಜನೆಯನ್ನು ಎಲ್ಲರೂ ಅವರಿಗೆ ತಿಳಿದ ರೀತಿ

ಮನುಷ್ಯನ ಬದುಕು ಇಹಪರದ ಸಾಧನೆಗೆ ನಾಂದಿಯಾಗಿ, ಹೃದಯದ ಕಲ್ಮಶವನ್ನು ತೊಳೆಯುವಲ್ಲಿ ಸಹಕರಿಸಿ ಬಾಳುವುದನ್ನು ಕಲಿಸುತ್ತದೆ. ಜೀವನದ ಕಹಿಭಾಗವನ್ನು ಸಿಹಿಯಾಗಿ ಪರಿವರ್ತಿಸಿ ಜೊತೆಯಾಗಿ ನಡೆದಲ್ಲಿ ಎಲ್ಲವನ್ನೂ ಗೆಲ್ಲುವ ಧೈರ್ಯ ಸ್ಥೈರ್ಯ ತಂದುಕೊಡುತ್ತದೆ. ಯುಗಾದಿ ಒಂದು ಹಬ್ಬವಲ್ಲ ಶಕ್ತಿ, ನಿತ್ಯ ನೂತನವಾದ ನಿತ್ಯ ಸಂಜೀವಿನಿ. ಬದುಕಲು ಮಾರ್ಗವನ್ನು ಸೂಚಿಸಿ ಆಶಾಕಿರಣವಾಗಿ ಪ್ರತಿವರ್ಷ ವಿಭಿನ್ನ ನಾಮಧೇಯದೊಂದಿಗೆ ಬರುತ್ತದೆ. ಹೊಸ ಮನುಷ್ಯನಾಗಲು ಪ್ರಕೃತಿಯು ಕೈ ಜೋಡಿಸಿ 'ಎದ್ದೇಳು ಮಗುವೆ, ನಿತ್ಯ ನಿರ್ಮಲವಾದ ಬದುಕು ನಿನ್ನ ಕೈ ಬೀಸಿ ಕರೆಯುತಿದೆ, ಏಳು ದಿನಕರನ ಕಡೆಗೆ ಬದುಕು ಬಂಗಾರವಾಗಲಿ' ಎಂದು ಹರಸುತ್ತದೆ. ಯುಗಾದಿ ಎಲ್ಲರ ಬಾಳಿಗೆ ನೆಮ್ಮದಿ, ಸುಖ, ಶಾಂತಿ ನೀಡಲಿ ಎಂದು ಜಗದೋದ್ಧಾರಕನಲ್ಲಿ ಪ್ರಾರ್ಥಿಸೋಣ.

❑ ಎಂ.ಎಸ್. ಲಾವಣ್ಯಬಸವರಾಜ

## ಯುಗಾದಿ ಶುಭಾಶಯಗಳು

**ಖ**ಗಗಳುಲಿಯುತ ಶುಭ್ರನಭದಲಿ
**ರ**ಮಣೀಯವಾಗಿ ಹಾರಾಡುತಿರೆ
**ನಾ**ದಸ್ವರದಿ ಮಧುರ ಉದಯರಾಗ ನಿನಾದಿಸುತಿರೆ
**ಮ**ನೆಮನೆಯಲಿ ಹಬ್ಬದ ಸಂಭ್ರಮವಿರುತಿರೆ
**ಸಂ**ತೃಪ್ತಿ, ಸಂತೋಷಗಳ ಸಮಾಗಮವು
**ವ**ರದಾಯಕವಾಗಿ ನವವರ್ಷದಾಗಮನ ಪ್ರೀತಿ ವಾ-
**ತ್ಸ**ಲ್ಯದ ಮಹೋತ್ಸವವಾಗಲಿ: ಧರ್ಮೋ
**ರ**ಕ್ಷತಿ ರಕ್ಷಿತ: ಎಂಬ ನಲ್ನುಡಿಯಂತೆ
**ದ**ಕ್ಷತೆಯಿಂದ, ಒಮ್ಮ ಸಮ್ಮತದಿಂದ
**ಶು**ದ್ಧ ಮನಸ್ಸಿನಿಂದ ಸಂವೇದನೆಯಿಂದ ಸರ್ವರೂ
**ಭಾ**ವೈಕ್ಯರಾಗಿ ಸ್ವಜನ, ಸ್ವಭಾಷೆ ಸ್ವನಾಡು ಸ್ವದೇಶವನ್ನೂ
ಭೂಮಂಡಲದ ಪರಿಸರವನ್ನೂ
**ಶ**ಕ್ತಿ-ಯುಕ್ತಿಯಿಂದ ಉಲ್ಲಾಸ-ಉತ್ಸಾಹದಿಂದ
**ಯ**ತ್ನ ಪ್ರಯತ್ನದಿಂದ ರಕ್ಷಿಸೋಣ;
**ಗ**ತಿವಿಧಿಗಳಿಂದ ದಶದಿಶೆಗಳಲ್ಲೂ ಗಿಡ ಮರಗ-
**ಳು** ಫಲಪುಷ್ಪಗಳಿಂದ ವಿಕಸಿಸಿ ಖಗ-ಮೃಗ,
ಮಾನವ ಜೀವಿಗಳಿಗೆ ಆಶ್ರಯದ
ಬೀಡಾಗಲಿ ಎಂದಾಶಿಸಿ
ಖರನಾಮಯುಗಾದಿಯನ್ನು ಸ್ವಾಗತಿಸುವ

**ಡಾ. ಅಹಲ್ಯಾ ಚಿಂತಾಮಣಿ ಮತ್ತು ಪರಿವಾರ**

## ಮಾವು, ಬೇವು, ಬೆಲ್ಲ

ಸೂರ್ಯದೇವನು ಹೊಸ ರಥವೇರಿ
ಅಕ್ಷಾಂಶ ಬದಲಿಸೊ ಸಮಯ
ಹಸಿರೆಲೆಗಳು ಹೊಸ ಚಿಗುರನು ಪಡೆದು
ಆಕಾಶ ನೋಡುವ ಸಮಯ
ಹಣ್ಣೆಲೆಗಳು ಹಳದಿಯಾಗಿ ಮಾಗಿ
ನೆಲವನು ಸೇರುವ ಸಮಯ
ಕೋಗಿಲೆಗಳು ಹೂಗುಚ್ಛವ ಹುಡುಕುತ
ರಾಗವ ಹುಡುಕುವ ಸಮಯ
ಪಕ್ಷಿ ಸಂಕುಲವು ಹೊಸ ಕೊಂಬೆಯ ನಡುವಲಿ
ಗೂಡನು ಕಟ್ಟುವ ಸಮಯ
ಮಾವಿನ ಗಿಡಕೆ ತನ್ನೆಲ್ಲ ಸಾರವ
ಚಿಗುರಿಗೆ ತುಂಬುವ ಸಮಯ
ಪ್ರೇಮಿಗಳು ಈ ಮಾವಿನ ಮರೆಯಲಿ
ತಮ್ಮ ಭಾಷೆಯ ಬೆಳೆಸುವ ಸಮಯ
ಮದುವೆಯಾದ ಹೊಸ ಜೋಡಿಯು
ತಮ್ಮ ರಸಿಕತೆ ಬೆಳೆಸುವ ಸಮಯ
ಮುಂದಕೆ ಹೋದರೆ ಒಂದೆರಡರ
ಬಾಳಿನ ಬೆಳಕಲಿ ನಲಿಯುವ ಸಮಯ
ಮುದಿತನವದು ಮಾವಿನ ನೆರಳಲಿ
ಕಳೆದ ಬದುಕನು ಸವಿಯುವ ಸಮಯ
ಮಂದಾರ, ಮಲ್ಲೆ ಹೂಗಿಡಗಳ ನಡುವಲಿ
ದುಂಬಿಯು ನಲಿಯುವ ಸಮಯ
ಮಂದ ಮಾರುತ ಬೀಸುತ ತಂಗಾಳಿ
ಮುಖದಲಿ ಹರಡುವ ಸಮಯ
ಚಂದ್ರನು ತನ್ನಯ ಬಿಂಬವ
ಮೋಡದ ಮರೆಯಲಿ ಮರೆಸುವ ಸಮಯ
ಬೇವು ಬೆಲ್ಲವ ಸಮ ಸಮವಾಗಿ
ಸವಿಯುತ ನಲಿಯುವ ಸಮಯ
ಹಳೆ ಯುಗಾದಿ ಕೈಬೀಸುತ ಹರುಷದಿ
ಹೊಸ ಯುಗಾದಿಯ ಕರೆಯುವ ಸಮಯ

**ಜಮುನಾ ಸಿ. ಮಠದ**


# Saujanya Printing Press

A HOUSE OF QUALITY PRINTING

C-95, Okhla Industrial Area, Phase-I,
New Delhi - 110 020
Phone : 26815778, 41611143
Mobile : 9811104398, 9811604398
e-mail : rvprintingpress@gmail.com / hpgp2006@gmail.com

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ

# ಮಹಿಳಾ ಯಕ್ಷಗಾನ

ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಮಾರ್ಚ್ 12ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಮಹಿಳಾ ಯಕ್ಷಗಾನವನ್ನು ಆಯೋಜಿಸಲಾಗಿತ್ತು. ಬೆಂಗಳೂರಿನ 'ಕರ್ನಾಟಕ ಮಹಿಳಾ ಯಕ್ಷಗಾನ' ತಂಡದವರು 'ಕೃಷ್ಣಲೀಲೆ ಕಂಸವಧೆ' ಪ್ರಸಂಗವನ್ನು ಪ್ರದರ್ಶಿಸಿದರು. ಕಲಾವಿದರೆಲ್ಲರೂ ಅತ್ಯುತ್ತಮ ಅಭಿನಯ ನೀಡಿದರು. ವಿಜಯಾ ಪಾತ್ರಧಾರಿ ಆಶಾ ರಾಘವೇಂದ್ರ ಅವರು ತಮ್ಮ ಹಾಸ್ಯಭರಿತ ಅಭಿನಯದಿಂದ ಪ್ರೇಕ್ಷಕರನ್ನು ರಂಜಿಸಿದರು.

ಶ್ರೀನಿವಾಸ ಸಾಸ್ತಾನ ಅವರ ನಿರ್ದೇಶನದಲ್ಲಿ ಪಾತ್ರಧಾರಿಗಳಾಗಿ : ಗೌರಿ ಶ್ರೀನಿವಾಸ್, ಶೃತಿ ಸೋಮಯಾಜಿ, ಲತಾ ರಮೇಶ್, ಸುಜಾತ ಉಡುಪ, ಲತಾ ಹೊಳ್ಳ, ಅಂಬಿಕಾ ವಿಜಯಕುಮಾರ್, ಆಶಾ ರಾಘವೇಂದ್ರ.

ಹಿಮ್ಮೇಳದಲ್ಲಿ : ಭಾಗತರು–ಶ್ರೀ ವೇಣುಗೋಪಾಲ ನಗರ, ಚೆಂಡೆ–ಶ್ರೀ ಸತೀಶ್ ಉಪಾಧ್ಯಾಯ, ಮದ್ದಳೆ–ಶ್ರೀ ನರಸಿಂಹ ಆಚಾರ್ ಅವರುಗಳು ಭಾಗವಹಿಸಿದ್ದರು.

ಸಂಘದ ಮಾಜಿ ಕಾರ್ಯದರ್ಶಿ ಯಕ್ಷಗಾನ ಕಲಾವಿದ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯ ಎಸ್. ಕೃಷ್ಣ ಭಟ್ ಅವರು ಕಲಾವಿದರಿಗೆ ಹೂಗುಚ್ಛ ನೀಡಿ ಅಭಿನಂದಿಸಿದರು ಹಾಗೂ ಸಂಘದ ಕಾರ್ಯದರ್ಶಿ ಸಿ.ಎಂ. ನಾಗರಾಜ್ ಸ್ಮರಣಿಕೆ ನೀಡಿ ಗೌರವಿಸಿದರು.






## 'ಸ್ತ್ರೀ ಶಕ್ತಿ ಪುರಸ್ಕಾರ' ಪಡೆದ ಹೆಮ್ಮೆಯ ಕನ್ನಡತಿ ಮೈಸೂರಿನ ರತ್ನಮ್ಮ




ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಪ್ರತಿ ವರ್ಷವೂ ಭಾರತ ಸರ್ಕಾರ ನೀಡುವ ಪ್ರತಿಷ್ಠಿತ "ಸ್ತ್ರೀ ಶಕ್ತಿ ಪುರಸ್ಕಾರ" ಈ ಬಾರಿ ಮೈಸೂರಿನ ರತ್ನಮ್ಮ ಅವರಿಗೆ ಲಭ್ಯವಾಗಿದೆ. ರಾಷ್ಟ್ರದಲ್ಲಿ ಕೇವಲ ನಾಲ್ಕು ಮಂದಿಗೆ ಮಾತ್ರ ದೊರೆಯುವ ಈ ರಾಷ್ಟ್ರೀಯ ಪುರಸ್ಕಾರ ಮೈಸೂರಿನ ಚಾಮುಂಡೇಶ್ವರಿ ಮಹಿಳಾ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ರತ್ನಮ್ಮ ಅವರಿಗೆ ಸಂದಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. 1995ರಲ್ಲಿ ಸ್ಥಾಪಿತವಾದ ಈ ಸಂಸ್ಥೆಯ ಮೂಲಕ ಮಹಿಳೆಯರ ಆರ್ಥಿಕ, ಸಾಮಾಜಿಕ ಅಭಿವೃದ್ಧಿಗಾಗಿ ಸೇವೆ ಮಾಡುತ್ತಿರುವ ರತ್ನಮ್ಮ ಅವರ ಸಾಧನೆ ಇತರರಿಗೂ ಆದರ್ಶಪ್ರಾಯ. ಈ ಸಂಸ್ಥೆಯಲ್ಲಿ ಸಾವಿರಾರು ಮಹಿಳೆಯರಿಗೆ ಉಪಯುಕ್ತವಾದ ಉಚಿತ ತರಬೇತಿಗಳನ್ನು ನೀಡಿ ಸ್ವಂತ ಉದ್ಯೋಗ ಕಲ್ಪಿಸುವಲ್ಲಿ ನೆರವಾಗಿದ್ದಾರೆ. ಅಲ್ಲದೇ "ಸಾಂತ್ವನ ಸ್ಕೀಮ್" ಸಹಾಯವಾಣಿಯನ್ನು ಮಹಿಳೆಯರಿಗಾಗಿ ಕಳೆದ ಎರಡು ವರ್ಷಗಳಿಂದ ನೀಡುತ್ತಾ ಬಂದಿದ್ದಾರೆ. ಬಾಲ್ಯವಿವಾಹ, ಬಾಲ ಕಾರ್ಮಿಕ ಪದ್ಧತಿ, ಲೈಂಗಿಕ ಕಿರುಕುಳ, ವೇಶ್ಯಾ ವೃತ್ತಿ, ವರದಕ್ಷಿಣೆ, ಕೌಟುಂಬಿಕ ಸಮಸ್ಯೆ ಮೊದಲಾದ ಸಾಮಾಜಿಕ ಪಿಡುಗುಗಳಿಗೆ ಪರಿಹಾರ ನೀಡುತ್ತಿದ್ದಾರೆ. ಕೌಟುಂಬಿಕ ಕಲಹಗಳಿಂದ ಶೋಷಿತರಾದ ಮಹಿಳೆಯರಿಗೆ ರಕ್ಷಣೆ ಹಾಗೂ ಕಾನೂನಿನ ನೆರವಿನ ಸಹಾಯ ಹಸ್ತ ಚಾಚುತ್ತಿದ್ದಾರೆ.

ಕರ್ನಾಟಕ ಸರ್ಕಾರದ 'ಕಿತ್ತೂರು ರಾಣಿ ಚೆನ್ನಮ್ಮ' ಪ್ರಶಸ್ತಿ ಜಿಲ್ಲಾ ಪ್ರಶಸ್ತಿ ಹಾಗೂ ಹಲವಾರು ಸ್ಥಳೀಯ ಪ್ರಶಸ್ತಿಗಳನ್ನು ಪಡೆದ ರತ್ನಮ್ಮ ಅವರ ಸಾಧನೆಗೆ ಮತ್ತೊಂದು ಗರಿ ಸ್ತ್ರೀ ಶಕ್ತಿ ಪುರಸ್ಕಾರ. ಪ್ರಶಸ್ತಿ ಸ್ವೀಕರಿಸಲು ದೆಹಲಿಗೆ ಬಂದ ಸಂದರ್ಭದಲ್ಲಿ ಮಾರ್ಚ್ 12ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಅವರನ್ನು ಅಭಿನಂದಿಸಲಾಯಿತು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷೆ, ಹಿರಿಯ ಕನ್ನಡತಿ ಡಾ. ಅಹಲ್ಯಾ ಚಿಂತಾಮಣಿ ಅವರು ಹೂಗುಚ್ಛ ನೀಡಿ ರತ್ನಮ್ಮ ಅವರನ್ನು ಅಭಿನಂದಿಸಿದರು. ಅಭಿನಂದನೆ ಸ್ವೀಕರಿಸಿದ ರತ್ನಮ್ಮ ಅವರು "ಮಹಿಳೆ ಮನಸ್ಸು ಮಾಡಿದರೆ ಏನನ್ನಾದರೂ ಸಾಧಿಸಬಲ್ಲಳು. ಕುಟುಂಬದ ನಿರ್ವಹಣೆಯ ಜವಾಬ್ದಾರಿಯ ಜೊತೆ ಜೊತೆಗೆ ಸಮಾಜ ಸೇವೆಗೂ ಪ್ರತಿಯೊಬ್ಬ ಮಹಿಳೆಯರೂ ಕೈಲಾದ ಮಟ್ಟಿಗೆ ಸೇವೆ ಸಲ್ಲಿಸಲು ಮುಂದಾಗಬೇಕು" ಎಂದರು. ದೆಹಲಿ ಕನ್ನಡಿಗರ ಪ್ರೀತಿ, ಅಭಿಮಾನ, ಅಭಿನಂದನೆ ರಾಷ್ಟ್ರೀಯ ಪುರಸ್ಕಾರಕ್ಕಿಂತಲೂ ಹೆಚ್ಚಿನ ಸಂತಸ ನೀಡಿದೆ ಎಂದು ಮನದುಂಬಿ ದೆಹಲಿ ಕರ್ನಾಟಕ ಸಂಘಕ್ಕೆ ಧನ್ಯವಾದ ಸಮರ್ಪಿಸಿದರು. ಸಂಘದ ಕಾರ್ಯದರ್ಶಿ ಸಿ.ಎಂ. ನಾಗರಾಜ್ ಸಂಘದ ಸ್ಮರಣಿಕೆ ನೀಡಿ ಗೌರವಿಸಿದರು.

# ದೆಹಲಿ ಕನ್ನಡ ಮಹಿಳಾ ಕಲಾವಿದರ ಚಿತ್ರಕಲಾ ಪ್ರದರ್ಶನ



ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ದೆಹಲಿ ಕನ್ನಡ ಮಹಿಳಾ ಕಲಾವಿದರ ಚಿತ್ರಕಲಾ ಪ್ರದರ್ಶನವನ್ನು ಮಾರ್ಚ್ 17ರಿಂದ 19ರವರೆಗೆ ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಆಯೋಜಿಸಲಾಗಿತ್ತು. ಮಾರ್ಚ್ 17ರ ಸಂಜೆ ಕನ್ನಡದ ಖ್ಯಾತ ಚಿತ್ರಕಲಾವಿದ ಎಸ್.ಜಿ. ವಾಸುದೇವ್ ಅವರು ಪ್ರದರ್ಶನವನ್ನು ಉದ್ಘಾಟಿಸಿ ಕಲಾವಿದೆಯರನ್ನು ಅಭಿನಂದಿಸಿದರು. ಅವರೊಡನೆ ದೆಹಲಿಯ ಲಲಿತಕಲಾ ಅಕಾಡೆಮಿಯ ಉಪಾಧ್ಯಕ್ಷ ಕೆ.ಆರ್. ಸುಬ್ಬಣ್ಣ ಅವರೂ ಉಪಸ್ಥಿತರಿದ್ದರು. ಪ್ರದರ್ಶನದಲ್ಲಿ ಪಾಲ್ಗೊಂಡ ಕಲಾವಿದೆಯರ ಉತ್ತಮ ಕಲಾಕೃತಿಗಳು ಕಲಾ ರಸಿಕರ ಪ್ರಶಂಸೆ ಗಳಿಸುವಲ್ಲಿ ಯಶಸ್ವಿಯಾಯಿತು.

ಹಿರಿಯ ಕಲಾವಿದೆಯರಾದ, ಅನು ನಾಯ್ಕ್, ಶಾಲನ್ ಮುರಗೋಡ, ಗೀತಾ ರಾಮಶೇಷ ಹಾಗೂ ಜ್ಯೋತಿ ಪೊದ್ದಾರ್, ಪೂಜಾ ಈರಣ್ಣ, ಮೀನಾಕ್ಷಿ, ಜಮುನಾ ಸಿ. ಮಠದ, ಸಂಗೀತ, ಎನ್. ಶಿಲ್ಪ ಮಾಧವ, ಇಂದು ರಂಗನಾಥ್ ಮತ್ತು ಮೀರಾನಾಡಿಗ್ ಅವರುಗಳು ಕಲಾ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು.

# ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ




ಮಾರ್ಚ್ 12, 2011ರ ಶನಿವಾರ ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಅವರು ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಿದರು. ಮುಖ್ಯ ಅತಿಥಿಯಾಗಿ ಶ್ರೀಮತಿ ಡಾ. ಕಿರಣ್ ಬೇಡಿಯವರನ್ನು ಆಮಂತ್ರಿಸಲಾಗಿತ್ತು.

ಶ್ರೀಮತಿ ಸುವರ್ಣ ಮತ್ತು ಸುಷ್ಮಾ ಭಿಡೆಯವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು. ಅಧ್ಯಕ್ಷೆ ಶ್ರೀಮತಿ ರಂಗಮಣಿ ರಾವ್ ಅವರು ಅತಿಥಿಗಳನ್ನು ಸ್ವಾಗತಿಸಿದರು ಹಾಗೂ ಶ್ರೀಮತಿ ಕಿರಣ್ ಬೇಡಿಯವರ ಪರಿಚಯ ಮಾಡಿದರು.

ಶ್ರೀಮತಿ ಕಿರಣ್ ಬೇಡಿಯವರು ತಮ್ಮ ಭಾಷಣದಲ್ಲಿ ಮಹಿಳೆ ತನ್ನ ವ್ಯಕ್ತಿತ್ವದ ವಿಕಾಸವನ್ನು ಹೇಗೆ ಮಾಡಿಕೊಳ್ಳಬೇಕು ಎಂಬುದರ ಬಗ್ಗೆ ಹೇಳಿದರು. ಮಹಿಳೆ ಶಿಸ್ತು, ಸಂಯಮ ಮತ್ತು ಆರೋಗ್ಯಕರವಾದ ಆಹಾರ ನಿಯಮಗಳನ್ನು ಶಿಸ್ತುಬದ್ಧವಾಗಿ ತನ್ನ ಜೀವನದಲ್ಲಿ ಅಳವಡಿಸಿಕೊಂಡು ತನ್ನ ಕುಟುಂಬ ಹಾಗೂ ಸಮಾಜಕ್ಕೆ ಬೇಕಾದ ಸೇವೆಯನ್ನು ಯೋಗ್ಯರೀತಿಯಲ್ಲಿ ಮಾಡಬಹುದು ಎಂದರು. ತಮ್ಮ ವೃತ್ತಿ ಜೀವನದಲ್ಲಿ ಪುರುಷ ಪ್ರಧಾನ ಸಮಾಜದಲ್ಲಿ ಎದುರಾದ ಸಮಸ್ಯೆಗಳನ್ನು ದಿಟ್ಟವಾಗಿ ಎದುರಿಸಿದ ಅನುಭವ ಹಾಗೂ ತಿಹಾರ್ ಜೈಲಿನ ಖೈದಿಗಳ ಸುಧಾರಣೆಯ ಕಾರ್ಯ ವೈಖರಿಯ ಬಗೆಯನ್ನು ನೆರೆದಿದ್ದ ಸದಸ್ಯೆಯರೊಡನೆ ಹಂಚಿಕೊಂಡರು. ಅಲ್ಲದೇ ಸದಸ್ಯೆಯರ ಕುತೂಹಲಭರಿತ ಪ್ರಶ್ನೆಗಳಿಗೆ ಭರವಸೆಗಳೊಂದಿಗೆ ಸಮಂಜಸವಾಗಿ ಸ್ಪಂದಿಸಿದರು.

ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನ ಇತಿಹಾಸದಲ್ಲಿ ಒಂದು ಸುಂದರವಾದ ಮೈಲಿಗಲ್ಲು ಎಂಬುದು ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸದಸ್ಯೆಯರ ಅನಿಸಿಕೆ. ಸಹಕಾರ್ಯದರ್ಶಿ ಅರುಣಾ ಶಶಿ ವಂದನಾರ್ಪಣೆ ಮಾಡಿದರು.

ಸುಷ್ಮಾ ಭಿಡೆ

# ಕನ್ನಡ ಚಿತ್ರರಂಗದ ಸತ್ಯಜಿತ್ ರೇ–ಪದ್ಮಶ್ರೀ ಪುರಸ್ಕೃತ ಗಿರೀಶ್ ಕಾಸರವಳ್ಳಿ




"ಯಾವುದೇ ಪ್ರಶಸ್ತಿಯ ಮೂಲಕ ಗುರುತಿಸಿಕೊಳ್ಳದೇ ಕೃತಿಯ ಮೂಲಕ ಗುರುತಿಸಿಕೊಳ್ಳಲು ನಾನು ಬಯಸುತ್ತೇನೆ"– ಇದು ಪದ್ಮಶ್ರೀ ಪುರಸ್ಕೃತ, ಖ್ಯಾತ ಕನ್ನಡ ಚಲನಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿಯವರ ಬಿಚ್ಚು ಮನದ ಮಾತುಗಳು. ಪದ್ಮಶ್ರೀ ಪುರಸ್ಕಾರ ಪಡೆದ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಏಪ್ರಿಲ್ 1ರಂದು ಅವರು ಭಾಗವಹಿಸಿ ಮಾತನಾಡಿದರು.

ದೂರದರ್ಶನದ ಉಪನಿರ್ದೇಶಕ ಆರ್. ಭರತಾದ್ರಿ ಅವರು ಗಿರೀಶ್ ಕಾಸರವಳ್ಳಿ ಅವರನ್ನು ಆಪ್ತವಾಗಿ ಪರಿಚಯಿಸುತ್ತಾ, "ಚಿತ್ರರಂಗದಲ್ಲಿದ್ದರೂ ಚಿತ್ರರಂಗದ ಬೆಡಗುಗಳಿಗೆ ಬಲಿಕೊಟ್ಟುಕೊಳ್ಳದ ಗಿರೀಶ್ ಒಬ್ಬ ಸಾಹಿತಿ, ಕವಿಯಾಗಿ ಭಿನ್ನವಾಗಿ ಕಾಣುತ್ತಾರೆ. ಅವರ ಚಿತ್ರ ನೋಡಿದಾಗ ಒಂದು ಒಳ್ಳೆಯ ಸಾಹಿತ್ಯವನ್ನೋ, ಕಾವ್ಯವನ್ನೋ ಓದಿದಂತಾಗುತ್ತದೆ. ಅವರ ಚಿತ್ರಗಳು ಸಮಾಜದ ನೈಜ ಜೀವನಕ್ಕೆ ಹಿಡಿದ ಕನ್ನಡಿ. ಸಾಮಾಜಿಕ ಸಮಸ್ಯೆಗಳನ್ನು ನಮ್ಮ ಮುಂದೆ ತೆರೆದಿಡುವ ಗಿರೀಶ್ ಅದಕ್ಕೆ ಪರಿಹಾರವನ್ನು ತಾವೇ ಕೊಡದೇ ಪ್ರೇಕ್ಷಕರನ್ನು ಚಿಂತನೆಗೆ ಪ್ರೇರೇಪಿಸುತ್ತಾರೆ. ಅವರು ಪಡೆದ ರಾಷ್ಟ್ರದ ಅತ್ಯುನ್ನತ ಪದ್ಮ ಪ್ರಶಸ್ತಿಯಲ್ಲಿ ಕನ್ನಡ ಸಾಹಿತ್ಯ ಮತ್ತು ಕಾವ್ಯದ ಪಾಲಿದೆ. ಮಲೆನಾಡಿನ ನಿಸರ್ಗದ ಮಧ್ಯೆ ಬೆಳೆದ ಗಿರೀಶ್ ಅವರ ದಟ್ಟ ಜೀವನಾನುಭವ ಅವರ ಚಿತ್ರಗಳಲ್ಲಿ ಗಟ್ಟಿಯಾಗಿ ಬೇರೂರಿವೆ" ಎಂದು

ಕಾಸರವಳ್ಳಿಯವರ ಬದುಕಿನ ಅನೇಕ ಮಜಲುಗಳನ್ನು ಹಂಚಿಕೊಂಡರು.

ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಪುಷ್ಪಗುಚ್ಛ ನೀಡಿ ಕಾಸರವಳ್ಳಿ ಅವರನ್ನು ಸ್ವಾಗತಿಸಿದರು. ದೆಹಲಿಯ ಹಿರಿಯ ಕನ್ನಡಿಗ, ಸಿಂಡಿಕೇಟ್ ಬ್ಯಾಂಕ್‌ನ ನಿವೃತ್ತ ಅಧಿಕಾರಿ ಬಿ.ವಿ. ಬಲ್ಲಾಳ್ ಅವರು ಶಾಲು ಹೊದೆಸಿ ಸನ್ಮಾನಿಸಿದರು. ಸಂಘದ ಉಪಾಧ್ಯಕ್ಷ ಬಿ.ಕೆ ಬಸವರಾಜು ಅವರು ಸ್ಮರಣಿಕೆ ಹಾಗೂ ಖಜಾಂಚಿ ರಾಮಮೂರ್ತಿ ಅವರು ಫಲತಾಂಬೂಲ ನೀಡಿ ಗೌರವಿಸಿದರು.

ಸನ್ಮಾನ ಸ್ವೀಕರಿಸಿದ ಗಿರೀಶ್ ಕಾಸರವಳ್ಳಿ ಅವರು ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಕ್ಕೆ ಈ ಮೊದಲು ತಮಿಳು ಸಂಘದಲ್ಲಿ ಭಾಗಿಯಾಗಿದ್ದು ಈಗ ಸಂಘದ ಭವ್ಯ ಕಟ್ಟಡದಲ್ಲಿ ಕುಳಿತು ಮಾತನಾಡುತ್ತಿರುವುದು ಸಂತೋಷವಾಗಿದೆ ಎಂದರು. ಔಷಧ ಶಾಸ್ತ್ರದಲ್ಲಿ ಶಬ್ದ ಪರಂಪರೆ ಇಲ್ಲದೇ ಬರೇ ಫಾರ್ಮೂಲಗಳ ಮೂಲಕ ಕಲಿತ ತಾವು ಶಬ್ದಗಳನ್ನು ಬಿಂಬಿಸುವಂತಾಯಿತು ಎಂದು ತಾವು ಚಿತ್ರರಂಗದಲ್ಲಿ ನಡೆದು ಬಂದ ಹಾದಿಯ ಬಗೆಗೆ ತಿಳಿಸಿದರು.

ಸಾಹಿತ್ಯದ ಪ್ರಭಾವವಿದ್ದರೂ ಸಿನೆಮಾ–ಕಲೆ ಅಲ್ಲ ಎಂಬ ಸಿದ್ಧಾಂತದವರಾಗಿದ್ದ ಗಿರೀಶ್ ಅವರಿಗೆ ಚಿಕ್ಕಪ್ಪ ಕೆ.ವಿ.ಸುಬ್ಬಣ್ಣನವರೇ ಅವರನ್ನು ಪುಣೆ ಫಿಲ್ಮ್ ಇನ್ಸ್ಟಿಟ್ಯೂಟ್‌ಗೆ ಸೇರಿಸಿ ಸಿನೆಮಾ ಬಗೆಗೆ ಒಲವು ಮೂಡಿಸಿದರು. ನವೋದಯ ಕಾಲದಲ್ಲಿ ಸಾಹಿತ್ಯದಲ್ಲಿ ಹೊಸ ಅಲೆ ಬಂತು, ಕಾವ್ಯದಲ್ಲೂ ಹೊಸ ಅಲೆ ಬಂತು, ಆದರೆ ಸಿನೆಮಾದಲ್ಲಿ ಯಾಕೆ ಇಲ್ಲ ಎಂಬ ಜಿಜ್ಞಾಸೆಯಿಂದ ಸಾಹಿತ್ಯವನ್ನಾಧರಿದ ಸಿನೆಮಾ ಪ್ರಾರಂಭಿಸಿದ ಹೆಗ್ಗಳಿಕೆಗೆ ಗಿರೀಶ್ ಪಾತ್ರರಾಗುತ್ತಾರೆ. ತಮ್ಮ ಕೃತಿಗಳನ್ನು ತೆರೆಯ ಮೇಲೆ ತರಲು ಯಥಾವತ್ತಾಗಿರಬೇಕೆಂಬ ಯಾವ ಮಡಿವಂತಿಕೆಯನ್ನೂ ತೋರದೇ ಒಪ್ಪಿಗೆ ಇತ್ತದ್ದು ಕನ್ನಡ ಸಾಹಿತಿಗಳ ದೊಡ್ಡತನ ಎಂದು ಕಾಸರವಳ್ಳಿ ಸಾಹಿತಿಗಳನ್ನು ಅಪ್ಯಾಯತೆಯಿಂದ ನೆನೆದರು. ವಾಸ್ತವದ ಬೇರೆ ಬೇರೆ ಸಂಘರ್ಷದ ನೆಲೆಗಳನ್ನು ಚಿತ್ರದ ಮೂಲಕ ಬಿಂಬಿಸುವ ಅತ್ಯಂತ ಸರಳ ನಿರಾಡಂಬರದ ಗಿರೀಶ್ ಕಾಸರವಳ್ಳಿ ಕನ್ನಡ ಚಿತ್ರರಂಗ ಪರಂಪರೆಯಲ್ಲಿ ಭಿನ್ನರಾಗಿ, ವಿಶಿಷ್ಟರಾಗಿ ನಿಲ್ಲುತ್ತಾರೆ.

ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಕಾಸರವಳ್ಳಿ ಅವರನ್ನು ಅಭಿನಂದಿಸುತ್ತಾ ಮುಂದಿನ ದಿನಗಳಲ್ಲಿ ಕಾಸರವಳ್ಳಿ ಅವರ ಚಲನಚಿತ್ರೋತ್ಸವವನ್ನು ಹಮ್ಮಿಕೊಂಡು ಸಂವಾದ ಕಾರ್ಯಕ್ರಮವನ್ನು ಆಯೋಜಿಸುವ ಆಶಯವನ್ನು ವ್ಯಕ್ತಪಡಿಸಿದರು. ದೆಹಲಿಯ ಚಿತ್ರರಸಿಕರು, ಅಭಿಮಾನಿಗಳು, ಚಿತ್ರದ ವಿತರಣೆ, ತಾಂತ್ರಿಕ ಅಡೆತಡೆಗಳ ಪರಿಶೀಲನೆ ಹಾಗೂ ನಕಲೀಕರಣದ ಬಗ್ಗೆ ನಡೆಸಿದ ಸಂವಾದದಲ್ಲಿ ಗಿರೀಶ್ ಅವರು ಪಾಲ್ಗೊಂಡು ಸ್ಪಂದಿಸಿದರು. ಇದೇ ಸಂಧರ್ಭದಲ್ಲಿ ದೆಹಲಿ ಕನ್ನಡಿಗ, ಸಖಾರಾಮ ಉಪ್ಪೂರ ಅವರು ಸಂಪಾದಿಸಿದ 'ಬುಡಕಟ್ಟು ಜನಾಂಗದ ಸ್ಥಾನಾಂತರ ಹಾಗೂ ಪುನರ್ವಸತಿ' ಎಂಬ ಇಂಗ್ಲಿಷ್ ಕೃತಿ ಮಾರ್ಚ್ 31 ರಂದು ಲಂಡನ್‌ನಲ್ಲಿ ಬಿಡುಗಡೆಯಾಗಿದ್ದು ಅವರನ್ನು ಗಿರೀಶ್ ಕಾಸರವಳ್ಳಿ ಅವರು ಹೂಗುಚ್ಛ ನೀಡಿ ಅಭಿನಂದಿಸಿದರು. ಸಂಘದ ಸಹಕಾರ್ಯದರ್ಶಿ ರೇಣುಕಾ ನಿಡಗುಂದಿ ಅವರು ಕಾರ್ಯಕ್ರಮ ನಿರೂಪಿಸಿದರು.

*ಭಾರತೀಯ ಚಿತ್ರರಂಗದಲ್ಲಿ ಸತ್ಯಜಿತ್ ರೇ (ಸ್ವರ್ಣ ಕಮಲ) ಅವರ ನಂತರ 4 ಸ್ವರ್ಣ ಕಮಲಗಳನ್ನು ಪಡೆದ ಗಿರೀಶ್ ಕಾಸರವಳ್ಳಿ ಅವರು ಇನ್ನೂ ಹೆಚ್ಚಿನ ಸ್ವರ್ಣ ಕಮಲಗಳನ್ನು ಪಡೆದು ಸತ್ಯಜಿತ್ ರೇ ಅವರ ದಾಖಲೆಯನ್ನು ಮುರಿಯುವಂತಾಗಲಿ–ಎಂಬುದು ಸಮಸ್ತ ದೆಹಲಿ ಕನ್ನಡಿಗರ ಹೃದಯಪೂರ್ವಕ ಹಾರೈಕೆಗಳು.*

## ವೀರಣ್ಣ ಕಮ್ಮಾರ–ಗುಲಬರ್ಗಾ ವಿಶ್ವವಿದ್ಯಾಲಯದ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಗಿ ನೇಮಕ



ದೆಹಲಿಯ ಕನ್ನಡ ವಲಯದಲ್ಲಿ ಕನ್ನಡ ಪರ ಚಟುವಟಿಕೆಗಳಲ್ಲಿ ಸದಾ ಸಕ್ರಿಯರಾಗಿದ್ದ ಉತ್ಸಾಹಿ ಯುವ ಮಿತ್ರ ಶ್ರೀ ವೀರಣ್ಣ ಕಮ್ಮಾರ ಅವರು ಈಗ ಗುಲ್ಬರ್ಗಾ ವಿಶ್ವವಿದ್ಯಾಲಯದ ಅಸಿಸ್ಟೆಂಟ್ ರಿಜಿಸ್ಟ್ರಾರ್ (ಸಾರ್ವಜನಿಕ ಸಂಪರ್ಕಾಧಿಕಾರಿ) ಆಗಿ ನೇಮಕಗೊಂಡಿದ್ದಾರೆ.

ದೆಹಲಿಯಲ್ಲಿ ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆಯಲ್ಲಿ ಪ್ರಭಾರ ಉಪನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತ ಕನ್ನಡಿಗರಿಗಾಗಿ ಸಿನೆಮಾ ಪ್ರದರ್ಶನಗಳು, ನಾಟಕ ಕಮ್ಮಟಗಳು, ನಾಟಕಗಳ ನಿರ್ದೇಶನ, ಬರಹ ಇತ್ಯಾದಿಗಳಿಂದ ಸದಾ ಸಕ್ರಿಯರಾಗಿದ್ದ ಶ್ರೀ ವೀರಣ್ಣ ಕಮ್ಮಾರರು ಇದೀಗ ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಹೊಸ ಹುದ್ದೆಯನ್ನು ಅಲಂಕರಿಸುತ್ತಿರುವುದು ದೆಹಲಿ ಕನ್ನಡಿಗರಿಗೆ ಹೆಮ್ಮೆಯ ಸಂಗತಿ. ನೂತನ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸುತ್ತ ತಮ್ಮ ಕಾರ್ಯಕ್ಷೇತ್ರದಲ್ಲಿ ಮತ್ತಷ್ಟು ಯಶಸ್ಸು ಗಳಿಸಲಿ ಎಂಬುದು ಸಮಸ್ತ ದೆಹಲಿ ಕನ್ನಡಿಗರ ಹಾರೈಕೆ ಹಾಗೂ ಹಾರ್ದಿಕ ಅಭಿನಂದನೆಗಳು.

ಲೇಖನ

# ಆಧುನಿಕ ಭಾರತದ ನಿರ್ಮಾತೃ–ಡಾ: ಬಿ.ಆರ್. ಅಂಬೇಡ್ಕರ್



ಸಾಮಾಜಿಕ ಸಮಾನತೆಗಾಗಿ ಕಳೆದ ಅನೇಕ ಶತಮಾನಗಳಿಂದ ಹೋರಾಟಗಳು ಭಾರತದಲ್ಲಿ ನಡೆದಿವೆ. ಭಕ್ತಿ ಪಂಥದವರು 'ಭಗವಂತನ ದೃಷ್ಟಿಯಲ್ಲಿ ಎಲ್ಲರೂ ಸಮಾನರು, ಮಾನವರೆಲ್ಲ ದೇವರ ಮಕ್ಕಳು' ಎಂದು ಸೋದರತ್ವ ಸಾರಿದರೆ, ಜಾತಿಭೇದದ ವಿರುದ್ಧ ಬಸವಣ್ಣನಂಥವರು ಚಳುವಳಿಯನ್ನೇ ನಡೆಸಿದರು. ಆಧುನಿಕ ಭಾರತದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಜೊತೆ ಜೊತೆಯಲ್ಲಿ ಸಮಾಜ ಸುಧಾರಣೆಯ ಪ್ರಯತ್ನಗಳನ್ನು ಜ್ಯೋತಿಬಾ ಫೂಲೆಯವರು, ಟಿಳಕರು, ವಿದ್ಯಾಸಾಗರರು ಹಾಗೂ ಇತರರು ಮಾಡಿರುವುದು, ಸ್ವಾಮಿ ವಿವೇಕಾನಂದರ ಭಾರತದ ಪುನರುತ್ಥಾನದ ಪ್ರಯತ್ನಗಳು, ಎಲ್ಲವೂ ಸರ್ವವಿಧಿತ. ಈ ಎಲ್ಲ ಮಹನೀಯರ ಉದಾತ್ತ ಧ್ಯೇಯಗಳ ಅನುಷ್ಠಾನದ ದಿಸೆಯಲ್ಲಿಯೇ ರಾಜಕೀಯ ರಂಗದಲ್ಲೂ ಪ್ರಯತ್ನಗಳಾದವು. ಅತಿ ಮುಖ್ಯವಾಗಿ ಸಾಮಾಜಿಕ ಅನ್ಯಾಯಕ್ಕೊಳಗಾದವರೇ ಹೋರಾಟದ ನೇತೃತ್ವ ವಹಿಸಿದ್ದುದು ವಿಶೇಷ; ಅವರೇ ಡಾ: ಅಂಬೇಡ್ಕರ್‌ರವರು. ಭಾರತದ ಸುಮಾರು 20 ಕೋಟಿ ಜನ ಅಸ್ಪೃಶ್ಯತೆಯ ಬೇಗೆಯಲ್ಲಿ ಬೆಂದು ನರಳುವುದನ್ನು ಸ್ವತ: ಶೋಷಣೆಯನ್ನು ಅನುಭವಿಸಿದ ಅಂಬೇಡ್ಕರ್‌ರವರು ವ್ಯವಸ್ಥೆಯನ್ನು ಕಾನೂನಾತ್ಮಕವಾಗಿ ಸುಧಾರಣೆಗೈದ ಪ್ರಥಮ ವ್ಯಕ್ತಿ. ಅಸ್ಪೃಶ್ಯರು ಕಾಶೀರಾಮ್ ದೇವಾಲಯ ಪ್ರವೇಶಕ್ಕಾಗಿ ನಡೆದ ಚಳುವಳಿ, ಮಹಡ್ ನದಿಯ ನೀರು ಕುಡಿಯಲು ನಡೆದ ಹೋರಾಟ ಮುಂತಾದ ಹೋರಾಟಗಳ ಮುಂಚೂಣಿಯಲ್ಲಿದ್ದ ಅಂಬೇಡ್ಕರ್ ಆ ಜನರ ಕಷ್ಟಗಳನ್ನು ಮನಗಂಡಿದ್ದರು. ತಮಟೆ ಹೊಡೆಯುವ ಕೆಲಸ, ಊರ ಕಸ ಗುಡಿಸುವ, ಚಪ್ಪಲಿ ಹೊಲೆಯುವ, ಹೆಣ ಹೊರುವ, ಸತ್ತ ದನ ಎಳೆದೊಯ್ಯುವ, ಅದರ ಚರ್ಮ ತೆಗೆದು ಹದ ಮಾಡುವ, ಊರ ಮಲಿನತೆ ತೆಗೆದು ಸ್ವಚ್ಛ ಮಾಡುವ ಇತ್ಯಾದಿ ಕೀಳೆನಿಸುವ ಕೆಲಸಗಳನ್ನೇ ಪಾರಂಪರಗತವಾಗಿ ಮಾಡುತ್ತಾ ಜೀವನ ಸಾಗಿಸುತ್ತಿರುವ ಮಧ್ಯೆ 'ದಲಿತ ಸೂರ್ಯ' ನಾಗಿ ಹೊರಹೊಮ್ಮಿದ ಡಾ. ಅಂಬೇಡ್ಕರ್‌ರವರು ಬಿ.ಎ. ಪದವಿಯನ್ನು 1912 ರಲ್ಲಿ ಸಿಡನ್ ಹ್ಯಾಂ ಕಾಲೇಜಿನಿಂದ ಪಡೆದು ತದನಂತರ ಸತತಾಭ್ಯಾಸ ಪರಿಶ್ರಮದಿಂದ ಎಂ.ಎ., ಪಿಹೆಚ್.ಡಿ ಪದವಿಗಳನ್ನು ಕೊಲಂಬಿಯಾ ವಿಶ್ವವಿದ್ಯಾನಿಲಯದಿಂದ, ಎಂ.ಎಸ್.ಸಿ., ಡಿಎಸ್.ಸಿ ಪದವಿಗಳನ್ನು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಅಂಡ್ ಪೊಲಿಟಿಕಲ್ ಸೈನ್ಸ್ ಮತ್ತು ಬ್ಯಾರಿಸ್ಟರ್ ಪದವಿಯನ್ನು ಗ್ರೇಜ್ ಇನ್, ಲಂಡನ್ನಿನಿಂದ ಪಡೆದವರಾಗಿ ಕೆಲಕಾಲ ಜರ್ಮನಿಯಲ್ಲಿಯೂ ವಿದ್ಯಾಭ್ಯಾಸ ಮುಂದುವರೆಸಿದ್ದರು. ಇಂಥ ಮೇಧಾವಿಯನ್ನು ಸಹಜವಾಗಿ ಭಾರತದ ಸಂವಿಧಾನ ರಚನಾ ಕರಡು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಯಿತು; ತದನಂತರ ಸ್ವತಂತ್ರ್ಯ ಭಾರತದ ಪ್ರಥಮ ಕಾನೂನು ಸಚಿವರಾಗಿಯೂ ಅಂಬೇಡ್ಕರ್ ಸೇವೆ ಸಲ್ಲಿಸಿದರು. ಸಂವಿಧಾನ ತಜ್ಞರಾಗಿ, ಸಂಸದ್ಪಟುವಾಗಿ ಡಾ: ಅಂಬೇಡ್ಕರ್ ಭಾರತದ ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾಗಿ ಪ್ರತಿಯೊಂದು ಅನುಚ್ಛೇದ, ಪರಿಚ್ಛೇದಗಳನ್ನು ವಿವರಿಸಿ, ಆ ಸಂಬಂಧದ ಪ್ರತಿಯೊಂದು ಪ್ರಶ್ನೆಗೂ ಸಮಾಧಾನ, ವಿವರಣೆ, ಸಮರ್ಪಕ ಉತ್ತರ ನೀಡಿ, ಸ್ವಾತಂತ್ರ್ಯಾನಂತರ ಭಾರತವು ಪ್ರಜಾಸತ್ತಾತ್ಮಕ ತಳಹದಿಯ ಮೇಲೆ ಕಾರ್ಯನಿರ್ವಹಿಸುವಂತೆ ನೋಡಿಕೊಂಡರು. ಅವರು ಈ ದಿಸೆಯಲ್ಲಿ ಮಾಡಿದ ಪ್ರಯತ್ನ ಹಾಗೂ ಗುರಿಸಾಧನೆ ಅವಿಸ್ಮರಣೀಯ.

ಭಾರತದಲ್ಲಿ ಜಾತಿಯಾಧಾರಿತ ವರ್ಗಗಳಿಂದಾಗಿ ಸ್ವಾತಂತ್ರ್ಯ ಸೀಮಿತವಾಗಿದೆ. ಮೇಲ್ವರ್ಗದವರು ತಮ್ಮ ಸಾಮಾಜಿಕ ಸ್ಥಾನಮಾನದಿಂದ ಆರ್ಥಿಕ ಬಲವನ್ನು, ಉನ್ನತ ಶಿಕ್ಷಣವನ್ನು ಪಡೆಯುತ್ತಾರೆ, ಜಾತಿಗನುಸಾರ ಸಂಸ್ಕೃತಿ, ಸಂಸ್ಕಾರ, ಪರಿಸರ ಹೊಂದುತ್ತಾರೆ. ಆದರೆ ಗ್ರಾಮೀಣ ಭಾರತದ ಸುಮಾರು ಎಪ್ಪತ್ತು ಪ್ರತಿಶತ ಜನರಲ್ಲಿ ಮೂವತ್ತು ಪ್ರತಿಶತ ಜನ ಕನಿಷ್ಠ ವರಮಾನದ ದುಡಿಮೆ, ಕೀಳೆನಿಸುವ ಉದ್ಯೋಗ ಮಾಡುತ್ತಾ ಊರಹೊರಗಿನ ಕೇರಿಯಲ್ಲಿ ಬಡತನದ ಮೌಢ್ಯತೆಯ ಆಗರವೆನಿಸುವ ಪರಿಸರದಲ್ಲಿ ಬದುಕುತ್ತಾರೆ. ಈ ಜನರ ಬದುಕಿನ ನೈಜ ಚಿತ್ರಣವನ್ನು ಡಾ: ಅಂಬೇಡ್ಕರ್ ರವರು ತಮ್ಮ 'ಶೂದ್ರ ಯಾರು' ಎಂಬ ಗ್ರಂಥದಲ್ಲಿ, 'ಭಾರತದಲ್ಲಿನ ಜಾತಿಗಳು' 'ಜಾತಿ ವಿನಾಶ' 'ಅಸ್ಪೃಶ್ಯರು ಅಥವಾ ಭಾರತದ ಕೊಳೆಗೇರಿಗಳ (ಘೆಟ್ಟೋ) ಮಕ್ಕಳು' ಪುಸ್ತಕಗಳಲ್ಲಿ ವಿಶ್ಲೇಷಿಸಿದ್ದಾರೆ. ಹೊರ ಬಂದಿರುವ ಹದಿನೇಳು ಸಂಪುಟಗಳ ಅವರ ಭಾಷಣ ಬರಹಗಳಲ್ಲಿ ಡಾ: ಅಂಬೇಡ್ಕರ್‌ರವರ ಚಿಂತನೆಯನ್ನು, ಬಲಿಷ್ಠ ಭಾರತ ನಿರ್ಮಾಣದಲ್ಲಿ, ಸಮಾಜ ಸುಧಾರಣೆಯ ನಿಟ್ಟಿನಲ್ಲಿ ಅವರ ಪ್ರಯತ್ನಗಳನ್ನು ಕಾಣಬಹುದಾಗಿದೆ. ಅವರ ವಿಶ್ಲೇಷಣಾತ್ಮಕ ನುಡಿಗಳು ಕೆಲವೊಮ್ಮೆ ಕಠೋರ ಟೀಕೆಗಳನ್ನೊಳಗೊಂಡರೂ ಅವುಗಳೆಲ್ಲವೂ ಸಾಮಾಜಿಕ ವ್ಯವಸ್ಥೆಯಲ್ಲಿನ ನ್ಯೂನತೆಗಳನ್ನು ಎತ್ತಿತೋರಿಸುವ ರಚನಾತ್ಮಕ ಟೀಕೆಗಳಾಗಿ ಮೂಡಿಬಂದಿವೆ.

ಭಾರತದಲ್ಲಿ ಮಾತ್ರ ಕಂಡುಬರುವ ಜಾತಿಯಾಧಾರಿತ ಸಾಮಾಜಿಕ ವ್ಯವಸ್ಥೆಯಲ್ಲಿ ಸಿಲುಕಿ ನಲುಗಿದ ಡಾ.ಅಂಬೇಡ್ಕರ್‌ರವರು ಪ್ರತಿಕೂಲಗಳ ಮಧ್ಯೆಯೇ ತಮ್ಮ ಪ್ರತಿಭೆ, ಪರಿಶ್ರಮಗಳಿಂದ 'ಭಾರತ ರತ್ನ'ವಾದರು, ವಿಶ್ವಮಾನ್ಯರಾದರು. ನಿಮ್ನ ವರ್ಗದಲ್ಲಿ ಜನಿಸಿದ ಕಾರಣ ಮುಂಬೈನ ಸಿಡನ್ ಹ್ಯಾಂ ಕಾಲೇಜಿನ ಪ್ರಾಧ್ಯಾಪಕರಾಗಿಯೂ ಸಹೋದ್ಯೋಗಿಗಳು ಕುಡಿಯುವ ನೀರನ್ನು ಅವರು ಮುಟ್ಟುವಂತಿರಲಿಲ್ಲ; ಬರೋಡ ಮಹಾರಾಜರ ಮಿಲಿಟರಿ ಸೆಕ್ರೆಟರಿಯಾಗಿದ್ದರೂ ವಸತಿ ಸೌಕರ್ಯ ದೊರಕಿರಲಿಲ್ಲ. 1920 ರ ದಶಕದಲ್ಲಿನ ಇಂಥ ಸ್ಥಿತಿಯನ್ನು ಈವತ್ತಿಗೂ ಕೂಡ ಕೆಲವೆಡೆ ಕಾಣಬಹುದು.

ಭಾರತಕ್ಕೆ ಸಂವಿಧಾನ ಅರ್ಪಿಸುವ ಸಂದರ್ಭದಲ್ಲಿ ಡಾ: ಅಂಬೇಡ್ಕರ್ ನುಡಿದ ಮಾತು ಇಂದಿಗೂ ಪ್ರಸ್ತುತ. "ಭಾರತದಲ್ಲಿ ಸಾಮಾಜಿಕ ಅಸಮಾನತೆಯ ಬುನಾದಿಯ ಮೇಲೆ ನಿಂತಿರುವ ಸಮಾಜವನ್ನು ಹೊಂದಿದ್ದೇವೆ...... ಆರ್ಥಿಕ ಪಾತಳಿಯ ಮೇಲೆ ನಾವು ಕೆಲವು ಆಗರ್ಭ ಶ್ರೀಮಂತರನ್ನೂ, ತದ್ವಿರುದ್ಧವಾಗಿ ಕಡುಬಡತನದಲ್ಲಿ ಬದುಕುತ್ತಿರುವ ಅಸಂಖ್ಯಾತ ಜನರನ್ನೂ ಇರುವ ಸಮಾಜವನ್ನು ಹೊಂದಿದ್ದೇವೆ." "ಜನವರಿ 26, 1950 ರಿಂದ ನಾವು ವಿಪರ್ಯಾಸದ ಬದುಕನ್ನು ಒಪ್ಪಿಕೊಳ್ಳುತ್ತಿದ್ದೇವೆ, ರಾಜಕೀಯ ಕ್ಷೇತ್ರದಲ್ಲಿ ನಾವು 'ಒಂದು ವೋಟು, ಒಂದು ಮೌಲ್ಯ' ತತ್ವವನ್ನು ಒಪ್ಪಿ, ಸಾಮಾಜಿಕ ಕ್ಷೇತ್ರದಲ್ಲಿ 'ಒಬ್ಬ ವ್ಯಕ್ತಿ, ಒಂದು ಮೌಲ್ಯ' ತತ್ವವನ್ನು ನಿರಾಕರಿಸುತ್ತಿದ್ದೇವೆ. ಎಷ್ಟು ಸಮಯ ನಾವು ವಿಪರ್ಯಾಸದ ಜೀವನ ನಡೆಸಲು ಸಾಧ್ಯ? ಹೆಚ್ಚು ಸಮಯ ನಾವು ಇದನ್ನು ನಡೆಸಿದ್ದಾದರೆ, ಅಸಮಾನತೆ, ಅನ್ಯಾಯದಿಂದ ಬಳಲುತ್ತಿರುವವರು ಬಂಡೇಳುವುದು ನಿಜ......... (ಅಂಥವರು) ದೇಶದ ಪ್ರಜಾಸತ್ತೆಯನ್ನೇ ಉರುಳಿಸಬಹುದು." ಡಾ: ಅಂಬೇಡ್ಕರ್ ಅವರ ಈ ಆತಂಕ ಇಂದಿಗೂ ಪ್ರಸ್ತುತ. ಸಾಮಾಜಿಕ ಅಸಮಾನತೆ, ಅನ್ಯಾಯ ಹಾಗೂ ಆರ್ಥಿಕ ಅಸಮಾನತೆಯಿಂದಾಗಿ ಬಳಲುತ್ತಿರುವವರು ಇಂದು ನ್ಯಾಯಕ್ಕಾಗಿ ಅಸಂವಿಧಾನಾತ್ಮಕ ವಿಧಾನಗಳನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ಇಂಥ ವಿಧಾನಗಳನ್ನು ಡಾ: ಅಂಬೇಡ್ಕರ್ ರವರು 'ಅರಾಜಕತೆಯ ವ್ಯಾಕರಣ' ಎಂದು ಖಂಡಿಸಿದ್ದರು. ಆದಾಗ್ಯೂ, ಉನ್ನತ ಮಟ್ಟದಲ್ಲಿ ಜವಾಬ್ದಾರಿಯುತ ಅಧಿಕಾರ ಹೊಂದಿರುವವರು ಡಾ: ಅಂಬೇಡ್ಕರ್ ನೀಡಿರುವ ಆತಂಕಕಾರಿ ತಾಕೀತನ್ನು ನೆನಪಿನಲ್ಲಿಟ್ಟುಕೊಳ್ಳುವುದು ಒಳಿತು. ಇಲ್ಲದೆ ಹೋದರೆ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯಿಂದ ಅನ್ಯಾಯಕ್ಕೊಳಗಾದವರು ಭಾರತದ ಪ್ರಜಾಸತ್ತೆಗೆ ಧಕ್ಕೆ ತರುವುದಂತೂ ನಿಜ.

ಸಂವಿಧಾನದ ಮೂಲಕ ನಾವು ಭಾರತೀಯರೆಲ್ಲ ಏಕತೆಗೆ ಬದ್ಧರಾಗಿದ್ದು, ಏಕಪೌರತ್ವವನ್ನು ಪಡೆದು, ಮೂಲಭೂತ ಹಕ್ಕುಗಳನ್ನು ಮತ್ತು ದೇಶದ ಉದ್ದಗಲಕ್ಕೂ ಸ್ವಾತಂತ್ರ್ಯವನ್ನು ಖಾತರಿ ಮಾಡಿಕೊಂಡಿದ್ದೇವೆ. ಆದರೆ ಸ್ವಾತಂತ್ರ್ಯ ಬಂದ ನಂತರದ ದಿನಗಳಲ್ಲಿ ಮೂಲ ಉದ್ದೇಶವನ್ನೇ ಮರೆತಿದ್ದೇವೇನೋ. ಸಂವಿಧಾನವನ್ನು ಒಪ್ಪಿಕೊಂಡ ನಂತರವೂ ಅದಕ್ಕೆ ಬದ್ಧರಾಗಿ ಏಕತೆಯನ್ನು ಮರೆಯುವ ಬದಲು ನಮ್ಮ ನಮ್ಮ ಜಾತಿ, ಮತ, ಪ್ರಾಂತ್ಯ, ಭಾಷೆ ಇತ್ಯಾದಿಗಳಿಗೇ ಹೆಚ್ಚು ಬದ್ಧರಾಗಿದ್ದೇವೆ; ದೊಡ್ಡವರೆನಿಸಿಕೊಳ್ಳಬೇಕೆಂದವರು ದೇಶದ ಅಖಂಡತೆಗೆ, ಪ್ರಜಾಸತ್ತೆಗೆ ಧಕ್ಕೆ ತರುತ್ತಿದ್ದಾರೆ. ಡಾ: ಅಂಬೇಡ್ಕರ್ ಬಲವಾಗಿ ನಂಬಿದ್ದು, "ನನ್ನ ಅಭಿಪ್ರಾಯದಲ್ಲಿ ಇಂದಿನ ಅತಿಮುಖ್ಯ ಅಗತ್ಯತೆ ಜನಸಾಮಾನ್ಯರಲ್ಲಿ ರಾಷ್ಟ್ರೀಯ ಪ್ರಜ್ಞೆ (ಕಾಮನ್ ನ್ಯಾಷನಾಲಿಟಿ) ಮೂಡಿಸುವುದಾಗಿದೆ.... ನಾವು ಭಾರತೀಯರು ಮೊದಲು, ಹಿಂದೂಗಳು, ಮುಸಲ್ಮಾನರು, ಸಿಂಧಿಗಳು ನಂತರ. ಆದರೆ ನಾವು ಭಾರತೀಯರು ಮೊದಲು, ಭಾರತೀಯರು ಕೊನೆಗೂ." ಇಂಥ ಮಹಾನ್ ದೇಶಭಕ್ತ, ಉದಾತ್ತ ಆದರ್ಶ ವ್ಯಕ್ತಿ ಡಾ: ಭೀಮರಾವ್ ರಾಮ್‌ಜಿ ಅಂಬೇಡ್ಕರ್ 14.4.1891 ರಿಂದ 6.12.1956 ರವರೆಗೆ ಭಾರತದಲ್ಲಿ ಬೆಳಗಿ ನಿರ್ವಾಣ ಹೊಂದಿದರೂ ಅವರ ಜೀವನ, ಸಾಧನೆ ನಡೆ ನುಡಿಗಳು ಇಂದಿಗೂ ಎಂದಿಗೂ ಪ್ರಸ್ತುತ.

ಡಾ: (ಶ್ರೀಮತಿ) ಚಂದ್ರಮ ಎಸ್.ಕಣಗಲಿ
ಉಪ ನಿವಾಸಿ ಆಯುಕ್ತರು ಕರ್ನಾಟಕ ಭವನ, ನವದೆಹಲಿ.

# ದೆಹಲಿ ಕರ್ನಾಟಕ ಸಂಘದ ವಾರ್ಷಿಕೋತ್ಸವದ ವಿವಿಧ ಸ್ಪರ್ಧೆಗಳ ಫಲಿತಾಂಶ

**ಟೇಬಲ್ ಟೆನ್ನಿಸ್** : 1. ಸಾಹಿಲ್ ಸರ್ವದೇವ 2. ಜೆ.ವಿ. ಅಭಯ್

**ಶಟಲ್ ಬ್ಯಾಡ್ಮಿಂಟನ್** (15 ವರ್ಷ ಮೇಲ್ಪಟ್ಟ ಪುರುಷರು) 1. ಜೆ.ವಿ. ಅಭಯ್ 2. ಎಸ್.ಆರ್. ಭರತ್ 3. ಸಂದೀಪ್ ಎಸ್

**ಶಟಲ್ ಬ್ಯಾಡ್ಮಿಂಟನ್** (15 ವರ್ಷ ಮೇಲ್ಪಟ್ಟ ಮಹಿಳೆಯರು) 1. ಏಕತಾ ಮೂರ್ತಿ 2. ಅನಿತಾ ಮೂರ್ತಿ 3. ಭಾರತಿ ನಿಂಗಪ್ಪ

**ಕೇರಂ ಸಿಂಗಲ್ಸ್** (15 ವರ್ಷ ಮೇಲ್ಪಟ್ಟ ಪುರುಷರು) 1. ಜೆ.ಜಿ. ಗೋರೆ 2. ಸುದರ್ಶನ್ ಶೆಟ್ಟಿ 3. ಎ. ಸರ್ವದೇವ

**ಕೇರಂ ಡಬಲ್ಸ್** (15 ವರ್ಷ ಮೇಲ್ಪಟ್ಟ ಪುರುಷರು) 1. ತ್ಯಾಗೇಶ್ ಮೂರ್ತಿ ಮತ್ತು ಈರೇಂದ್ರ ಕುಮಾರ್ 2. ಹರಿಶ್ಚಂದ್ರ ಬಂಟ್ವಾಳ್ ಮತ್ತು ಎಚ್.ಜಿ. ಶಿವರಾಂ 3. ಎ. ಸರ್ವದೇವ ಮತ್ತು ಸೋಮಯ್ಯ

**ಕೇರಂ ಸಿಂಗಲ್ಸ್** (15 ವರ್ಷ ಮೇಲ್ಪಟ್ಟ ಮಹಿಳೆಯರು) 1. ಸಹನಾ 2. ಮಮತಾ ಶಿವರಾಮ 3. ಗಿರಿಜಾ ಜಿ.ಕೆ.

**ಕೇರಂ ಡಬಲ್ಸ್** (15 ವರ್ಷ ಮೇಲ್ಪಟ್ಟ ಮಹಿಳೆಯರು) 1. ಲಕ್ಷ್ಮೀ ಮತ್ತು ಏಕತಾ ಮೂರ್ತಿ 2. ಡಾ. ಅಹಲ್ಯಾ ಚಿಂತಾಮಣಿ ಮತ್ತು ಸಹನಾ 3. ಮಮತಾ ಶಿವರಾಂ ಮತ್ತು ಮೇಘನಾ ಪೂಜಾರಿ

**ಚೆಸ್** (10 ವರ್ಷ ಮೇಲ್ಪಟ್ಟವರು) 1. ರಾಜಶೇಖರ್ 2. ಪಿ. ದಿನೇಶ್ 3. ಕೆ. ಮಂಜುನಾಥ

**ಛದ್ಮವೇಷ** (3–6 ವರ್ಷ) 1. ಜಿ. ಸ್ವರಾಜ್ 2. ಋತ್ವಿಕ್ ನೆಲ್ಲಿ 3. ಸಮುದ್ಯತ **ಸಮಾಧಾನಕರ ಬಹುಮಾನ** : ಲಕ್ಷ್ಯ ನಾಗರಾಜ ಮತ್ತು ರಿಷಿ ಜೆ

**ಛದ್ಮವೇಷ** (6–10 ವರ್ಷ) 1. ಪ್ರೇರಣಾ ಪಿ. ರಾವ್ 2. ಅನನ್ಯ ನಾಗರಾಜ 3. ಭೂಮಿಕಾ ಎಂ.ಎಸ್., **ಸಮಾಧಾನಕರ ಬಹುಮಾನ** : ಸುಹಿತ್ ವಸಂತ್ ಮತ್ತು ಪ್ರಿಯಾಂಕ

**ರಂಗೋಲಿ** (15 ವರ್ಷ ಮೇಲ್ಪಟ್ಟವರು) 1. ಮೈಥಿಲಿ ಅತ್ತಾವರ 2. ಜಮುನಾ ಸಿ. ಮಠದ 3. ಸ್ವರ್ಣಲತಾ ಗೋವಿಂದರಾಜ. **ಪ್ರೋತ್ಸಾಹಕರ ಬಹುಮಾನ** : ಅನಿಲ್ ಕುಲಕರ್ಣಿ

**ಆಶು ಭಾಷಣ** (18 ವರ್ಷ ಮೇಲ್ಪಟ್ಟವರು) 1. ಸ್ವರ್ಣಲತಾ ಗೋವಿಂದರಾಜ 2. ನರಸಿಂಹ ಮೂರ್ತಿ 3. ಡಾ. ಅಹಲ್ಯಾ ಚಿಂತಾಮಣಿ

**ಭಕ್ತಿಗೀತೆ** (10–18 ವರ್ಷ) 1. ಪಲ್ಲವಿ 2. ಸರಯೂ ಗಿರೀಶ್ ಮತ್ತು ತ್ರಿವಿಕ್ರಮ್ 3.ಅನಿರುದ್ಧ ಕುಲಕರ್ಣಿ

**ಭಾವಗೀತೆ** (10–18 ವರ್ಷ) 1. ಪಲ್ಲವಿ 2. ಸರಯೂ ಗಿರೀಶ್ 3. ಭೂಮಿಕಾ ಎಂ.ಎಸ್.

**ಭಕ್ತಿಗೀತೆ** (18 ವರ್ಷ ಮೇಲ್ಪಟ್ಟವರು) 1. ಮಂಜುನಾಥ ನಾಯಕ್ 2. ಕೋಮಲಾ ಸಿ.ಎಂ. 3. ಮಂಜುಳಾ

**ಭಾವಗೀತೆ** (18 ವರ್ಷ ಮೇಲ್ಪಟ್ಟವರು) 1. ಗೋವಿಂದರಾಜು ಎಸ್.ಎಸ್. 2. ಕೋಮಲಾ ಸಿ.ಎಂ. 3. ಶ್ಯಾಮಲಾ ಮನೋಹರ್

**ಕನ್ನಡ ಪದ್ಯಗಳು** (3–6 ವರ್ಷ) 1. ರಿಷಿ ಜೆ 2. ಲಕ್ಷ್ಯ ನಾಗರಾಜ 3. ಸಮುದ್ಯತ

**ಸ್ಮರಣ ಶಕ್ತಿ ಪರೀಕ್ಷೆ** (7–10 ವರ್ಷ) 1. ಪೃಥ್ವಿ ಜೆ. 2. ತರುಣ್ ಪಿ. ಮತ್ತು ಭೂಮಿಕಾ ಎಂ.ಎಸ್ 3. ರವಿಚಂದ್ರ ಪಾಟೀಲ್, ಆರ್. ಗೌತಮ್ ಮತ್ತು ಪ್ರೇರಣಾ ಪಿ. ರಾವ್

**ಸ್ಮರಣ ಶಕ್ತಿ ಪರೀಕ್ಷೆ** (10–14 ವರ್ಷ) 1. ಅನಿರುದ್ಧ ಕುಲಕರ್ಣಿ 2. ಭವ್ಯಶ್ರೀ, ಶ್ವೇತಾ ಶ್ರೀನಿವಾಸ ಮತ್ತು ಸಿಂಚನಾ ಮೂರ್ತಿ 3. ಬಿ.ಎನ್. ದೀಪಾಂಕರ, ಆರ್ತಿಕ್ ಕಾಮಶೆಟ್ಟಿ ಮತ್ತು ಕಾವ್ಯಶ್ರೀ

**ಚಿತ್ರ ಬರೆಯುವ ಸ್ಪರ್ಧೆ** (3–5ವರ್ಷ) 1. ರಿತ್ವಿಕ್ ನೆಲ್ಲಿ 2. ವಿಷ್ಣು ವಿ. 3.ಆರತಿ ಬಿ.

**ಚಿತ್ರ ಬರೆಯುವ ಸ್ಪರ್ಧೆ** (6–9ವರ್ಷ) 1. ಅದಿತಿ ಕುಲಕರ್ಣಿ 2. ಸುಹಿತ್ ವಿ. 3. ಜಿ. ಸಿಂಚನಾರಾಜ್

**50 ಮೀಟರ್ ಓಟ** (3–5 ವರ್ಷ ಹುಡುಗರು) 1. ಶ್ರೇಯಸ್ 2. ಸೃಜನ್ 3. ಮಯೂರ ಪಿ.ಎಸ್.

**50 ಮೀಟರ್ ಓಟ** (6–8 ವರ್ಷ ಹುಡುಗರು) 1. ತರುಣ್ 2. ಧನುಷ್ 3. ರಾಹುಲ್ ವಿ.

**50 ಮೀಟರ್ ಓಟ** (6–8 ವರ್ಷ ಹುಡುಗಿಯರು) 1. ಅಂಬಿಕಾ 2. ಪ್ರೇರಣಾ ಪಿ. ರಾವ್ 3. ಕೆ.ಆರ್. ಅನನ್ಯ

**100 ಮೀಟರ್ ಓಟ** (9–11 ವರ್ಷ ಹುಡುಗರು) 1.ಜಸ್ವಂತ್ ಕುಮಾರ್ 2. ಅಂಬಿಕೇಶ್ ಪಾಟೀಲ್ 3. ಆರ್ತಿಕ್ ಕಾಮ್‌ಶೆಟ್ಟಿ

**100 ಮೀಟರ್ ಓಟ** (9–11 ವರ್ಷ ಹುಡುಗಿಯರು) 1. ಅರ್ಚನಾ ಲಕ್ಷ್ಮಿ ಕೆ. 2. ಯಶಸ್ವಿನಿ 3. ಚಾಂದಿನಿ ಬಿ.ಎಸ್.

**100 ಮೀಟರ್ ಓಟ** (12–15 ವರ್ಷ ಹುಡುಗರು) 1. ಮನೀಶ್ ಪೂಜಾರಿ 2. ಬಿ.ಎನ್. ದೀಪಾಂಕರ್ 3. ನವೀನ್ ಕುಮಾರ್

**100 ಮೀಟರ್ ಓಟ** (12–15 ವರ್ಷ ಹುಡುಗಿಯರು) 1. ಸಿ. ಉಷಾ 2. ಎಚ್. ಎನ್. ನಿಖಿತಾ 3. ಹರ್ಷಿತಾ

**200 ಮೀಟರ್ ಓಟ** (15–20 ವರ್ಷ ಹುಡುಗರು) 1. ಸಂತೋಷ್ ಜಯಕುಮಾರ್ 2. ಸ್ವರೂಪ್ ಎಸ್ 3. ಸಂದೀಪ್ ಎಸ್

**200 ಮೀಟರ್ ಓಟ** (15–20 ವರ್ಷ ಹುಡುಗಿಯರು) 1. ಸುಪ್ರಿತಾ 2. ಮೇಘನಾ ಪೂಜಾರಿ 3. ಗೀತಾಂಜಲಿ

**ಶಾಟ್ ಪುಟ್** (21–39 ವರ್ಷ ಪುರುಷರು) 1. ವೆಂಕಟೇಶ್ 2. ಪುರುಷೋತ್ತಮ 3. ಶ್ರೀನಾಥ್ ಎನ್.ಆರ್.

**ಶಾಟ್ ಪುಟ್** (21–35 ವರ್ಷ ಮಹಿಳೆಯರು) 1. ವಿದ್ಯಾ ಕೋಳ್ಳೂರು 2. ರಾಜೇಶ್ವರಿ 3. ಶಕುಂತಲಾ ನಾಯಕ್

**ಶಾಟ್ ಪುಟ್** (40 ವರ್ಷಕ್ಕಿಂತ ಮೇಲ್ಪಟ್ಟ ಪುರುಷರು) 1. ಕೆ.ಎಸ್. ದೇವೇಂದ್ರಪ್ಪ 2. ಜಿ.ಬಿ. ಹೆಗಡೆ 3. ಗಣೇಶ್ ಕೆ.ಟಿ

**ಶಾಟ್ ಪುಟ್** (36 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) 1. ಜಯಲಕ್ಷ್ಮಿ 2. ಸರೋಜಾ ಕುಮಾರಿ 3. ಎಸ್.ಸಿ. ಹೇಮಲತ

**ಮ್ಯೂಸಿಕಲ್ ಚೇರ್** (6–12 ವರ್ಷ) 1. ಯಶಸ್ವಿನಿ ಗೌಡ 2. ಮಧುಶ್ರೀ 3. ಸಹನಾ

**ಮ್ಯೂಸಿಕಲ್ ಚೇರ್** (21 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) 1. ಪ್ರೇಮಾ ಗೌಡ 2. ಶಿಲ್ಪಶ್ರೀ 3. ಜಯಲಕ್ಷ್ಮಿ ರಾಜ್‌ಕುಮಾರ್

**100 ಮೀಟರ್ ಓಟ** (31 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) 1. ಜಯಲಕ್ಷ್ಮಿ ರಾಜ್‌ಕುಮಾರ್ 2. ಭಾರತಿ ನಿಂಗಪ್ಪ 3. ಶಾಂತಾ ಆರ್. ಶೆಟ್ಟಿ

**200 ಮೀಟರ್ ಓಟ** (21–35 ವರ್ಷ ಪುರುಷರು) 1. ನಾಗರಾಜ (ಸಿ.ಐ.ಎಸ್.ಎಫ್) 2. ಸುರೇಂದ್ರ ಎಂ. 3. ಗಜಾನನ ಶರ್ಮಾ

**100 ಮೀಟರ್ ಓಟ** (21–31 ವರ್ಷ ಮಹಿಳೆಯರು) 1. ಆರ್. ಪ್ರೀತಿ ಶೆಟ್ಟಿ 2. ಹೇಮಲತಾ ಎನ್ 3. ರಾಜೇಶ್ವರಿ

**ಬಕೆಟ್‌ಗೆ ಚೆಂಡು ಹಾಕುವ ಸ್ಪರ್ಧೆ** (21 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) 1. ಭಾಗ್ಯಲಕ್ಷ್ಮಿ 2. ಸುಜಾತ ಮೂರ್ತಿ 3. ಸತ್ಯ ಶೆಟ್ಟಿ

**ಬಕೆಟ್‌ಗೆ ಚೆಂಡು ಹಾಕುವ ಸ್ಪರ್ಧೆ** (21 ವರ್ಷಕ್ಕಿಂತ ಮೇಲ್ಪಟ್ಟ ಪುರುಷರು) 1. ಚಂದ್ರಪ್ಪ 2. ಕೆ.ಆರ್. ರಾಮಮೂರ್ತಿ 3. ಕೆ. ಮಂಜುನಾಥ

**200 ಮೀಟರ್ ಓಟ** (36 ವರ್ಷಕ್ಕಿಂತ ಮೇಲ್ಪಟ್ಟ ಪುರುಷರು) 1. ಕೆ.ಎಸ್. ಪಾಪೇಗೌಡ 2. ಬಿ. ಚಂದ್ರಪ್ಪ 3. ಎಸ್. ಗಿರೀಶ್

**ನಿಂಬೆ ಮತ್ತು ಚಮಚ** (31–40 ವರ್ಷ ಮಹಿಳೆಯರು) 1. ಮೀನಾ ವಸಂತ್ 2. ಸ್ವರ್ಣಲತಾ ಗೋವಿಂದರಾಜ್ 3. ವಿದ್ಯಾ ಕೋಳ್ಳೂರು

**ನಿಂಬೆ ಮತ್ತು ಚಮಚ** (40 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) 1. ಶಾಲನ್ ಮುರಗೋಡ 2. ಶಾಂತಾ ಆರ್. ಶೆಟ್ಟಿ 3. ಸರೋಜಾ ಮಾಧವ

**ನಿಂಬೆ ಮತ್ತು ಚಮಚ** (21–30 ವರ್ಷ ಮಹಿಳೆಯರು) 1. ಶೋಭಾ ನಾಗರಾಜ 2. ಶೋಭಾ ಗೌಡ 3. ಜಿ.ಬಿ. ಶೋಭಾ

**ಸೂಜಿಗೆ ದಾರ ಹಾಕುವುದು** (ದಂಪತಿಗಳಿಗೆ) 1. ಎಚ್.ಜಿ. ಶಿವರಾಂ ಮತ್ತು ಮಮತಾ 2. ರಾಜ್‌ಕುಮಾರ್ ಮತ್ತು ಜಯಲಕ್ಷ್ಮಿ 3. ಗೋವಿಂದರಾಜ್ ಮತ್ತು ಸ್ವರ್ಣಲತಾ

**200 ಮೀಟರ್ ವೇಗ ನಡಿಗೆ** (45ವರ್ಷಕ್ಕಿಂತ ಮೇಲ್ಪಟ್ಟ ಪುರುಷರು) 1. ಬಿ. ನಾಗರಾಜ 2. ಬಿ. ಚಂದ್ರಪ್ಪ 3. ಅಶ್ವತ್ ಕೆ.

**200 ಮೀಟರ್ ವೇಗ ನಡಿಗೆ** (45 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) 1. ಸರೋಜಾ ಕುಮಾರಿ 2. ಶಾಲನ್ ಮುರಗೋಡ 3. ಶಾಂತಾ ಆರ್. ಶೆಟ್ಟಿ

**ಕಬ್ಬಡ್ಡಿ** 1. ಬೆಳ್ಳಿಯಪ್ಪಾಸ್ ಗ್ರೂಪ್ 2. ದೆಹಲಿ ಪೋಲೀಸ್ ಕನ್ನಡಿಗಾಸ್ ವೆಲ್‌ಫೇರ್ ಅಸೋಸಿಯೇಶನ್

**ವಾಲಿಬಾಲ್** : 1. ಎವರ್ ಗ್ರೀನ್ ಕ್ಲಬ್ 2. ಬೆಳ್ಳಿಯಪ್ಪಾಸ್ ಗ್ರೂಪ್

**ತ್ರೋಬಾಲ್** : 1. ತ್ರೋಬಾಲ್ ಸೂಪರ್ ನೈನ್ 2. ದೆಹಲಿ ಪೋಲೀಸ್ ಕನ್ನಡಿಗಾಸ್ ವೆಲ್‌ಫೇರ್ ಅಸೋಸಿಯೇಶನ್.

ನಗರ ಜೀವನದ ಯಾಂತ್ರಿಕ ಬದುಕಿನಲ್ಲಿ ಸಾಂಸ್ಕೃತಿಕ ಮನರಂಜನೆ, ಸಾಹಿತ್ಯಿಕ ಚಿಂತನೆ, ಅಲ್ಲದೆ ಆಟೋಟಗಳು, ಸ್ಪರ್ಧೆಗಳು ದೇಹ ಹಾಗೂ ಮನಸ್ಸಿಗೆ ಟಾನಿಕ್‌ನಂತೆ ಅತ್ಯವಶ್ಯಕ. ಇಲ್ಲಿ ಪ್ರತಿಯೊಬ್ಬರ ಭಾಗವಹಿಸುವಿಕೆ ಮುಖ್ಯವೇ ಹೊರತು ಅದರ ಫಲಿತಾಂಶವಲ್ಲ; ಕ್ರೀಡೆ ಮನೋರಂಜನೆಯೇ ಹೊರತು ಕದನವಲ್ಲ. ದೆಹಲಿ ಕನ್ನಡಿಗರೆಲ್ಲರೂ ಒಂದೆಡೆ ಕಲೆತು ಸ್ಪರ್ಧೆಗಳಲ್ಲಿ ಭಾಗವಹಿಸುವ ಸಲುವಾಗಿ ಪ್ರತೀ ವರ್ಷದಂತೆ ಈ ಬಾರಿ ಮಾರ್ಚ್26,27ರಂದು ವಿವಿಧ ಸ್ಪರ್ಧೆಗಳನ್ನು ಹೆಂಗಸರು, ಮಕ್ಕಳು ಹಾಗೂ ಗಂಡಸರಿಗಾಗಿ ಏರ್ಪಡಿಸಲಾಗಿತ್ತು. ವಯಸ್ಸಿನ ಬೇಧ ಬಾವವಿಲ್ಲದೆ ದೆಹಲಿ ಕನ್ನಡಿಗರು ಅತ್ಯುತ್ಸಾಹದಿಂದ ಭಾಗವಹಿಸಿ ಆನಂದಿಸಿದರು. ಬಹುಮಾನ ವಿಜೇತರಿಗಾಗಿ ಮೇ 1ರಂದು ವಾರ್ಷಿಕೋತ್ಸವ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ಅಂಬಿಕೇಶ್ ಮೆಮೋರಿಯಲ್ ಕ್ರಿಕೆಟ್ ಪಂದ್ಯಾವಳಿ ಹಾಗೂ ಎಲ್ಲಾ ಸ್ಪರ್ಧೆಗಳನ್ನು ಯಶಸ್ವಿಯಾಗಿ ಆಯೋಜಿಸಿದ ಕ್ರೀಡಾ ಉಪಸಮಿತಿಯ ಅಧ್ಯಕ್ಷರಾದ ಹರಿಶ್ಚಂದ್ರ ಬಂಟ್ವಾಳ್, ಸಂಚಾಲಕ ಎನ್.ಆರ್.ಶ್ರೀನಾಥ್, ಪಿ.ಎನ್.ಅಪ್ಪಯ್ಯ, ಸರ್ವದೇವ, ಶಿವರಾಂ ರೈ ಹಾಗೂ ಕ್ರೀಡಾ ಸಮಿತಿಯ ಎಲ್ಲ ಸದಸ್ಯರಿಗೂ ಅಭಿನಂದನೆಗಳು.





ಛದ್ಮವೇಷ ಸ್ಪರ್ಧೆಯಲ್ಲಿ ಭಾಗವಹಿಸಿದ ಪುಟಾಣಿಗಳು



ವಾಲಿಬಾಲ್ ವಿನ್ನರ್ ಎವರ್ ಗ್ರೀನ್ ತಂಡ ಹಾಗೂ ರನ್ನರ್ಸ್ ಬೆಳ್ಳಿಯಪ್ಪಾಸ್ ಗ್ರೂಪ್



ತ್ರೋಬಾಲ್ ವಿನ್ನರ್ಸ್–ತ್ರೋಬಾಲ್ ಸೂಪರ್ ನೈನ್ ತಂಡ




ತ್ರೋಬಾಲ್ ರನ್ನರ್ಸ್–ದೆಹಲಿ ಪೋಲಿಸ್ ಕನ್ನಡಿಗಾಸ್ ವೆಲ್‌ಫೇರ್ ಅಸೋಸಿಯೇಶನ್ ತಂಡ



ಬಕೆಟ್‌ಗೆ ಚೆಂಡು ಹಾಕುತ್ತಿರುವ ಸ್ಪರ್ಧಿಗಳು

# ದೆಹಲಿ ಕನ್ನಡಿಗರ ಸಾಹಿತ್ಯ ಸಂಜೆ

'ಸಾಹಿತ್ಯ ಸಂಜೆ' ಎಂದರೆ ಸಾಕು ದೆಹಲಿಯ ಸಾಹಿತ್ಯಾಸಕ್ತರಿಗೆಲ್ಲ ಎಲ್ಲಿಲ್ಲದ ಹುರುಪು, ಉತ್ಸಾಹ. ಅದು ದೆಹಲಿ ಕನ್ನಡಿಗರ ಹರಟೆ ಕಟ್ಟೆ, ಚಾವಡಿ ಎಲ್ಲವೂ. ಮಾರ್ಚ್ 6, ಭಾನುವಾರ, ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ ಸಾಹಿತ್ಯ ಸಂಜೆಯ ಆರಂಭದಲ್ಲಿ ಇತ್ತೀಚೆಗೆ ನಿಧನರಾದ ಹಿರಿಯ ದೆಹಲಿ ಕನ್ನಡಿಗ, ಟಿ.ಡಿ. ಸಾಲಿಯಾನ್ ಅವರಿಗೆ ಎರಡು ನಿಮಿಷದ ಮೌನಾಚರಣೆಯೊಂದಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಹಲವಾರು ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಸಾಲಿಯಾನ್ ದೆಹಲಿ ಕನ್ನಡಿಗರೆಲ್ಲರಿಗೂ ಮಾರ್ಗದರ್ಶಕರಾಗಿದ್ದರು.

ಸಾಹಿತ್ಯ ಸಂಜೆಯ ಮೊದಲಿಗೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ, ಡಾ.ವೆಂಕಟಾಚಲ ಹೆಗಡೆಯವರು ತಾವು ಇತ್ತೀಚೆಗೆ ಓದಿದ ಎರಡು ಪುಸ್ತಕಗಳ ಕುರಿತು ಮಾತನಾಡಿದರು. ವಿವೇಕ್ ಶಾನಬಾಗ್ ಅವರ 'ಒಂದು ಬದಿಯ ಕಡಲು' ಕೃತಿ ಕುರಿತು ವಿಶ್ಲೇಷಣೆ ಮಾಡಿದರು. ಕಡಲ ಬದಿಯ ಕುಮಟಾ, ಹೊನ್ನಾವರ ಹೀಗೆ ಪ್ರಾದೇಶಿಕ ನೆಲೆಗಟ್ಟಿನಲ್ಲಿ ಎರಡು ತಲೆಮಾರಿನ ಜನಜೀವನ, ಬಡತನ, ಭಾಷೆ, ಸಂಸ್ಕೃತಿ ಇತ್ಯಾದಿ ಕುರಿತು ವಿವೇಕ್ ಶಾನಬಾಗ್ ಮನ ಮುಟ್ಟುವಂತೆ ಚಿತ್ರಿಸಿದ್ದಾರೆ. ಇದು ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿ ನೆನಪಿಸುತ್ತದೆ. ಇಲ್ಲಿ ಎಲ್ಲವೂ ಮುಖ್ಯ ಪಾತ್ರಗಳೇ. ಕಥನ ತಂತ್ರವೂ ಆತ್ಮಕಥನ ಶೈಲಿಯೇನೋ ಎಂದು ಭಾಸವಾಗುತ್ತದೆ. ಇನ್ನೊಂದು ಪುಸ್ತಕ ಟರ್ಕಿಶ್ ಲೇಖಕ ಓರಾನ್ ಪಮುಕ್ ಬರೆದ 'ನನ್ನ ಹೆಸರು ಕೆಂಪು' (My name is Red) ಕೃತಿಯಲ್ಲಿ 14–15ನೇ ಶತಮಾನದಲ್ಲಿ ಯುರೋಪ್ ಮತ್ತು ಏಷ್ಯಾ ನಡುವಿನ ಆಯಕಟ್ಟಿನ ಸ್ಥಾನದಲ್ಲಿದ್ದ ಟರ್ಕಿ ಹೇಗೆ ಜಾಗತಿಕ ಚರಿತ್ರೆಯಲ್ಲಿ ಬೆಳಕಿಗೆ ಬಂದಿತು ಎಂಬ ಕುರಿತಾಗಿದೆ. ಅಲ್ಲಿನ ಚಾರಿತ್ರಿಕ ಕತೆಗಳೆಲ್ಲ ಮೊಗಲರ ಕಾಲದ ಕುಸುರಿ ಚಿತ್ರಕಲೆ ಮತ್ತು ಗದ್ಯ ಕಾವ್ಯ ಕುರಿತಾಗಿದೆ.

'ಪಂಪಭಾರತ' ಅಥವಾ 'ವಿಕ್ರಮಾರ್ಜುನ ವಿಜಯ' ಕಾವ್ಯದ ಒಂದು ಪದ್ಯದ ಸ್ವಾರಸ್ಯವನ್ನು ಡಾ. ಪುರುಷೋತ್ತಮ ಬಿಳಿಮಲೆಯವರು ವಿವರಿಸಿದರು. 'ಪಂಪನು ಮಹಾಭಾರತದ ಪಾತ್ರಗಳು ಮೂಲಕ ಮಾನವೀಯ ಸಂಘರ್ಷಗಳನ್ನು ಪರಿಶೀಲಿಸುವ ಕೆಲಸವನ್ನು ಮಾಡುತ್ತಾನೆ, ಹಾಗೆ ಮಾಡುವುದರ ಮೂಲಕ ಆತ ಕುಮಾರವ್ಯಾಸನಿಗಿಂತ ಭಿನ್ನವಾಗುತ್ತಾನೆ' ಎಂದು ವಿವರಿಸಿದ ಬಿಳಿಮಲೆಯವರು, ಪಂಪನು ತನ್ನ ಕಾವ್ಯದಲ್ಲಿ 'ಅತ್ಯುನ್ನತಿಯೊಳ ಅಮರ ಸಿಂಧೂದ್ಭವಂ' ಎಂದು ಭೀಷ್ಮನನ್ನು ಕೊಂಡಾಡುತ್ತಾನೆ ಮತ್ತು ಕಾವ್ಯದುದ್ದಕ್ಕೂ ಭೀಷ್ಮನಿಗೆ ಅಂಥ ಸ್ಥಾನವನ್ನು ಒದಗಿಸಿ ಕೊಡುತ್ತಾನೆ' ಎಂದರು. ಇದನ್ನು ಇನ್ನಷ್ಟು ವಿವರಿಸಿದ ಅವರು ಭೀಷ್ಮಾಚಾರ್ಯರಿಗೆ ಸೇನಾಧಿಪತಿ ಪಟ್ಟವನ್ನು ಕಟ್ಟುವ ಸಂದರ್ಭದಲ್ಲಿ ಅವರು ಘನತೆಯಿಂದ ನಡೆದುಕೊಂಡದ್ದನ್ನು ಕೇಳುಗರ ಗಮನಕ್ಕೆ ತಂದರು. ಕರ್ಣನು ಭೀಷ್ಮರನ್ನು ಹೀಗಳೆದು ಮಾತಾಡಿದಾಗ ಅದರಿಂದ ವಿಚಲಿತರಾಗದ ಭೀಷ್ಮರು ಕರ್ಣನನ್ನು ಕುರಿತು–'ಕಲಿತನದ ಉರ್ಕು, ಜವ್ವನದ ಸೊರ್ಕು, ನಿಜೇಶನ ನೆಚ್ಚು, ತೋಳ್ವಲದ ಪೊಡರ್ಪು ಕರ್ಣಾ ನಿನಗುಂಟು, ಅನಿತೇನಗುಂಟೆ, ಭಾರತ ಕಲಹಂ, ಇದಿರ್ಚುವಂ ಹರಿ ಗನಪ್ಪೊಡೆಮೊಕ್ಕಳಮೇಕೆ....ಸೂಳ್ವಡೆಯಲಪ್ಪುದು ಕಾಣಾ ಮಹಾಜಿರಂಗದೊಳ್' ಎಂದು ಮಹಾದಾರ್ಶನಿಕನ ಹಾಗೆ ಮಾತಾಡುತ್ತಾರೆ. ಇದು ಭೀಷ್ಮನ ಉದಾರ ವ್ಯಕ್ತಿತ್ವವನ್ನು ಪ್ರತೀತಗೊಳಿಸುತ್ತದೆ' ಎಂದು ಬಿಳಿಮಲೆಯವರು, ಹಳಗನ್ನಡ ಕಾವ್ಯಭಾಗದ ಸೊಗಸನ್ನು ರಸವತ್ತಾಗಿ ವರ್ಣಿಸಿದರು.

ಆನಂತರ ಶ್ರೀನಿವಾಸ್ ಅವರು ತಾವು ತಮಿಳಿನಿಂದ ಕನ್ನಡಕ್ಕೆ ಅನುವಾದಿಸಿದ 'ತಿರುಕ್ಕುರಳ್'ನ ಕೆಲವು ವಚನಗಳನ್ನು ವಾಚಿಸಿದರು. ತಿರುಕ್ಕುರಳ್ ತಮಿಳರ ಗೌರವ ಗ್ರಂಥ. ಇದರ ಲೇಖಕ ವರಕವಿ–ತಿರುವಳ್ಳುವರ್. ಶಿಲಪ್ಪದಿಕಾರಂ ಮತ್ತು ಮಣಿಮೇಖಲೈ ಗ್ರಂಥಗಳು ಎರಡನೇ ಶತಮಾನದ ಕಾವ್ಯಗಳೆಂದು ಐತಿಹಾಸಿಕರು ಒಪ್ಪಿರುವುದರಿಂದ ತಿರುಕ್ಕುರಳ್ ಎರಡನೇ ಶತಮಾನಕ್ಕಿಂತಲೂ ಹಿಂದೆ ರಚಿಸಿರಬಹುದೆಂಬ ಊಹೆ ಇದೆ ಎಂದು ವಿವರಿಸಿದರು. ತಿರುಕ್ಕುರಳ್– ನೀತಿಬೋಧನೆಯ ದ್ವಿಪದಿಗಳು. ಕನ್ನಡದಲ್ಲಿ ಸರ್ವಜ್ಞನ ದ್ವಿಪದಿಗಳಿಗೆ ಮತ್ತು ಮಂಕುತಿಮ್ಮನ ಕಗ್ಗದ ನೀತಿಬೋಧನೆಗಳು ಮತ್ತು ತಿರುಕ್ಕುರಳ್ ಶೈಲಿಯಲ್ಲಿ ಒಂದೇ ಮಾದರಿಯಾಗಿವೆ. ತಿರುಕ್ಕುರಳ್‌ಗಳಲ್ಲಿ ಒಟ್ಟು 1330 ಕುರುಳು (ದ್ವಿಪದಿ)ಗಳಿವೆ. ಇವುಗಳನ್ನು ಓದಿದಾಗ ಕನ್ನಡ ಮತ್ತು ತಮಿಳು ಭಾಷೆಗಳಲ್ಲಿನ ಶಬ್ದ ಮತ್ತು ಅಕ್ಷರ ಸಾಮ್ಯವನ್ನು ಕಾಣಬಹುದು. ಹಿಂದೆ ಮೂಲ ದ್ರಾವಿಡ ಭಾಷೆಗಳು ಒಂದೇ ಆಗಿದ್ದಿರಬಹುದು ಕಾಲಾಂತರದಲ್ಲಿ ಅವು ಬೇರ್ಪಟ್ಟು ಸ್ವತಂತ್ರವಾದ ಭಾಷೆಯಾಗಿ ಬೆಳೆದಿರುವುದನ್ನು ಕಾಣಬಹುದು ಎಂಬ ಅಂಶಗಳನ್ನು ಶ್ರೀನಿವಾಸ್ ವಿವರಿಸಿದರು.

ಕವನವಾಚನದಲ್ಲಿ ಎ.ವಿ. ಚಿತ್ತರಂಜನದಾಸ್ ಅವರು ಉತ್ತರಭಾರತದಲ್ಲಿ ಸಾಮಾನ್ಯವಾಗಿ ಎಲ್ಲಾ ದೇವರ ಭಜನೆ ಹಾಡುಗಳು ಜನಪ್ರಿಯ ಸಿನೆಮಾ ಹಾಡಿನ ಧಾಟಿಯಲ್ಲೇ ಹಾಡುವುದು ರೂಢಿ. ಅದರಲ್ಲೇ ಅವರಿಗಿಷ್ಟವಾದ ಕೃಷ್ಣನ ಭೇಟಿಗೆ ಸುದಾಮ ಬಂದಾಗಿನ ಭಜನೆಯೊಂದನ್ನು ಭಾವಪರವಶವಾಗಿ ಹಾಡಿದರು. ಡಾ.ಅಹಲ್ಯಾ ಚಿಂತಾಮಣಿ ಹಾಗೂ ಸವಿತಾ ಇನಾಂದಾರ್ ಅವರು ತಮ್ಮ ಸ್ವರಚಿತ ಕವನಗಳನ್ನು ಓದಿದರು,

ಕೊನೆಯಲ್ಲಿ ಹಿರಿಯ ಲೇಖಕ ಕೃಷ್ಣಮೂರ್ತಿ ಕಲುಮಂಗಿಯವರು ತಮ್ಮ ಅನುವಾದಿತ ತೆಲುಗು ಕತೆ 'ಮಾಡೆಲ್' ಅನ್ನು ಓದಿದರು. ಮೂಲ ಲೇಖಕ– ವಕ್ಕುಂತಂ ಸೂರ್ಯನಾರಾಯಣರಾವ್ ಅವರ ಈ ಕತೆಯ ಅನುವಾದಕ್ಕೆ ಕಲುಮಂಗಿಯವರಿಗೆ ಶರ್ವಾಣಿ ಮೆಮೋರಿಯಲ್ 'ಬೆನಕ' ಅನುವಾದಿತ ಸಾಹಿತ್ಯ ಸ್ಪರ್ಧೆ–2010 (ಪ್ರಿಯಾಂಕ ಪತ್ರಿಕೆ) ಯಲ್ಲಿ ಪ್ರಥಮ ಬಹುಮಾನ ತಂದು ಕೊಟ್ಟಿದೆ. ಕಥಾಲೋಕದಲ್ಲಿ ಕಾಲದ ಪರಿವೆಯೇ ಮರೆತುಹೋದಂತಿತ್ತು. ಈ ಮಧ್ಯೆ ಊರಿನಿಂದ ಮಗನ ಮನೆಗೆ ಬಂದ ಮತ್ತೊಬ್ಬ ಹಿರಿಯ ಲೇಖಕ ಮತ್ತು ಅನುವಾದಕ ಶಂಸ ಐತಾಳ ಅವರು ಕೂಡ ಸಾಹಿತ್ಯ ಸಂಜೆಯಲ್ಲಿ ಭಾಗವಹಿಸಿದ್ದರು. ಅವರಿಗೆ ಸಂಘದ ಉಪಾಧ್ಯಕ್ಷ ಬಿ.ಕೆ ಬಸವರಾಜು ಅವರು ಹೂಗುಚ್ಛ ನೀಡಿ ಗೌರವಿಸಿದರು. ವಂದನಾರ್ಪಣೆಯೊಂದಿಗೆ ಸುಂದರ ಸಂಜೆ ಇರುಳಿಗೆ ಜಾರುತ್ತಿತ್ತು.

## ಓದುಗರ ಪತ್ರ

I have been as ever, eagerly waiting for the next issue of 'Abhimata', as it has been very interestingly bringing out 'Expressions' of talented ones of the caliber of Dr.Bilimale, Dr.Shivaprakash, Smt Usha Bharatadri, Shri Chennu S Mathad, Late Shri Nagaraj, Dr.Hegde, Shri Bellare and scores of others like Shri S.K.Bhat.

Many a writer's expressions in the form of poems have been indeed 'touching' and heartwarming like the one written by Smt.Jamuna Mathad in memories of her dear father when she exults and pens down one to how her dear father "sees" 'his mother' in his daughter (Jamuna) etc.etc.in December, 2010 edition. All daughters are indeed assets.

Thanks to the editorial staff of Abhimata which has been instrumental in encouraging many such writers.

B.S.Kallur

2011–13ನೇ ಸಾಲಿನ ದೆಹಲಿ ಕರ್ನಾಟಕ ಸಂಘದ ಆಡಳಿತ ಮಂಡಳಿಯ ಆಯ್ಕೆಯ ಶಿಸ್ತುಬದ್ಧ ಚುನಾವಣಾ ದಾಖಲೆಯನ್ನು ಸಾದರಪಡಿಸಿದ ಫೆಬ್ರವರಿಯ ಅಭಿಮತ ಪುಟ ತೆರೆದಾಗಲೇ ರಾಜಧಾನಿಯಲ್ಲಿ ಕರ್ನಾಟಕದ ಕಹಳೆ ಮೊಳಗಿಸಿದ ಸಿಹಿ ಸುದ್ದಿ ನೀಡಿ ಅಚ್ಚರಿಯುಂಟು ಮಾಡಿದುದು ಹೌದು. ಕನ್ನಡಿಗರೆಲ್ಲರ ಕಣ್ಮಣಿಯಂತೆ ಬೆಳೆಯುತ್ತಿರುವ ಚಿನ್ನದ ನಾಡೆಂಬ ಕನ್ನಾಡಿನ ಸೊಬಗು ಸೌಂದರ್ಯ ಚೆಲುವುಗಳಿಗೆ ಒಲವು ವಯ್ಯಾರಗಳು ಒತ್ತು ನೀಡಿ ಬೆಳೆಸುತ್ತಿರುವ ದೆಹಲಿ ಕನ್ನಡಪರ ಸಂಘ ಪರಿವಾರದ ಹಿಂಬಾಲಕ ಬೆಂಬಾಲಕರೆಲ್ಲರ ಕಾರ್ಯಕೌಶಲ್ಯತೆ ಹೆಮ್ಮೆ ಪಡುವಂತಹದು.

ಆಡಳಿತ ಮಂಡಳಿಯ ನವ ಸದಸ್ಯರುಗಳಿಗೆಲ್ಲರಿಗೂ ಪ್ರೀತಿಯ ಶುಭ ಕಾಮನೆಗಳು.

ಕೀರಿಕ್ಕಾಡು ವನಮಾಲ ಕೇಶವ ಭಟ್ಟ
ಕಾಸರಗೋಡು

# ವಿಶ್ವಮಾನವ ಬಸವಣ್ಣ–ವಿಚಾರ ಸಂಕಿರಣ



ಮಾರ್ಚ್ 27, 2011ರ ಭಾನುವಾರದಂದು, ಬಸವ ಇಂಟರ್ ನ್ಯಾಶನಲ್ ಸೆಂಟರ್, ನವದೆಹಲಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ ಇವರ ಸಹಯೋಗದೊಂದಿಗೆ "ವಿಶ್ವಮಾನವ ಬಸವಣ್ಣ" ವಿಚಾರ ಸಂಕಿರಣವನ್ನು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಸಾಣೆಹಳ್ಳಿ ಶಿವಕುಮಾರ್ ಕಲಾ ಸಂಘದ ಕಲಾವಿದರಾದ ಕು.ಜ್ಯೋತಿ ಹಾಗು ನಾಗರಾಜ ಅವರು ಸುಶ್ರಾವ್ಯವಾಗಿ ವಚನಗಳನ್ನು ಹಾಡುವುದರ ಮೂಲಕ ಕಾರ್ಯಕ್ರಮ ಶುಭಾರಂಭಗೊಂಡಿತು. ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿಯವರು ಕಾರ್ಯಕ್ರಮವನ್ನು ನಿರೂಪಿಸಿದರು. ಅರವಿಂದ ಜತ್ತಿ, ಅಧ್ಯಕ್ಷರು, ಬಸವ ಸಮಿತಿ ಬೆಂಗಳೂರು, ಬಿ.ಎನ್. ನಾಗೇಶ್, ಕರ್ನಾಟಕ ಸರ್ಕಾರದ ದೆಹಲಿಯ ಹೆಚ್ಚುವರಿ ವಿಶೇಷ ಪ್ರತಿನಿಧಿ, ಡಾ. ವೆಂಕಟಾಚಲ ಹೆಗಡೆ, ಅಧ್ಯಕ್ಷರು, ದೆಹಲಿ ಕರ್ನಾಟಕ ಸಂಘ ಹಾಗೂ ಪ್ರೊ. ಜೆ.ಎಸ್. ಪಾಟೀಲ್ ಮುಂತಾದ ಗಣ್ಯರು ಜ್ಯೋತಿ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಬಸವ ಇಂಟರ್ ನ್ಯಾಷನಲ್ ಸೆಂಟರ್‌ನ ಅಧ್ಯಕ್ಷ, ಅಮರನಾಥ ತಳವಾಡೆಯವರು ಕಾರ್ಯಕ್ರಮದ ಉದ್ದೇಶ ಹಾಗೂ ಮಹತ್ವದ ಬಗ್ಗೆ ಮಾತನಾಡಿದರು. ಕಾರ್ಯದರ್ಶಿ ವಿ.ವಿ. ಬಿರಾದಾರ ಅವರು ದೆಹಲಿಯಲ್ಲಿ ಬಸವ ಇಂಟರ್‌ನ್ಯಾಶನಲ್ ಸೆಂಟರ್‌ನ ಹುಟ್ಟು, ಬೆಳವಣಿಗೆ ಕುರಿತು ವಿವರ ನೀಡಿದರು.

ಬೈಕೆರೆ ನಾಗೇಶ್ ಅವರು ವಿಶ್ವಮಾನವ ಬಸವಣ್ಣನವರ ತತ್ವಗಳು ಅತ್ಯಂತ ಆದರ್ಶಮಯವಾಗಿದ್ದು, ವಿಶ್ವಕ್ಕೇ ಮಾದರಿ ಆಗಿವೆ. ತಾವು ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ ಇಷ್ಟೊಂದು ಉನ್ನತ ಸ್ಥಿತಿಗೆ ಬರಲು ಅವರ ವಚನದಲ್ಲಿರುವ ತತ್ವಗಳೇ ಕಾರಣ ಎಂದು ತಮ್ಮ ಕೃತಜ್ಞತೆಗಳನ್ನು ಸಲ್ಲಿಸಿದರು.

ಡಾ. ವೆಂಕಟಾಚಲ ಹೆಗಡೆಯವರು 12ನೇ ಶತಮಾನ ಸ್ಥಿತ್ಯಂತರ ಕಾಲ, ಅಥವಾ ರಾಜಕೀಯ ಬದಲಾವಣೆಯ ಸಂದರ್ಭ ಎಂದು ಹೇಳಬಹುದು. ಕಾಯಕವೇ ಕೈಲಾಸ, ದಯವೇ ಧರ್ಮದ ಮೂಲವಯ್ಯ, ಇಂತಹ ತತ್ವಗಳನ್ನು ಸುಂದರ, ಸುಲಭ ವಚನಗಳಲ್ಲಿ ಅದ್ಭುತ ರೀತಿಯಲ್ಲಿ ಸರಳ ಕನ್ನಡದಲ್ಲಿ ಪ್ರಸ್ತುತಪಡಿಸಿ ವಿಶ್ವಮಾನರೆನಿಸಿಕೊಂಡ ಬಸವಣ್ಣನವರಿಗೆ ಇಡೀ ವಿಶ್ವವೇ ತಲೆಬಾಗಬೇಕೆಂದು ಹೇಳಿದರು.

ಅರವಿಂದ ಜತ್ತಿಯವರು "ಲಂಡನ್‌ನ ಥೇಮ್ಸ್ ನದಿಯ ದಂಡೆಯ ಮೇಲೆ ಬಸವಣ್ಣನವರ ಪ್ರತಿಮೆ ಸ್ಥಾಪಿಸಲು ಯೋಚಿಸಿದಾಗ ಬಸವಣ್ಣನವರು ಧಾರ್ಮಿಕ ಪುರುಷ, ಅವರ ಪ್ರತಿಮೆ ಸ್ಥಾಪಿಸಬಾರದು ಎಂದು ಚರ್ಚೆ ನಡೆಯಿತು. ಆಗ ಬಸವಣ್ಣ 12ನೇ ಶತಮಾನದಷ್ಟು ಹಿಂದೆಯೇ ಆರ್ಥಿಕ, ಸಾಮಾಜಿಕ ಹಾಗೂ ವೈಚಾರಿಕ ಸಮಾನತೆಗಾಗಿ ಶ್ರಮಿಸಿದ ಮಹಾನ್ ಪುರುಷ. ಅವರು ಕೇವಲ ಧಾರ್ಮಿಕ ಪುರುಷನಲ್ಲ ಎಂದು ಪ್ರತಿಪಾದಿಸಿದವರು ಪಾಕಿಸ್ತಾನ ಹಾಗೂ ಬಾಂಗ್ಲಾ ದೇಶವಾಸಿಗಳು. ಹೀಗೆ ಬಸವಣ್ಣ ವಿಶ್ವಮಾನವ" ಎಂದರು. ಬಸವ ಇಂಟರ್‌ನ್ಯಾಶನಲ್ ಸೆಂಟರ್‌ನ ಉಪಾಧ್ಯಕ್ಷ ಚೆನ್ನು ಎಸ್. ಮಠದ ಅವರು ವಂದನಾರ್ಪಣೆ ಸಲ್ಲಿಸಿದರು.


ಪ್ರೊ. ಜೆ.ಎಸ್. ಪಾಟೀಲ್, ಉಪಕುಲಪತಿಗಳು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಇವರು "ಬಸವ ಧರ್ಮ–ಭಾರತೀಯ ಸಂವಿಧಾನ"ದ ಕುರಿತು ಮಾತನಾಡುತ್ತಾ ಜನಮಾನಸದಲ್ಲಿ ಸಮಾನತೆಯನ್ನು ಹುಟ್ಟು ಹಾಕದ ಹೊರತು ಸಂವಿಧಾನದಲ್ಲಿ ಕಾನೂನು ಮಾಡಲಾಗುವುದಿಲ್ಲ. ಎಲ್ಲಾ ದೇಶಗಳಿಗೂ, ಎಲ್ಲಾ ಕಾಲಕ್ಕೂ ಬಸವ ತತ್ವಗಳು ಸಾರ್ವತ್ರಿಕವಾಗಿವೆ ಎಂದು ವಿಸ್ತಾರವಾಗಿ ವಿಷಯ ಮಂಡಿಸಿದರು.

ಎನ್.ಜಿ. ಮಹಾದೇವಪ್ಪ ವಿಶ್ರಾಂತ ತತ್ವಶಾಸ್ತ್ರಜ್ಞ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರು "ಲಿಂಗಾಯತ ಸ್ವತಂತ್ರ ಧರ್ಮ" ಎಂಬ ವಿಷಯದ ಬಗ್ಗೆ ಮಾತನಾಡುತ್ತಾ ಸಂಸ್ಕೃತಿ ಹಾಗು ಧರ್ಮ ಬೇರೆ, ಸಿದ್ಧಾಂತ–ಆಚಾರ ಬೇರೆ. ಪದ್ಧತಿಯ ತಪ್ಪು ಆಚಾರ ವಿಚಾರ ಖಂಡಿಸುವ, ಸ್ವತಂತ್ರ ಧರ್ಮವೇ "ಲಿಂಗಾಯತ ಧರ್ಮ" ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಡಾ. ಎಚ್.ಎಸ್. ಶಿವಪ್ರಕಾಶ್, ಪ್ರಾಧ್ಯಾಪಕರು, ಜವಾಹರಲಾಲ್ ನೆಹರು ವಿಶ್ವವಿದ್ಯಾಲಯ, ನವದೆಹಲಿ ಇವರು "ಬಸವೇಶ್ವರರ ವಿಚಾರಗಳ ಅಳವಡಿಕೆ ಇಂದು" ಎಂಬ ವಿಷಯವಾಗಿ ಮಾತನಾಡುತ್ತಾ ಇತಿಹಾಸದ ಪ್ರಕಾರ ಸಿಂಧೂ ನದಿಯ ದಂಡೆಯ ಮೇಲೆ ವಾಸಿಸುವ ಜನವಸತಿಯ ಆಚರಣೆ, ಸನಾತನ ಧರ್ಮ, ವಿಕಸನಶೀಲ ಧರ್ಮವಾಗಿದೆ. 'ಕಾಯಕವೇ ಕೈಲಾಸ' ಮೂಲ ತತ್ವದೊಂದಿಗೆ, ಅಂತರಜಾತೀಯ ವಿವಾಹ, ಸಮಾನತೆ ಈಗ ಕೂಡಾ ಎಲ್ಲರೂ ಕಲಿಯುವಂತಹದ್ದಾಗಿದೆ ಎಂದು ಸಮಾರಂಭದಲ್ಲಿ ಪಾಲ್ಗೊಂಡಿದ್ದ ಕನ್ನಡೇತರರಿಗಾಗಿ ಹಿಂದಿಯಲ್ಲಿ ಮಾತನಾಡಿದರು.

ಮನೋಜಭಾರತಿ, ಅಧ್ಯಕ್ಷರು, ಬಸವ ಸಮಿತಿ, ಕರೋಲ್‌ಬಾಗ್, ಹೊಸದೆಹಲಿ, ಇವರು "ಬಸವ ಧರ್ಮ" ಎನ್ನುವ ವಿಷಯ ಮಾತನಾಡುತ್ತಾ ಉತ್ತರ ಪ್ರದೇಶದಲ್ಲಿ ವಾಸಿಸುವ ತಮ್ಮಂತಹ ಜಾಟವ (ಮೋಚಿ, ಚಮಗಾರ) ಜನಾಂಗ 4000 ಜನರು ಲಿಂಗದೀಕ್ಷೆ ಪಡೆದು ನಿಷ್ಠೆಯಿಂದ ಮಾಂಸಾಹಾರ ತ್ಯಜಿಸಿ, ಪ್ರತಿನಿತ್ಯ ಲಿಂಗಪೂಜೆ, ದಾಸೋಹಗಳನ್ನು ನಡೆಸುತ್ತಾ ಬಂದಿರುವ ಸಂಗತಿಯನ್ನು ತಿಳಿಸಿದರು. ಮನೋಜ ಭಾರತಿ ತಾವು ಕಲಿತ ವಚನಗಳನ್ನು ಹೇಳಿ ಸಭಿಕರನ್ನು ಚಕಿತಗೊಳಿಸಿದರು.

ಲೋಹಿತ ಡಿ. ನಾಯ್ಕರ್, ಚೇರ್‌ಮನ್ (ಸಿ.ಎ.ಸಿ.) ಮಿನಿಸ್ಟ್ರಿ ಆಫ್ ಲೇಬರ್ ಅಂಡ್ ಎಂಪ್ಲಾಯ್‌ಮೆಂಟ್, ಭಾರತ ಸರ್ಕಾರ, ಅವರು "ಬಸವ ಧರ್ಮ–ದ ಸೋಶಿಯಲ್ ಜಸ್ಟೀಸ್" ಎಂಬ ವಿಷಯ ಕುರಿತು ಮಾತನಾಡುತ್ತ 12ನೇ ಶತಮಾನದಲ್ಲಿ ಅತ್ಯಂತ ಕ್ಲಿಷ್ಟ ಸಾಮಾಜಿಕ ಸಂಕೋಲೆಗಳಿಂದಾವೃತವಾದ



ಸಮಾಜದಲ್ಲಿ ಕಾನೂನು, ಮಾನವೀಯ ಹಕ್ಕುಗಳನ್ನು 'ಇವನಾರವ ಇವನಾರವ ಎನ್ನದಿರಯ್ಯಾ, ಇವ ನಮ್ಮವ, ಇವ ನಮ್ಮವ ಎನ್ನಿರಯ್ಯಾ' ಎನ್ನುವ ಸಮಾನತೆಯನ್ನು ತಿಳಿಸಿ, ಉತ್ತಮ ಆಚರಣೆ, ಜಾರಿಗೆ ತಂದಂತಹ 'ಕೂಡಲ ಸಂಗನ ಶರಣರು ಸ್ವತಂತ್ರ ಧೀರರು" ಎಂದು ಪ್ರಶಂಸಿಸಿದರು.

ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಅರವಿಂದ ಜತ್ತಿಯವರು ಕಾರ್ಯಕ್ರಮ ಅರ್ಥಪೂರ್ಣವಾಗಿ ಜರುಗಿದೆ. ಯಾರೂ ದುರ್ಬಲರಲ್ಲ. ಪ್ರಯತ್ನ ಮಾಡಿದರೆ ಏನನ್ನೂ ಸಾಧಿಸಬಹುದು. ಬಸವಧರ್ಮ ಒಂದು ಸಾರ್ವತ್ರಿಕ ಧರ್ಮವಾಗಿದೆ. ನೈತಿಕ ಮೌಲ್ಯ, ಚಾರಿತ್ರಿಕ ಹಿನ್ನೆಲೆ, ಮನುಷ್ಯನ ಜೀವನಕ್ಕೆ ಅವಶ್ಯಕ ಹಾಗೂ ಜೀವನಕ್ಕೆ ದಾರಿದೀಪವಾಗಬೇಕು ಎಂದು ನುಡಿದರು.

ಶ್ರೀ ಮಹಾಂತದೇವರು, ಕರೋಲ್‌ಬಾಗ್ ಅವರು ಇತರರಿಗೆ ಪರೋಪಕಾರ ಮಾಡುವ ಶರಣಧರ್ಮ ಪಾಲಿಸಿದಾಗ ಮಾತ್ರ ಮಾನವ ಧರ್ಮ ಸಾರ್ಥಕ ಎಂದು ಆಶೀರ್ವಚನ ನೀಡಿದರು.

ತದನಂತರ 'ಮರಣವೇ ಮಹಾನವಮಿ' ಎಂಬ ನಾಟಕವನ್ನು ಚಿತ್ರದುರ್ಗ ಜಿಲ್ಲೆಯ ಸಾಣೇಹಳ್ಳಿ ಶಿವಕುಮಾರ್ ಕಲಾ ಸಂಘದ ಕಲಾವಿದರು ಧನಂಜಯ ದಢಗರವರ ನಿರ್ದೇಶನದಲ್ಲಿ 12ನೇ ಶತಮಾನದಲ್ಲಿ ನಿಜವಾಗಿ ಘಟಿಸಿದ ಅಂತರ್ಜಾತಿಯ ವಿವಾಹ ಹಾಗೂ ಆ ಕಾಲದಲ್ಲಿ ಜನರಿಗಾದ ಶೋಷಣೆಯ, ರಕ್ತಕ್ರಾಂತಿಯ ಚಿತ್ರವನ್ನು ಮನೋಜ್ಞವಾಗಿ ಅಭಿನಯಿಸಿ ತೋರಿಸಿದರು.

ಡಾ. ಸುಮಂಗಲಾದೇವಿ

Delhi Karnataka Sangha's Abhimatha Monthly,
April-2011, Price Rs.1/- RNI Regn. No. 53405/91, DL-SW-15/4016/10-11-12
Printout Date : April 8th / 9th, Postal Date :10th / 11th, Total Pages-24

ದಕ್ಷಿಣ ಭಾರತದ ಅಪ್ಪಟ ಕಾಟನ್ ಸೀರೆಗಳು
ಕಾಟನ್ ಸಲ್ವಾರ್-ಕಮೀಜ್, ಮೈಸೂರು ಸಿಲ್ಕ್
ಕಾಂಜೀವರಂ ಸಿಲ್ಕ್, ಮದುರೈ ಸ್ಪೆಶಲ್ ಕಾಟನ್ ಸೀರೆ,
ಬೆಂಗಳೂರು ಕಾಟನ್ ಶರ್ಟ್‌ಗಳು

ಹಾಗೂ

ಮಂಗಳೂರು ಧೋತರಗಳು, ಮೈಸೂರು ಅಗರಬತ್ತಿ,
ಮೈಸೂರು ಸ್ಯಾಂಡಲ್ ಸೋಪ್
ಆಕರ್ಷಕ ಬೆಲೆಗಳಲ್ಲಿ
ಕೆಲವೇ ದಿನಗಳ ತನಕ ವಿಶೇಷ ಮಾರಾಟ

15% ಕಡಿತ



ಯುಗಾದಿ ಹಬ್ಬದ
ಶುಭಾಶಯಗಳು





ಸ್ಥಳ

ಪವಿತ್ರ ಸಿಲ್ಕ್ಸ್ ಆಂಡ್ ಫ್ಯಾಬ್ರಿಕ್ಸ್
ದೆಹಲಿ ಕರ್ನಾಟಕ ಸಂಘ, ರಾವ್ ತುಲಾರಾಂ ಮಾರ್ಗ
ಸೆಕ್ಟರ್-12, ಆರ್.ಕೆ.ಪುರಂ, ಹೊಸದೆಹಲಿ-110022
011-32429667, 9313869163, 931022273
ಸಮಯ : ಬೆಳಗ್ಗೆ 10.30ರಿಂದ ರಾತ್ರಿ 9.00ಗಂಟೆಯ ತನಕ

Editor: Smt.Usha Bharatadri, Printed & Published by C.M.Nagaraja General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at R.V. Printing Press, C-97, Okhla Industrial Area, Phase-I, New Delhi-110020, Tel: 26815778, 40545298,